Editor: NITYANANDASWAMI Publisher: U. BASAVARAJA


RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–24 ಜೂನ್ 12–18, 2023 ಪುಟ 16 ರೂ. 10/–

Volume-17 Issue-24 June 12-18, 2023 Pages:16 Price: 10/-





ಕೊಡುಗೆಗಳು ಮತ್ತು ರಾಜಕಾರಣ

ಬಾಲಾಸೋರ್ ರೈಲು ದುರಂತದ ಪಾಠಗಳು



ಕಲ್ಬುರ್ಗಿ:

- ಕಾಂಗ್ರೆಸ್ ನ ಸ್ಥಾನ ಹೆಚ್ಚಳ ಸಡಿಲಗೊಳ್ಳದ ಬಿಜೆಪಿ ಹಿಡಿತ

ಕೇರಳ:

ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕೆಗಳು – ಒಂದು ನೋಟ

- ಜಾತಿ ಗಣತಿ ಸಮೀಕ್ಷೆ ವರದಿ: ಎಲ್ಲವೂ ಪಾರದರ್ಶಕವಾಗಿರಲಿ

ಕಾಂಗ್ರೆಸ್ ಗೆ ಹೆಚ್ಚಿದ ಸ್ಥಾನಗಳು
ಗಟ್ಟಿಗೊಳ್ಳುತ್ತಿರುವ ಆರ್.ಎಸ್.ಎಸ್. ಸಿದ್ಧಾಂತ
ದುರ್ಬಲವಾಗುತ್ತಿರುವ ಮೂರನೆಯ ಪರ್ಯಾಯ

ನೀಲಾ ಕೆ.

ಕಲ್ಬುರ್ಗಿ ಜಿಲ್ಲೆಯಲ್ಲಿ ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸ್ಥಾನಗಳು ಹೆಚ್ಚಿದವು. ಜೊತೆಗೆ ಸ್ವಲ್ಪಮಟ್ಟಿಗೆ ಮತದ ಪ್ರಮಾಣವು ಹೆಚ್ಚಿದೆ. ಎರಡು ಕ್ಷೇತ್ರಗಳನ್ನು ಹೊರತು ಪಡಿಸಿದರೆ ಬಿಜೆಪಿ ಸೋತಿದೆ. ಆದರೆ ಮತದಾರರ ಅದರ ನೆಲೆ ಕುಸಿದಿಲ್ಲ, ಬದಲಾಗಿ ವಿಸ್ತರಿಸಿದೆ. ಅಷ್ಟು ಮಾತ್ರವಲ್ಲ ಜನ ಮಾನಸದೊಳಗೆ ಹಿಂದುತ್ವದ ಕೋಮುವಾದ ಬೇರೂರ ತೊಡಗಿದೆ. ಆತಂಕದ ಸಂಗತಿ ಎಂದರೆ ಎಡಪಕ್ಷಗಳ ಶಕ್ತಿ ಕುಸಿಯುತ್ತಿರುವುದು! ಮೂರನೇ ಪರ್ಯಾಯ ದುರ್ಬಲವಾಗುತ್ತಿರುವ ಒಂದು ಸ್ಪಷ್ಟ ಸೂಚನೆ ಈ ಕುರಿತು ಚುನಾವಣಾ ಫಲಿತಾಂಶಲ್ಲಿದೆ ಎನ್ನುತ್ತಾರೆ ಫಲಿತಾಂಶ ವಿಶ್ಲೇಷಣೆ ಮಾಡಿರುವ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ಕೆ ನೀಲಾ ಅವರು. ಜಿಲ್ಲೆಯ ರಾಜಕೀಯ ಬೆಳವಣಿಗೆಗಳ ಗಹನ ಅಂಶಗಳು ಇಲ್ಲಿವೆ. ಓದಿ.

ಕಲಬುರಗಿ ಜಿಲ್ಲೆಯು ರಾಜಕೀಯವಾಗಿಯೂ ವೈಚಾರಿಕವಾದ ಸೌಹಾರ್ದ ಪರಂಪರೆಯಲ್ಲಿಯೂ ವಿಶಿಷ್ಟವಾದ ಜಿಲ್ಲೆಯಾಗಿದೆ. ದುಡಿಯುವ ವರ್ಗದ ಚಳುವಳಿಗೂ ಜಿಲ್ಲೆಯು ಹೆಸರುವಾಸಿಯಾಗಿದೆ. 1960 ನಂತರದಲ್ಲಿ ಎರಡು ದಶಕಗಳಲ್ಲಿ ಅಕ್ಷರಶಃ ಕಮ್ಯೂನಿಸ್ಟ್ ಚಳುವಳಿಯು ನೀತಿ ನಿರೂಪಣಾ ಸ್ಥಾನದಲ್ಲಿದ್ದಿದ್ದು ಹೌದು. ಕಲಬುರಗಿಯಲ್ಲಿ ಶಹಾಬಾದ ಮತ್ತು ಕಲಬುರಗಿ ನಗರದಲ್ಲಿ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿದ್ದರು. ಸಿಮೆಂಟ್ ಇಂಡಸ್ಟ್ರಿ ಶಹಾಬಾದನಲ್ಲಿ ಎಂ ಎಸ್ ಕೆ ಮಿಲ್ (ಕಾಟನ್ ಮಿಲ್) ಕಲಬುರಗಿಯಲ್ಲಿ ಸಾವಿರಾರು ಕಾರ್ಮಿಕರನ್ನು ಹೊಂದಿದ್ದವು. ಹೀಗಾಗಿ ಅರವತ್ತರ ದಶಕದಿಂದ ಎಂಬತ್ತರ ದಶಕದವರೆಗೆ ಜಿಲ್ಲೆಯಲ್ಲಿ ಕೆಂಬಾವುಟವು ಮುಗಿಲೆತ್ತರಕ್ಕೆ ಹಾರಾಡಿದ ದಿನಗಳವು. 1962ರಲ್ಲಿಯೇ ಕಲಬುರಗಿ ನಗರದಿಂದ ಭಾರತ ಕಮ್ಯೂನಿಸ್ಟ್ ಪಕ್ಷದಿಂದ ಅಸೆಂಬ್ಲಿ ಚುನಾವಣೆಯಲ್ಲಿ ಕಾ.ಗಂಗಾಧರ ನಮೋಶಿ ಆಯ್ಕೆಯಾಗಿದ್ದರು. ಇದು ಕಲಬುರಗಿ ಜಿಲ್ಲೆಯಲ್ಲಿ ಕಮ್ಯೂನಿಸ್ಟರು ಚುನಾವಣೆ ಮೂಲಕ ಆಯ್ಕೆಯಾದ ಮೊದಲ ಕ್ಷೇತ್ರವಾಗಿತ್ತು. ಕಮ್ಯೂನಿಸ್ಟ್ ಖಾತೆ ತೆರೆದಂತಾಯಿತು. 1964 ರಲ್ಲಿ ಕಾಮ್ರೇಡ್ ಗಂಗಾಧರ ನಮೋಶಿ ಯವರು ಸಿಪಿಐನಿಂದ ಸಿಪಿಐಎಂಗೆ ಸೇರ್ಪಡೆಯಾದರು. ನಂತರ ಎರಡು ಬಾರಿ ಸ್ಪರ್ಧಿಸಿದ್ದರು. ಆದರೆ ಗೆಲುವಾಗಲಿಲ್ಲ. 1978ರಲ್ಲಿ ಸಿಪಿಐನಿಂದ ಕಾ ಶರಣಪ್ಪ ಭೈರಿಯವರು ಶಹಬಾದ ಕ್ಷೇತ್ರದಿಂದ ಆಯ್ಕೆಯಾದರು. ನಂತರ ಇದೇ ಕ್ಷೇತ್ರದಿಂದ ಕಾ. ಕೆ.ಬಿ.ಶಾಣಪ್ಪ ಎರಡು ಬಾರಿ ಆಯ್ಕೆಯಾದರು.

1986–87 ರಲ್ಲಿ ಚಿಂಚನಸೂರು ಕ್ಷೇತ್ರದಿಂದ ಜಿಲ್ಲಾ ಪಂಚಾಯತನಲ್ಲಿ ಸಿಪಿಐ(ಎಂ) ಅಭ್ಯರ್ಥಿ ಕಾ.ಮಾರುತಿ ಮಾನ್ಪಡೆ ಆಯ್ಕೆಯಾದರು. ಎರಡನೆಯ ಬಾರಿಗೆ 1995 ರಲ್ಲಿ ಮತ್ತೆ ಸಿಪಿಐ(ಎಂ) ಸ್ಪರ್ಧಿಸಿ ಜಿ.ಪಂ.ನಲ್ಲಿ ಕಾ.ಮೇಘರಾಜ ಕಠಾರೆ ಆಯ್ಕೆಯಾದರು. 2001 ಜಿಲ್ಲಾ ಪಂಚಾಯತನಲ್ಲಿ ಸೋತಾಗ ಹಿಂದಿಗಿಂತಲೂ ಹೆಚ್ಚು ಮತಗಳು ಪಡೆದಿದ್ದೇವು (6500). ಮೂರು ತಾಲ್ಲೂಕು ಪಂಚಾಯತ ಸದಸ್ಯರು ಒಂದು ಬಾರಿ ಆಯ್ಕೆಯಾಗಿದ್ದರೆ ಎರಡು ಅವಧಿಗೆ ತಲಾ ಒಬ್ಬೊಬ್ಬರು ತಾಲ್ಲೂಕು ಪಂಚಾಯತ್ ಸದಸ್ಯರು ಪಕ್ಷದಿಂದ ಆಯ್ಕೆಯಾಗಿದ್ದಾರೆ. ಚಿಂಚೋಳಿಯ ರಟಕಲ್ ಕ್ಷೇತ್ರದಿಂದ ಒಂದು ತಾಲ್ಲೂಕು ಪಂಚಾಯತ್ ಸ್ಥಾನ ಪಡೆದಿದ್ದೇವೆ.

1984 ರಲ್ಲಿ ಚಿಂಚನಸೂರು, ಅಂಬಲಗಾ ಗ್ರಾಮ ಪಂಚಾಯತಗಳಲ್ಲಿ ಆಡಳಿತ ನಡೆಸಿದ್ದು ಸಿಪಿಐ(ಎಂ). ವಿಕೆ ಸಲಗರ್, ಮುಗುಳಿಯಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಸಿಪಿಐ(ಎಂ) ಪಕ್ಷದ ಸದಸ್ಯರಾಗಿದ್ದ ಕಾಮ್ರೇಡ್. ಮಾಧುರಾಯ ಧನ್ನೂರ ಅವರು ವಿ.ಕೆ.ಸಲಗರ ಮಂಡಲ ಪಂಚಾಯತ್‌ನಲ್ಲಿ ಸದಸ್ಯರಾಗಿದ್ದರು. ರಾಜಕೀಯ ದ್ವೇಷಕ್ಕಾಗಿ ಕಾ.ಮಾಧುರಾಯ ಧನ್ನೂರು ಅವರ ಕೊಲೆಯಾಯಿತು. ಅದರ ವಿರುದ್ಧ ಬಹು ದೊಡ್ಡ ಪ್ರಮಾಣದಲ್ಲಿ ಪಕ್ಷವು ಹೋರಾಟ ನಡೆಸಿದ್ದು ಈಗ ಇತಿಹಾಸ.

1987ರಲ್ಲಿ ಅಂಬಲಗಾ ಮಂಡಲ ಪಂಚಾಯತ್ ಪ್ರದಾನ ಆಗಿ ಕಾ.ಮೇಘರಾಜ ಕಠಾರೆ, ಉಪಪ್ರದಾನ ಆಗಿ ದಲಿತ ಮಹಿಳೆ ರಾಜಮ್ಮ ಆಯ್ಕೆಯಾಗಿದ್ದರು. ಚಿಂಚನಸೂರ ಗ್ರಾಮ ಪಂಚಾಯತನಲ್ಲಿ ಒಬ್ಬ ದೇವದಾಸಿ ಮಹಿಳೆ ಕಸ್ತೂರಿಬಾಯಿ ಉಪಾಧ್ಯಕ್ಷಳಾಗಿದ್ದರು. ಐದು ಜನ ಮಹಿಳೆಯರು ಬೇರೆ ಬೇರೆ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾಗಿಯೂ ಇದ್ದರು. ಮತ್ತು ಅವರೆಲ್ಲರೂ ಸಿಪಿಐ(ಎಂ) ಪಕ್ಷದ ಸದಸ್ಯರೇ ಆಗಿದ್ದರು.

ಈಗ ಭೀಮೆ–ಕೃಷ್ಣೆನದಿಯಲ್ಲಿ ಬಹಳಷ್ಟು ನೀರು ಹರಿದು ಹೋಗಿದೆ. ಸಿಮೆಂಟ್ ಫ್ಯಾಕ್ಟರಿಯಲ್ಲಿ ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ಕಾರ್ಮಿಕರ ನೇಮಕಾತಿಗಳು ನಡೆದಿವೆ. ಗುಲಬರ್ಗಾದ ಸುಪ್ರಸಿದ್ಧ ಎಂ ಎಸ್ ಕೆ ಮಿಲ್ ಮುಚ್ಚಿ ಹೋಯಿತು. ಸಂಘಟಿತ ವಲಯದ ಬಹುದೊಡ್ಡ ವಿಭಾಗವು ಪಕ್ಷದ ಕಕ್ಷೆಯಿಂದ ಇಲ್ಲದಂತಾಯಿತು. ಕಾರ್ಮಿಕರ ಸಂಘಟನೆಗಳು ಇವೆ. ಆದರೆ ರಾಜಕೀಯವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಮತಗಳಾಗಿ ಬಂದಿವೆಯೇ ಬರುತಿವೆಯೇ ಎಂಬುದು ವಿಶ್ಲೇಷಣೆ ಮಾಡಬೇಕಾದದ್ದು. ಸ್ಕೀಮ್ ವರ್ಕರ್ ಮತ್ತು ಪಂಚಾಯತ್ ವರ್ಕರ್ ದೊಡ್ಡ ಪ್ರಮಾಣದಲ್ಲಿದ್ದಿರುವುದು ಹೌದು.

ಒಟ್ಟಾರೆ ಜಿಲ್ಲೆಯಲ್ಲಿ ಬಂಡವಾಳಶಾಹಿ ಪಕ್ಷಗಳು ಕ್ರಮೇಣ ಮುನ್ನೆಲೆಗೆ ಬಂದವು. ಮತ್ತು ಮತಬ್ಯಾಂಕ್‌ಗಳನ್ನು ಸೆಳೆದವು. ಇದೇ ಸಂದರ್ಭದಲ್ಲಿ ಮೂರನೆಯ ರಾಜಕೀಯ ಶಕ್ತಿಯಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಜಾತ್ಯಾತೀತ ರಾಜಕೀಯ ಶಕ್ತಿಗಳ ಮತ್ತು ಬಂಡವಾಳಶಾಹಿ ಶಕ್ತಿಗಳ ಬಲಾಬಲ ಗಮನಿಸಬೇಕಿದೆ. ಜಿಲ್ಲೆಯಲ್ಲಿ ಬಿಜೆಪಿ ಕಾಂಗ್ರೆಸ್ ತನ್ನ ಮತಗಳ ಪ್ರಮಾಣದಲ್ಲಿ ಹೆಚ್ಚಳ ಮಾಡಿಕೊಂಡಿವೆ. ಇದೇ ಸಂದರ್ಭದಲ್ಲಿ ಸಿಪಿಐ, ಸಿಪಿಐ(ಎಂ) ಮತ್ತು ಎಸ್.ಯು.ಸಿ.ಐ(ಸಿ) ಮತಗಳಲ್ಲಿ ಕುಸಿತ ಕಂಡಿದ್ದೇವೆ. ಎಡ ಪಕ್ಷಗಳ ಮತ ಕುಸಿತ ಅತ್ಯಂತ ಚಿಂತಾಜನಕ ಸಂಗತಿಯಾಗಿದೆ. ಮೂರನೆಯ ರಾಜಕೀಯ ಶಕ್ತಿಯೇ ಇಲ್ಲದಂತೆ ಏಕಮುಖವಾದ ಬಂಡವಾಳಶಾಹಿ ರಾಜಕೀಯ ಶಕ್ತಿಗಳ ಪ್ರಾಬಲ್ಯವು ಪ್ರಜಾಪ್ರಭುತ್ವದ ಹಿನ್ನಡೆಗೆ ಕಾರಣವಾಗುವುದು. ಇಂತಹ ಸಂದರ್ಭದಲ್ಲಿ ದುಡಿಯುವ ವರ್ಗದ ಮೇಲೆ ದಮನ ಧಾಳಿ ಹೆಚ್ಚುವವು.

ಕಮಲಾಪುರ ಮತ ಕ್ಷೇತ್ರದಲ್ಲಿ

ಕಮಲಾಪುರ ವಿಧಾನ ಸಭಾ ಮತಕ್ಷೇತ್ರದ ಮತಗಳ ತುಲನೆ ಮಾಡಬಹುದು. ಕಾಂಗ್ರೆಸ್ 1999ರಲ್ಲಿ 18,981 ಪಡೆದರೆ ಬಿಜೆಪಿಯು 27,531 ಪಡೆದಿತ್ತು. ಸಿಪಿಐ(ಎಂ) ಪಕ್ಷವು 14,043 ಪಡೆದಿತ್ತು. ಜೆಡಿಎಸ್ 6231 ಪಡೆದಿದೆ. ನಂತರ 2004 ರಲ್ಲಿ ಕಾಂಗ್ರೆಸ್ 23,740 ಪಡೆದಿದೆ, ಬಿಜೆಪಿಯು 28,607 ಮತಗಳನ್ನು ಪಡೆದಿದೆ. ಸಿಪಿಐಎಂ 15,296 ಪಡೆದಿದೆ. 2008 ರಲ್ಲಿ ಕಾಂಗ್ರೆಸ್ 24,116 ಪಡೆದರೆ ಬಿಜೆಪಿಯು 41,239 ಮತಗಳು ಪಡೆದಿದೆ. ಹೆಚ್ಚು ಕಡಿಮೆ ಅದು ದುಪ್ಪಟ್ಟು ಮತಗಳನ್ನು ಪಡೆದಿದೆ. ಇದೇ ಸಂದರ್ಭದಲ್ಲಿ



ಸಿಪಿಐ(ಎಂ)ನ ಮತ 10,881 ಕ್ಕೆ ಇಳಿದಿದೆ. ಜೆಡಿಎಸ್ 20,247 ಪಡೆದಿದೆ. ಕಾಂಗ್ರೆಸ್ ನಂತೆ ಜೆಡಿಎಸ್ ಸಹ ಡಬಲ್ ಮತಗಳನ್ನು ಗಳಿಸಿದೆ. 2013 ರಲ್ಲಿ ಕಾಂಗ್ರೆಸ್ 40,075 ಪಡೆದಿದೆ. ಅಂದರೆ ಹಿಂದಿಗೆ ಹೋಲಿಸಿದರೆ ಎರಡು ಪಟ್ಟು ಮತಗಳು. ಬಿಜೆಪಿಯೂ 32,866 ಗಳಿಸಿದೆ. ಹಿಂದಿಗೆ ಹೋಲಿಸಿದರೆ ಸ್ವಲ್ಪ ಇಳಿಮುಖವಾಗಿದೆ. ಸಿಪಿಐ(ಎಂ) 4,694 ಕ್ಕೆ ಇಳಿದಿದೆ. ಜೆಡಿಎಸ್ 8,612 ಕ್ಕೆ ಕುಸಿದಿದೆ. ಕೆಜೆಪಿಯು 26,612 ಮತಗಳನ್ನು ಪಡೆದಿದೆ. ಬಿಜೆಪಿಯಿಂದ ಹೊರಬಂದ ಯಡಿಯೂರಪ್ಪ ರಚಿಸಿದ ಪಕ್ಷ ಕೆಜೆಪಿ. 2018 ರಲ್ಲಿ 49,364 ಕಾಂಗ್ರೆಸ್ ಪಡೆದಿದೆ. ಈಗ ಬಿಜೆಪಿಯು (ಕೆಜೆಪಿ ಅಂಗಡಿ ಮುಚ್ಚಲಾಗಿತ್ತು) 61,750 ಮತಗಳನ್ನು ಪಡೆದು ಆಯ್ಕೆಯಾಗಿದೆ. ಅಂದರೆ ಬಿಜೆಪಿಯ ಮತಗಳಲ್ಲಿ ನಿರಂತರ ಏರುಗತಿ ಕಾಣಬಹುದು. ನಂತರ ಏರುಗತಿ ಕಾಂಗ್ರೆಸ್ ನಲ್ಲಿಯೂ ಕಾಣಬಹುದು. ಸಿಪಿಐ(ಎಂ) 3,491 ಕ್ಕೆ ಇಳಿಯಿತು. ಜೆಡಿಎಸ್ ಮತ್ತೆ 29,538 ಕ್ಕೆ ತನ್ನ ಬಲ ಹೆಚ್ಚಿಸಿಕೊಂಡಿತು. 2023 ರಲ್ಲಿ ಕಾಂಗ್ರೆಸ್ 71,839 ಪಡೆದರೆ ಬಿಜೆಪಿಯು 84466 ಪಡೆದಿದೆ. ಸಿಪಿಐಎಂ 822 ಕ್ಕೆ ಕುಸಿದಿದೆ. ಜಿಲ್ಲೆಯಲ್ಲಿ ಎಸ್ ಯು ಸಿ ಐ ಮತ್ತು ಸಿ ಪಿ ಐ ಮತಗಳಿಕೆಯಲ್ಲೂ ಕುಸಿತ ನೋಡಬಹುದು. ಇದರ ವಿಶ್ಲೇಷಣೆ ಹೇಗೆ ಮಾಡುವುದು? ಜನರು ನಿರುದ್ಯೋಗ ಬಡತನ, ಕೃಷಿ ಬಿಕ್ಕಟ್ಟು, ಆರೋಗ್ಯ ಸೌಲಭ್ಯದಿಂದ ವಂಚಿತ ಹೀಗೆ ನಾನಾ ಸಮಸ್ಯೆಗಳನ್ನು ದಿನನಿತ್ಯ ಎದುರಿಸುತ್ತಿದ್ದಾರೆ. ಆದಾಗ್ಯೂ ಎರಡು ಬಂಡವಾಳಶಾಹಿ ಪಕ್ಷಗಳು ಜನರ ಸಮಸ್ಯೆಗೆ ಸ್ಪಂಧಿಸಿಲ್ಲವಾದರೂ ತಮ್ಮ ಮತ ಗಳಿಕೆಯಲ್ಲಿ ಹಿಂದೆ ಬಿದ್ದಿಲ್ಲ. ಈ ಬಾರಿ ಚುನಾವಣೆಯಲ್ಲಿ ನೂರಾರು ಕೋಟಿ ಹಣ ಹಂಚಿದ್ದು ಎರಡೂ ಪಕ್ಷಗಳೇ. ಹಣ ಹಂಚಿಕೆಯಲ್ಲಿ ಎಡಪಕ್ಷಗಳು ಸೊನ್ನೆ ಸ್ಥಾನದಲ್ಲಿವೆ. ಜೆಡಿಎಸ್ ಗೂ ಕಾಂಗ್ರೈ, ಬಿಜೆಪಿಯಷ್ಟು ಶಕ್ತಿಯಿಲ್ಲ. ಜೇವರ್ಗಿ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಪಡೆದ ಮತಗಳು ಅರವತ್ತು ಸಾವಿರಕ್ಕೂ ಅಧಿಕ. ಕಾಂಗ್ರೆಸ್ ಪರವಾದ ಅಲೆಯು ಈ ಬಾರಿ ಜೋರಾಗಿಯೇ ಬೀಸಿದೆ. ಜನರಿಗೆ ಪರ್ಯಾಯ ಮತ್ತು ತಮ್ಮ ಸಮಸ್ಯೆಗೆ ಪರಿಹಾರ ಕಾಣಿಸುವ ಪರ್ಯಾಯದ ಹುಡುಕಾಟವಿತ್ತು. ಆಗ ಭರವಸೆ ತಂದಿದ್ದು ಕಾಂಗ್ರೆಸ್ ನ ಗ್ಯಾರಂಟಿ ಕಾರ್ಡ್. ಬಿಜೆಪಿಯ ಕೋಮುದ್ವೇಷದಿಂದ ಜನರು ರೋಸಿ ಹೋಗಿದ್ದರು. ಅದರಲ್ಲಿಯೂ ಮುಸ್ಲಿಂ ಸಮುದಾಯವು ಅತ್ಯಂತ ಆತಂಕದಲ್ಲಿ ದಿನಗಳನ್ನು ಕಳೆದಿದೆ. ಆತಂಕ, ಭಯ ತಲ್ಲಣವಿಲ್ಲದ ಬದುಕಿಗಾಗಿ ಮುಸ್ಲಿಂ ಸಮುದಾಯ ತಹತಹಿಸಿದೆ. ಅತ್ಯಂತ ಸೌಹಾರ್ದ ಜಿಲ್ಲೆಯಾದ ಕಲಬುರಗಿಯ ಆಳಂದನಲ್ಲಿ ಲಾಡ್ಲೆ ಮಷಾಕ್ ದರ್ಗಾದಲ್ಲಿನ ಶಿವಲಿಂಗದ ನೆಪದಲ್ಲಿ ಕೋಮುದ್ವೇಷ ಬಿತ್ತಿದ್ದು ಬಿಜೆಪಿ. ಜೇವರ್ಗಿಯ ಆಂದೋಲಾದ ಸ್ವಯಂಘೋಷಿತ ಸ್ವಾಮಿಯೊಬ್ಬ ಕಾಂಗ್ರೆಸ್ ನ ಪೋಷಣೆಯಲ್ಲಿಯೂ ಬೆಳೆದಿದ್ದಾನೆ. ಶ್ರೀರಾಮ ಸೇನೆ ಮತ್ತು ವಿಶ್ವ ಹಿಂದೂ ಪರಿಷತ್ ಹೆಸರಿನಲ್ಲಿ ಕೋಮುದಂಗೆಗಾಗಿ ಬೇಕಾದ ಭೂಮಿಕೆ ಸಿದ್ಧಗೊಳಿಸುವಲ್ಲಿ

ಪುಟ 6 ಕ್ಕೆ

		ಕಾಂಗ್ರೆಸ್			ಬಿಜೆಪಿ			ಜೆಡಿ(ಎಸ್)		
ಕ್ರ.ಸಂ.	ವಿಧಾನಸಭಾ ಕ್ಷೇತ್ರ	2018	2023	% Change	2018	2023	% Change	2018	2023	% Change
1	ಕಲಬುರಗಿ ಉತ್ತರ	64,311	**80,973**	+ 25.91%	58,371	78,261	+ 34.1 %	14,422	17,114	+ 18.7 %
2	ಕಲಬುರಗಿ ದಕ್ಷಿಣ	59,357	**87,345**	+ 47.2 %	64,788	66,297	+ 2.33 %	14,359	1,409	_ 90.2 %
3	ಕಲಬುರಗಿ ಗ್ರಾಮಾಂತರ	49,364	71,839	+ 45.5 %	61,750	**84,466**	+ 36.8 %	**3,491** ಸಿಪಿಎಂ	**822** ಸಿಪಿಎಂ	**_ 76.5 %**
4	ಅಫ್ಜಲ್‌ಪುರ	71,735	**56,313**	_ 21.5 %	61,141	31,394	_ 48.7 %	13,340	8,153	_ 38.8 %
5	ಆಳಂದ	76,118	**89,508**	+ 17.6 %	76,815	79,160	+ 3.1 %	1,387	1,419	+ 2.31 %
6	ಚಿಂಚೋಳಿ	73,905	69,105	_ 6.5 %	54,693	**69,963**	+ 27.92 %	386	6,555	+ 1598 %
7	ಚಿತ್ತಾಪುರ	69,700	**81,323**	+ 16.7 %	65,307	67,683	+ 3.64 %	---	643	+ 100 %
8	ಜೇವರ್ಗಿ	68,508	**70,810**	+ 3.4 %	52,452	29,564	_ 43.64 %	35,691	60,532	+ 69.6 %
9	ಸೇಡಂ	73,468	**93,377**	+ 27.1 %	80,668	49,816	_ 38.2 %	2,075	21,125	+ 918.1 %
		6,06,466	**7,00,593**	**+ 15.5 %**	**4,95,317**	**5,56,604**	**+ 12.4 %**	**81,660**	**1,16,950**	**+ 43.22 %**
More/Less Votes in 2023 than 2018			**+ 94,127**			**+ 61,287**	(CPM not added)		**+ 35,290**	

ಸಂಪಾದಕೀಯ

ಜಾತಿ ಗಣತಿ ವರದಿ ಅಂಗೀಕಾರ
ಪಾರದರ್ಶಕತೆ, ಪ್ರಾಮಾಣಿಕ ಬದ್ಧತೆ ಅಗತ್ಯ

ಜಾತಿ ಗಣತಿಯೆಂದೇ ಕರೆಯಲಾಗುತ್ತಿರುವ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಹೆಚ್.ಕಾಂತರಾಜು ಅವರ ನೇತೃತ್ವದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ವರದಿಯನ್ನು ಅಂಗೀಕರಿಸುವುದಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಹೇಳಿರುವುದು ಮಹತ್ವದ ಸಂಗತಿಯಾಗಿದೆ. 2013–18 ರ ಅವಧಿಯಲ್ಲಿ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ 2015 ನೆಯ ಇಸ್ವಿಯಲ್ಲಿ ನೇಮಿಸಲಾಗಿದ್ದ ಆಯೋಗ 2016 ರಲ್ಲಿ ಸುಮಾರು 20 ಸಂಪುಟಗಳ ವಿಸ್ತೃತ ವರದಿಯನ್ನು ನೀಡಿತ್ತು ಆದರೆ ಅದನ್ನು ಹಾಗೇ .ಮುಚ್ಚಿಟ್ಟಿದ್ದು ತೀವ್ರ ಚರ್ಚೆ, ವಿವಾದಗಳಿಗೆ ಕಾರಣವಾಗಿತ್ತು. ಬಹು ಚರ್ಚಿತ, ಬಹು ಮಹತ್ವದ ಈ ವರದಿಯನ್ನು ಕಾಂಗ್ರೆಸ್ ನಂತರದಲ್ಲಿ ಬಂದ ಜೆಡಿ ಎಸ್ ನ ಹೆಚ್.ಡಿ.ಕುಮಾರಸ್ವಾಮಿ ಯವರ ಮೈತ್ರಿ ಸರ್ಕಾರ, ನಂತರದ ಬಿಜೆಪಿಯ ಯಡ್ಯೂರಪ್ಪ, ಬಸವರಾಜ ಬೊಮ್ಮಾಯಿ ಯವರ ಸರ್ಕಾರ ಅದನ್ನು ತೆರೆದಿಡುವ ಧೈರ್ಯ ತೋರಲಿಲ್ಲ. ಬದಲಾಗಿ ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷಿಸಿದರು. ಸುಮಾರು 158 ಕೋಟಿ ರೂ.ಗಳನ್ನು ವ್ಯಯಿಸಿ ಸಿದ್ಧಗೊಳಿಸಲಾದ ವರದಿಯನ್ನು ಸರಕಾರ ಒಪ್ಪುವುದಿರಲಿ ಕನಿಷ್ಠ ಸಾರ್ವಜನಿಕರೆದುರು ಬಹಿರಂಗ ಪಡಿಸದೇ ಇದ್ದುದು ಅದು ಬೀರಬಹುದಾದ ರಾಜಕೀಯ ಬಲಾಬಲಗಳ ಮೇಲಿನ ತೀವ್ರ ಪರಿಣಾಮಗಳನ್ನು ಊಹಿಸಿಯೇ ಎಂಬುದು ಸ್ಪಷ್ಟವಿತ್ತು. ಅದೇ ರೀತಿ ಅಖಿಲ ಭಾರತ ಮಟ್ಟದಲ್ಲಿಯೂ ಭಾರತ ಸರ್ಕಾರ ನಡೆಸಿದ ಸಮೀಕ್ಷಾ ವರದಿಯನ್ನು ಬಹಿರಂಗಗೊಳಿಸಿಲ್ಲ ಎಂಬುದು ಇದೇ ಕಾರಣಕ್ಕಾಗಿ ಎಂಬುದನ್ನು ಗಮನಿಸಬೇಕು.

ಹೆಚ್.ಕಾಂತರಾಜು ಅವರು ನೀಡಿದ ವರದಿಯು ಕರ್ನಾಟಕದಲ್ಲಿನ 1351 ಅಲಕ್ಷಿತ ಜಾತಿಗಳನ್ನು ಪರಿಗಣಿಸಿ, 192 ಹೊಸ ಜಾತಿಗಳ ಗಣತಿಯನ್ನು, ಆರ್ಥಿಕ ಸಮೀಕ್ಷೆಯನ್ನು ಮಾಡಿದೆ ಎಂದು ಹೇಳಲಾಗುತ್ತಿದೆ. ಇದು ರಾಜಕೀಯ ಪ್ರಾತಿನಿಧ್ಯಕ್ಕೆ, ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಅಗತ್ಯವಿರುವ ವೈಜ್ಞಾನಿಕ ದತ್ತಾಂಶಗಳ ಆಧಾರವಾಗಲಿದೆ. ಇಂತಹ ಮಹತ್ವದ ವರದಿಯನ್ನು ಕೂಡಲೇ ಬಹಿರಂಗ ಪಡಿಸದೇ ಇರುವುದರಿಂದ ಹಲವಾರು ಊಹಾಪೋಹಗಳು, ಗೊಂದಲ, ವಿರೋಧಗಳಿಗೆ ಕಾರಣವಾಗಿದೆ. ಈ ನಡುವೆ ಮುಚ್ಚಿಟ್ಟ ಈ ವರದಿಯು ಮಾಧ್ಯಮಗಳಿಗೆ ಸೋರಿಕೆಯಾಗಿ ಹಲವು ವಿವರಗಳು ಹೊರ ಬಂದಿದ್ದವು. ಅದನ್ನೇ ಆಧರಿಸುವುದಾದರೆ ರಾಜ್ಯದಲ್ಲಿ ಇವೆಯೆಂದು ಸ್ಥೂಲವಾಗಿ ಬಿಂಬಿತವಾಗಿ, ಸಂಖ್ಯಾತ್ಮಕವಾಗಿ ಪ್ರಬಲ, ದುರ್ಬಲ ಎಂದು ಎಲ್ಲವಕ್ಕೂ ಪರಿಗಣಿಸಲ್ಪಡುತ್ತಿರುವ ಜಾತಿ ಸಮೀಕರಣವೇ ತಲೆಕೆಳಗಾಗುವಂತೆ ಕಾಣುತ್ತಿದೆ. ಅದರ ಸಮೀಕ್ಷೆಯ ಅಂಶಗಳಲ್ಲಿ ಸುಮಾರು 6 ಕೋಟಿ ಜನಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ.) 1.08 ಕೋಟಿ, ಇತರೆ ಹಿಂದುಳಿದ ಜಾತಿ ಜನರು (ಒ.ಬಿ.ಸಿ.) 70 ಲಕ್ಷ, ಮುಸ್ಲಿಮರು 70 ಲಕ್ಷ, ಲಿಂಗಾಯತರು 65 ಲಕ್ಷ, ಒಕ್ಕಲಿಗರು 60 ಲಕ್ಷ, ಕುರುಬರು 45 ಲಕ್ಷ, ಪರಿಶಿಷ್ಟ ಪಂಗಡ–ಎಸ್.ಟಿ. 40.45 ಲಕ್ಷ, ಬ್ರಾಹ್ಮಣರು 14 ಲಕ್ಷ ಎನ್ನಲಾಗಿದೆ. ಇಲ್ಲಿಯವರೆಗೂ ಬಿಂಬಿಸಲ್ಪಡುತ್ತಿದ್ದ ಮೇಲ್ಜಾತಿಗಳನ್ನೇ ಪ್ರಬಲ ಜಾತಿಗಳೆಂಬುದು ಬದಲಾಗುತ್ತದೆ. ಕೆಳ ಜಾತಿಗಳೇ ಬಹು ಸಂಖ್ಯೆಯಲ್ಲಿದ್ದು ಆದ್ಯತೆ ಪಡೆಯುತ್ತವೆ. ಅಭಿವೃದ್ಧಿ, ಯೋಜನೆ, ರಾಜಕೀಯ ಪ್ರಾತಿನಿಧ್ಯವೂ ಸಹ ಇದರ ಆಧಾರದಲ್ಲಿ ಮರು ರೂಪಿಸ ಬೇಕಾಗುತ್ತವೆ, ಸಂಪನ್ಮೂಲ, ಅಧಿಕಾರದಲ್ಲಿ ಪಾಲು ಹಂಚ ಬೇಕಾಗುತ್ತದೆ. ಜಾತಿ ಆಧಾರಿತ ಜನಸಂಖ್ಯೆಯನ್ನು ಗಮನಿಸಿದಾಗಲೂ ರಾಜ್ಯದ ಬಹು ಸಂಖ್ಯೆಯ ಜನ ಇನ್ನೂ ಆರ್ಥಿಕವಾಗಿ, ರಾಜಕೀಯವಾಗಿ ಅಸಮಾನ ಸ್ಥಿತಿಯಲ್ಲಿರುವುದು, ಅವಕಾಶ ವಂಚಿತವಾಗಿರುವುದೂ ಕಾಣುತ್ತದೆ. ಇದನ್ನು ಆಧರಿಸಿ ಸ್ಥಾನ ಪಲ್ಲಟಗಳು, ಪರಿಗಣನೆಗಳು ಮೊದಲ್ಗೊಳ್ಳುವುದನ್ನು ಇಂದಿನ 'ಪ್ರಬಲ' ಜಾತಿಗಳ ನಾಯಕರು ಒಪ್ಪುವರೇ? ಈ ವರದಿಯ ಅನುಷ್ಠಾನವಿರಲಿ, ಅದನ್ನು ತೆರೆದಿಡಲೂ ಕೆಲವು ಸ್ಥಾಪಿತ ಹಿತಾಸಕ್ತಿಗಳು ಹಿಂದಿನಿಂದಲೇ ಸಿದ್ಧವಿರಲಿಲ್ಲ, ಸಥ ಅಡ್ಡಿ ಪಡಿಸುತ್ತಲೇ ಇದ್ದವು.ಈಗಲೂ ಈ ವರದಿಯನ್ನು ಅಂಗೀಕರಿಸಲು ಪ್ರಮುಖ ವಿರೋಧ ಪಕ್ಷಗಳಾದ ಬಿಜೆಪಿ, ಜಾತ್ಯಾತೀತ ಜನತಾದಳ ತಕರಾರು ತೆಗೆದಿರುವುದನ್ನು ಗಮನಿಸಬೇಕು.

ಈ ವರದಿಯ ಕುರಿತು ಎತ್ತಲಾದ ಕೆಲವು ತಾಂತ್ರಿಕ, ಅಧ್ಯಯನದ ಮಿತಿ, ಮಾಹಿತಿಗಳ ಬಗ್ಗೆ ಸರಕಾರ ಸಹ ಮುಕ್ತ ಮನಸ್ಸಿನಿಂದ ಪರಿಶೀಲನೆ ನಡೆಸಬೇಕು. ಲಿಂಗಾಯತ ಒಳ ಪಂಗಡಗಳ ಪರಿಗಣನೆ, 2011 ರ ಸಾರ್ವತ್ರಿಕ ಜನಗಣತಿಯ ಮಾಹಿತಿಗಳಿಗೂ ಈ ಸಮೀಕ್ಷಾ ವರದಿಯ ಅಂಕಿ ಸಂಖ್ಯೆಗಳಿಗೂ ಕೊಂಚ ವ್ಯತ್ಯಾಸ ಇರುವ ಬಗ್ಗೆ ಬಂದ ಆಕ್ಷೇಪಗಳನ್ನು ಪರಿಶೀಲಿಸುವುದು ತಪ್ಪೇನಲ್ಲ. ಆ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಸರಕಾರಕ್ಕೆ ಸಾಧ್ಯವಾಗಬೇಕು. ಅದೇ ಹೊತ್ತಿನಲ್ಲಿ ಇರಬಹುದಾದ ಕೆಲವು ಕೊರತೆ, ನ್ಯೂನತೆಗಳನ್ನೇ ಮುಂದಿಟ್ಟು ವರದಿಯ ಅಂಗೀಕಾರ ವಿರೋಧಿಸುವುದು ಅದನ್ನು ನೆನೆಗುದಿಗಿಟ್ಟು ನಿರುಪಯುಕ್ತ ಗೊಳಿಸುವುದೂ ಸರಿಯಲ್ಲ. ಅಂತಹ ಪ್ರಯತ್ನಗಳಿಗೆ ಸರಕಾರ ಸೊಪ್ಪು ಹಾಕಬೇಕಿಲ್ಲ.

ಸಾಮಾಜಿಕ ನ್ಯಾಯದ ಬಗ್ಗೆ ಅತಿಯಾಗಿ ಮಾತನಾಡುವ ಆದರೆ ಅಂಶಿಕವಾಗಿ ಜಾರಿಗೊಳಿಸ ಬಯಸುವ ಸರಕಾರ ಈ ವರದಿಯ ಅಂಗೀಕಾರ, ಅಳವಡಿಕೆಯ ಜಾರಿ ಬಗ್ಗೆ ಧೃಡ ಬದ್ಧತೆ, ಪ್ರಾಮಾಣಿಕತೆಯನ್ನು ತೋರಬೇಕು. ಈ ವರದಿಯನ್ನು ಒಪ್ಪಿಕೊಳ್ಳಲು ಬಯಸಿರುವ ಕಾಂಗ್ರೆಸ್ ಸರ್ಕಾರ ವಾಸ್ತವದಲ್ಲಿ ಮುಂಬರುವ ಚುನಾವಣಾ ಲಾಭವನ್ನು ನಿರೀಕ್ಷಿಸುತ್ತಿರುವುದು ಕೂಡ ಸುಳ್ಳೇನಲ್ಲ. ಹಾಗೆ ಮಾಡುವಾಗಲೂ ಸಮಾಜದ ಎಲ್ಲಾ ಜನ ವಿಭಾಗಗಳಿಗೆ ಪರಿಪೂರ್ಣ ಮಾಹಿತಿಗಳನ್ನು ಒದಗಿಸಿ, ಸಾರ್ವತ್ರಿಕ ನೀತಿಯಾಗುವಂತೆ ನೋಡಿಕೊಳ್ಳ ಬೇಕು. ಸಮಾಜದ ಒಪ್ಪಿತ ಮೌಲ್ಯವಾಗಬೇಕು. ಆದ್ದರಿಂದ ಕರ್ನಾಟಕ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾದ ಕಾಂತರಾಜು ರವರ ನೇತೃತ್ವದ ವರದಿಯ ಎಲ್ಲಾ ಅಂಶಗಳು ಪಾರದರ್ಶಕವಾಗಿ ಜನರೆದುರು ಮಂಡಿತವಾಗಲಿ. ಇದಕ್ಕನುಗುಣವಾಗಿ ಹೊಸ ಚಿಂತನೆ, ಕಾರ್ಯಯೋಜನೆಗಳೂ ರೂಪುಗೊಳ್ಳಲಿ. ಈ ಕಾಲಘಟ್ಟದಲ್ಲಿ ದಮನಿತ ಸಮುದಾಯಗಳ ಪ್ರತಿಯೊಂದು ಹಕ್ಕುಗಳ ಪ್ರತಿಪಾದನೆ ಕೂಡ ಸಮಾನತೆ, ಸಾಮಾಜಿಕ ನ್ಯಾಯದ ನೈಜ ಪ್ರಜಾಸತ್ತಾತ್ಮಕ ಹಕ್ಕುಗಳ ಗಳಿಕೆಗೆ ಮಹತ್ವದ್ದಾಗಿವೆ.

ಬಿಜೆಪಿಯಲ್ಲಿ ಮುಗಿಯದ ಶೋಧ! ಕಾಣದ ಸೋಲಿನ ಹೊಣೆ, ಕಾರಣ!

ಈ ವಾರ

ಎಸ್.ವೈ. ಗುರುಶಾಂತ್

ಕರ್ನಾಟಕದಲ್ಲಿ ಬಿಜೆಪಿ ಸೋಲಿಗೆ ಕಾರಣವೇನು? ಈ ಸೋಲಿನ ಹೊಣೆ ಯಾರದು? 2024ರ ಪಾರ್ಲಿಮೆಂಟ್ ಇದರಲ್ಲಿ ಕೆಲವರು ಅನಾರೋಗ್ಯದ ಪ್ರಶ್ನೆಗಳಿದ್ದರೂ ಬಿಜೆಪಿಯ ಚುನಾವಣಾ ಹೋರಾಟದ ಸ್ವರೂಪವೇನು? ಕ್ರಮಗಳೇನು?


ಇಂತಹ ಪ್ರಶ್ನೆಗಳು ಕೇಳಿ ಬರುತ್ತಲೇ ಇವೆ. ಉತ್ತರ ಇನ್ನೂ ಸ್ಪಷ್ಟವಾಗಿ ಸಿಗುತ್ತಿಲ್ಲ! ಉತ್ತರಿಸಬೇಕಾದವರೇ ಪ್ರಶ್ನೆಗಳಾಗಿ ಕಾಡಿದರೆ?

ಕರ್ನಾಟಕದ ವಿಧಾನಸಭಾ ಚುನಾವಣೆಗಳು ಮುಗಿದು ಒಂದು ತಿಂಗಳು ಕಳೆಯುತ್ತಿದೆ. ಆಡಳಿತದಲ್ಲಿದ್ದ ಬಿಜೆಪಿ ಸೋಲಿಗೆ ಕಾರಣವೇನು? ಮತ್ತು ಅದರ ಹೊಣೆ ಯಾರು ಹೊರಬೇಕು? ಎನ್ನುವ ವಿಷಯದಲ್ಲಿ ಇಲ್ಲಿಯವರೆಗೂ ಯಾವುದೇ ಒಂದು ಖಚಿತ ನಿರ್ಧಾರಕ್ಕೆ ಬಿಜೆಪಿ ಬಂದಿಲ್ಲ. ಚುನಾವಣಾ ಸೋಲಿನ ಆತ್ಮಾವಲೋಕನದ ಹೆಸರಿನ ಬೈಟಕ್ ಗಳು ಹಾಗೊಂದು, ಹೀಗೊಂದು ನಡೆದಿವೆಯಾದರೂ ಪೂರ್ಣ ಪ್ರಮಾಣದಲ್ಲಿ ಅದರ ವಿಮರ್ಶೆ ಮತ್ತು ಕಾರಣಗಳನ್ನು ಖಚಿತವಾಗಿ ಗುರುತಿಸಲಾಗಿಲ್ಲ. ಒಂದು ವೇಳೆ ಗುರುತಿಸಿದ್ದರು ಸಾರ್ವಜನಿಕರ ಮುಂದೆ ಮಂಡಿತವಾಗುತ್ತಿಲ್ಲ. ಈ ಗೊಂದಲ ಗೋಜಲುಗಳ ಸೃಷ್ಟಿ ಯಾಕೆ ಎನ್ನುವುದು ಇನ್ನಷ್ಟೇ ಅರ್ಥವಾಗಬೇಕು!

ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯವರು 'ಈ ಸೋಲಿನ ಸಂಪೂರ್ಣ ಹೊಣೆಯನ್ನು ನಾನೇ ಹೊರುತ್ತೇನೆ. ಯಾಕೆಂದರೆ ನಾನು ರಾಜ್ಯದ ಮುಖ್ಯಮಂತ್ರಿ. ನಂತರದಲ್ಲಿ ವಿವರವಾದ ವಿಮರ್ಶೆ ನಡೆದು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ' ಎಂದು ಹೇಳಿದ್ದರು. ಇತ್ತೀಚೆಗೆ ಬೆಳಗಾವಿಯಲ್ಲಿ ಬಿಜೆಪಿ ಮುಖಂಡರ ಸಭೆಯ ಬಳಿಕ ಮಾತನಾಡಿ ಅದೇ ಮಾತನ್ನು ಪುನರುಚ್ಚರಿಸಿದರು. ಇನ್ನು ಹಲವು ಕಾರಣಗಳ ಬಗ್ಗೆ ಆತ್ಮಾವಲೋಕನ ನಡೆಸುತ್ತೇವೆ ಎಂದು ಹೇಳಿದರು.

ಫಲಿತಾಂಶದ ಬಳಿಕ 'ಸೋಲಿನ ಹೊಣೆಯನ್ನು ನಾನೇ ಹೊರುತ್ತೇನೆ' ಎಂದು ಪಕ್ಷದ ಅಧ್ಯಕ್ಷ ನಳೀನ ಕುಮಾರ ಕಟೀಲ ನೀಡಿದ ಹೇಳಿಕೆ ಹೆಚ್ಚಾಗಿ ಯಾರ ಗಮನವನ್ನು ಸೆಳೆಯಲಿಲ್ಲ ಮತ್ತು ಜನರೂ ಗಂಭೀರವಾಗಿ ಪರಿಗಣಿಸಿದಂತೆ ಕಾಣಲಿಲ್ಲ. ಅವರ ಹೇಳಿಕೆ ಕೇವಲ ಔಪಚಾರಿಕವಾಗಿತ್ತು.

2023 ಜೂನ್ 9 ರಂದು ಬಿಜೆಪಿ ಪಕ್ಷದ ರಾಜ್ಯ ಕಚೇರಿ ಯಲ್ಲಿ ಹಾಲಿ ಶಾಸಕರು, ಸೋತ ಅಭ್ಯರ್ಥಿಗಳ ಪ್ರತ್ಯೇಕ ಸಭೆಗಳು ಕೇಂದ್ರ ಉಸ್ತುವಾರಿ ಅರುಣ್ ಸಿಂಗ್ ಸಮ್ಮುಖದಲ್ಲಿ ನಡೆದಿದೆ. ಈ ಆತ್ಮವಲೋಕನ ಸಭೆಯಲ್ಲಿ ನಡೆದ ಚರ್ಚೆಗಳು ಮತ್ತು ಕಲಾಪಗಳನ್ನು ಗಮನಿಸಿದರೆ ಸೋಲಿಗೆ ಸಮಗ್ರವಾದ ಕಾರಣಗಳ ಅವಲೋಕನಕ್ಕೆ ಬದಲಾಗಿ ಬಿಜೆಪಿ ಪಕ್ಷದೊಳಗೆ ಈಗಾಗಲೇ ಇರುವ ಎರಡು ಗುಂಪುಗಳ ನಡುವಿನ ಪರಸ್ಪರ ಬೈದಾಟಗಳು ಪ್ರಾಮುಖ್ಯತೆಯನ್ನು ಪಡೆದಿವೆ. ಒಂದುಗುಂಪು ಇನ್ನೊಂದು ಗುಂಪಿನ ಮೇಲೆ ತೋರು ಬೆರಳಿನಿಂದ ಚುಚ್ಚಿದೆ. ಒಂದೆಡೆ ಯಡಿಯೂರಪ್ಪನವರ ಬಣ ಈ ಸೋಲಿಗೆ ಈಶ್ವರಪ್ಪ, ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿ ಯಂತವರನ್ನು ದೂರ ಇಟ್ಟಿದ್ದು ಕಾರಣ ಎನ್ನುತ್ತಾ ಇದಕ್ಕೆಲ್ಲಾ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಕಾರಣ ಎಂದು ಪರೋಕ್ಷವಾಗಿ ಗುರುತಿಸುತ್ತಿದ್ದರೆ, ಅದಕ್ಕೆ ತಿರುಗೇಟು ಕೊಡುವಂತೆ ಬಿ.ಎಲ್. ಸಂತೋಷ ಅವರ ಬಣವು 'ಇಷ್ಟಾದರೂ ಬಂದಿದೆಯಲ್ಲಾ, ಇಲ್ಲವಾಗಿದ್ದರೆ ನಮ್ಮದು ಅಧೋಗತಿ' ಎಂದು ವಾದಿಸಿದೆ. ಸಂತೋಷ್ ಅವರನ್ನು ಸಮರ್ಥಿಸುತ್ತಾ ಸೋಲಿನ ಹೊಣೆ ಅವರ ವಿರೋಧಿ ಯಡಿಯೂರಪ್ಪ ಬಳಗದ ತಲೆಗೆ ಕಟ್ಟಲು ಯತ್ನಿಸಿದೆ ಎಂದು ವರದಿಯಾಗಿದೆ.



ಸಭೆಯ ಬಳಿಕ ಮಾತನಾಡಿದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಯವರೇನೋ 'ಒಳ ಮೀಸಲಾತಿಯ ಪೆಟ್ಟು, ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗಳನ್ನು ನಂಬಿ ಜನರು ಮತ ಚಲಾಯಿಸಿರುವುದು ಮತ್ತು ಸರ್ಕಾರದ ವಿರುದ್ಧ ನಡೆದ ನಕಾರಾತ್ಮಕ ಪ್ರಚಾರ ನಮ್ಮ ಪಕ್ಷದ ಸೋಲಿಗೆ ಪ್ರಮುಖ ಕಾರಣ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ' ಎಂದು ಹೇಳಿದ್ದಾರೆ. ಇಷ್ಟಾದರೂ ಬಿಜೆಪಿಯ ಸೋಲಿಗೆ ಕಾರಣವಾದ ಅಂಶಗಳ ಬಗ್ಗೆ ವಸ್ತುನಿಷ್ಠವಾದ ವಿಮರ್ಶೆಯಾಗಲಿ ಅವರೇ ಹೇಳಿಕೊಳ್ಳುವಂತೆ ಆತ್ಮಾವಲೋಕನವು ಆಗಲಿಯೇ ಇಲ್ಲ. ಅಂದರೆ ಬಿಜೆಪಿ ಪಕ್ಷದ ದುರಾಡಳಿತ, ಜನದ್ರೋಹಿತನ, ಭ್ರಷ್ಟಾಚಾರ, ಕೋಮು ದ್ವೇಷ, ಕೇಂದ್ರ ಸರಕಾರದ ದುಷ್ಟ ನೀತಿಗಳು ಇತ್ಯಾದಿ ಅಂಶಗಳತ್ತ ಒಂದು ಸಣ್ಣ ಕಿರು ನೋಟವು ಬೀರಲಿಲ್ಲ. ಬಿಜೆಪಿ ನಾಯಕತ್ವವು ಐಕ್ಯತೆಯಿಂದ ಅವಲೋಕನ ಮಾಡಿಕೊಳ್ಳುವ ಸನ್ನಿವೇಶಗಳು ಇನ್ನೂ ಏರ್ಪಡಲಿಲ್ಲ. ಬದಲಾಗಿ ಬಣಗಳ ಬಡಿದಾಟದ ಸುತ್ತಲೇ ಗಿರಕಿ ಹೊಡೆಸುತ್ತಿರುವುದು ಪ್ರಧಾನವಾಗಿ ಕಂಡು ಬರುತ್ತಿದೆ. ಇದು ಒಂದು ಗುಪ್ತ ಅಜೆಂಡಾದ ಭಾಗವಾಗಿ ಇರಲೂಬಹುದು.

ಈ ನಡುವಿನಲ್ಲಿಯೇ ಮುಂದಿನ ಪಾರ್ಲಿಮೆಂಟಿನ ಚುನಾವಣೆಯ ಸಿದ್ಧತೆಗಳು ಆರಂಭಗೊಂಡಿವೆ. ರಾಜ್ಯದ ಚುನಾವಣೆಯಲ್ಲಿ ಬಿಜೆಪಿಯ ಸೋಲಿನ ಫಲಿತಾಂಶ ನಿಚ್ಚಳವಾಗುತ್ತಿದ್ದಂತೆ ಚುನಾವಣೆಯ ಪ್ರಮುಖ ಸೂತ್ರಧಾರಿ, ಸಂಘದ ಕಟ್ಟಾಳು ಬಿ. ಎಲ್.ಸಂತೋಷ್ ಅವರು ಆ ಬಗ್ಗೆ ಎಳ್ಳಷ್ಟೂ ತಲೆ ಕೆಡಿಸಿಕೊಂಡಂತೆ ಕಾಣಲಿಲ್ಲ. 'ನಾವು 30,000 ಮತಗಟ್ಟೆಗಳಲ್ಲಿ ಶಕ್ತಿಯುತರಾಗಿದ್ದೇವೆ. ಇನ್ನು 10,000 ಮತಗಟ್ಟೆಗಳಲ್ಲಿ ಬಲ ಪಡೆಯಲು ಇಂದಿನಿಂದಲೇ ಕೆಲಸ ಆರಂಭಿಸುತ್ತೇವೆ' ಎಂದು ಪಾರ್ಲಿಮೆಂಟ್ ಚುನಾವಣೆಗೆ ಸನ್ನದ್ಧರಾಗುವಂತೆ ಆಗಿರುವಂತೆ ಸಂತೋಷ್ ಹೇಳುವುದನ್ನು ಬಿಟ್ಟರೆ ಸೋಲಿನ ಕುರಿತು ದುಸರಾ ಮಾತು ಆಡಿರಲಿಲ್ಲ. ಈ ಚುನಾವಣಾ ಸೋಲಿನ ವಿಮರ್ಶೆ ಅಥವಾ ಆತ್ಮಾವಲೋಕನ ಎನ್ನುವುದಕ್ಕೆ ಮಹತ್ವ ಇಲ್ಲ, ಮುಂದೆ ನೋಡಿ ಎನ್ನುವ ತಿರಸ್ಕಾರದ ದಾಟಿಯಲ್ಲಿ ಅವರ ದನಿ ಇತ್ತು. ಹಾಗೆ ನೋಡಿದರೆ ಈ ಚುನಾವಣೆಯ ಕಾರ್ಯತಂತ್ರ ಪ್ರಚಾರದ ವಿಷಯಗಳು ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣೆ ಸಂಘಟಿಸುವಲ್ಲಿ ಎಲ್ಲವೂ ಬಿ.ಎಲ್ ಸಂತೋಷ ಅವರ ಪಾತ್ರವೇ ಅತ್ಯಂತ ಪ್ರಮುಖ ಎಂದು ಹೇಳಲಾಗುತ್ತಿದೆ. ಸಂಘ, ಪಕ್ಷದ ಹೈಕಮಾಂಡ್, ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ರವರು ಕೂಡ ಇವರಿಗೆ ಸಂಪೂರ್ಣವಾದ ಬೆಂಬಲವನ್ನು ನೀಡಿದ್ದಾರೆ ಮತ್ತು ಇದು ಪರಸ್ಪರ ಸಮಾಲೋಚನೆ ನಡೆಸಿಕೊಂಡು ಮಾಡಿರುವ ಚುನಾವಣೆಯ ಕಾರ್ಯತಂತ್ರ ಎನ್ನುವುದು ಖಚಿತವಾಗಿದೆ. ಇಡೀ ಬಿಜೆಪಿ ಪಕ್ಷದಲ್ಲಿ ಹಿರಿಯ ನಾಯಕರೆಲ್ಲರನ್ನು ಬದಲಾಯಿಸಿ ಆರ್.ಎಸ್.ಎಸ್ ಹೇಳಿದಂತೆ ಕೇಳುವ ಹೌದಪ್ಪ ಕೈಗೊಂಬೆಗಳನ್ನು ಚುನಾವಣೆಯಲ್ಲಿ ಗೆಲ್ಲಿಸಿ ಇಡೀ

ಪುಟ 4 ಕ್ಕೆ

ಮಣಿಪುರದಲ್ಲಿ ಕ್ರಿಶ್ಚಿಯನ್ನರ ಮೇಲಿನ ದಾಳಿಗೆ ಖಂಡನೆ ಮಂಗಳೂರಿನಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ವರದಿ: **ವಾ.ಉಚ್ಚಿಲ್**

ಮಣಿಪುರದಲ್ಲಿ ಚರ್ಚ್ ಹಾಗೂ ಕ್ರಿಶ್ಚಿಯನ್ನರ ಮೇಲೆ ನಡೆಯುತ್ತಿರುವ ದಾಳಿಯನ್ನು ಖಂಡಿಸಿ ದ.ಕ.ಜಿಲ್ಲಾ ಸಮಾನ ಮನಸ್ಕ ಸಂಘಟನೆಗಳ ಒಕ್ಕೂಟ, ಕೆಥೊಲಿಕ್ ಸಭಾ ಮಂಗಳೂರು ಪ್ರದೇಶ (ರಿ) ಮತ್ತು ಯುನೈಟೆಡ್ ಕ್ರಿಶ್ಚಿಯನ್ ಫೋರಂ ಮಂಗಳೂರು ಇದರ ವತಿಯಿಂದ ಜೂನ್ 6ರಂದು ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿಧ ಕಡೆಗಳಿಂದ ಆಗಮಿಸಿದ ಸಾವಿರಾರು ಮಂದಿ ಕ್ರೈಸ್ತ ಸಮುದಾಯದವರು, ಧರ್ಮಗುರುಗಳು, ಧರ್ಮಭಗಿನಿಯರು, ಇತರ ಸಮುದಾಯ ಮತ್ತು ಸಂಘಟನೆಗಳ ಸಮಾನ ಮನಸ್ಕರು ಪಾಲ್ಗೊಂಡು ಬಿಜೆಪಿ ಸರಕಾರದ ವೈಫಲ್ಯದ ವಿರುದ್ಧ ಘೋಷಣೆ ಕೂಗಿದರು.

ಕಿನ್ನಿಗೋಳಿ ಚರ್ಚ್‌ನ ಧರ್ಮಗುರು ಫಾ. ಪಾವ್ಲೋಸ್ಟಿನ್ ಲೋಬೋ, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಹಾಗೂ ಸಿಐಟಿಯು ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಕಾನೂನು ಪ್ರಕಾರ ಎಲ್ಲರೂ ನೆಮ್ಮದಿಯಿಂದ ಬದುಕುವ ವಾತಾವರಣವನ್ನು ಸರಕಾರ ಕಲ್ಪಿಸಬೇಕು. ಮಣಿಪುರ ರಾಜ್ಯ ಸರಕಾರವು ಈ ವಿಚಾರದಲ್ಲಿ ತಾರತಮ್ಯ ಎಸಗುತ್ತಿವೆ. ಮಣಿಪುರದಲ್ಲಿ ದುರ್ಬಲ ಪ್ರಜೆಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳದ ಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಹಾಗೂ ಮಣಿಪುರ ಸರಕಾರವು ಈ ಸಮಸ್ಯೆ ಬಗೆಹರಿಸಲು ಮುಂದಾಗಬೇಕು. ಶಾಂತಿ ಸುವ್ಯವಸ್ಥೆ ಕಾಪಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಬೇಕು ಎಂದರು.

ಮಣಿಪುರ ರಾಜ್ಯ ಸರಕಾರವು ದ್ವೇಷ ರಾಜಕರಣವನ್ನು ನಡೆಸುತ್ತಿದೆ. ಮೈತ್ಯೆ ಸಮುದಾಯಕ್ಕೆ ಮೀಸಲಾತಿ ನೀಡುವ ವಿಚಾರದಲ್ಲಿ ಭುಗಿಲೆದ್ದ ಗಲಭೆಯನ್ನು ಮುಂದಿಟ್ಟು ಕುಕಿ ಸಮುದಾಯದ ಕ್ರಿಶ್ಚಿಯನ್ನರ ಹಾಗೂ ಚರ್ಚ್‌ಗಳ ಮೇಲೆ ವ್ಯಾಪಕ ದಾಳಿಗಳನ್ನು ನಡೆಸಿವೆ. ಇದರಿಂದ ನೂರಾರು ಮಂದಿ ಪ್ರಾಣ ಕಳಕೊಂಡಿದ್ದಾರೆ. 50,000ಕ್ಕೂ ಅಧಿಕ ಮಂದಿ ಸಂತ್ರಸ್ತರಾಗಿದ್ದಾರೆ. ಕೋಟ್ಯಾಂತರ ರೂಪಾಯಿಯ ಆಸ್ತಿಪಾಸ್ತಿಗೆ ಹಾನಿಯಾಗಿದೆ. 9 ಜಿಲ್ಲೆಗಳಲ್ಲಿ ಕರ್ಫ್ಯೂ ಜ್ಯಾರಿಯಲ್ಲಿದೆ. ಇಂಟರ್‌ನೆಟ್ ಸಹಿತ ಎಲ್ಲಾ ರೀತಿಯ ಸಂಪರ್ಕಗಳನ್ನು ಕಡಿತಗೊಳಿಸಲಾಗಿದೆ. ಜನಜೀವನವು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಇಷ್ಟೆಲ್ಲಾ ಆದರೂ ಕೂಡಾ ಕೇಂದ್ರ ಸರಕಾರವು ಮೌನ ತಾಳಿದೆ ಎಂದು ಭಾಷಣಕಾರರು ಆರೋಪಿಸಿದರು.

ಭಗಿನಿ ಸಿಸಿಲಿಯಾ ಮೆಂಡೋನ್ಸಾ, ಮದರ್ ತೆರೇಸಾ ವಿಚಾರ ವೇದಿಕೆಯ ರೊಯ್ ಕ್ಯಾಸ್ಟಲಿನೋ, ಮಂಗಳೂರು ಧರ್ಮಪ್ರಾಂತದ ಧರ್ಮಗುರು ಫಾ. ಮ್ಯಾಕ್ಸಿಂ ನೊರೊನ್ಹಾ, ವಿಧಾನ ಪರಿಷತ್ ಸದಸ್ಯ ಹರೀಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ದರ ಏರಿಕೆ ಹಿಂಪಡೆಯಲು ಸಿಪಿಐ(ಎಂ) ಒತ್ತಾಯ

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿಧಾನ ಸಭಾ ಚುನಾವಣೆ ಮುಗಿಯುತ್ತಿದ್ದಂತೆಯೆ ಏಪ್ರಿಲ್ ನಿಂದ ಪೂರ್ವಾನ್ವಯವಾಗುವಂತೆ ವಿದ್ಯುತ್ ದರವನ್ನು ತಲಾ ಯುನಿಟ್ ಗೆ 7 ರೂ. ಗೆ ಹೆಚ್ಚಳ ಮಾಡಿರುವುದು ಮತ್ತು ಸುಮಾರು 5, 6 ಹಂತಗಳ ಸ್ಲಾಬ್ ದರ ಹೊಂದಿದ್ದ ವಿಧಾನವನ್ನು ಎರಡು ಹಂತಗಳಿಗೆ ಬದಲಾಯಿಸಿರುವುದು ವ್ಯಾಪಕ ಬೆಲೆ ಏರಿಕೆಗೆ ಕಾರಣವಾಗಲಿದೆ. ಇದು ರಾಜ್ಯದ ಅಭಿವೃದ್ಧಿಗೆ ಮಾರಕವಾಗಿದ್ದು ರಾಜ್ಯ ಸರಕಾರ ಕೂಡಲೇ ಮಧ್ಯ ಪ್ರವೇಶಿಸಿ ಅಗತ್ಯ ಕ್ರಮವಹಿಸಿ ಅದನ್ನು ತಡೆಯುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿಯು ಮುಖ್ಯ ಮಂತ್ರಿ ಶ್ರೀ ಸಿದ್ಧರಾಮಯ್ಯರವರನ್ನು ಬಲವಾಗಿ ಒತ್ತಾಯಿಸಿದೆ.

ನೂರು ಯುನಿಟ್ ಗಿಂತ ಹೆಚ್ಚುವರಿ ಬಳಸುವ ಗೃಹ ಬಳಕೆದಾರರು ಏಪ್ರಿಲ್ ನಿಂದ ಜೂಲೈ ತಿಂಗಳೊಳಗೆ ಬಡ್ಡಿ ಮತ್ತು ಅಸಲು ಸೇರಿ ಹಲವು ಸಾವಿರ ರೂಗಳ ಬಿಲ್‌ಗಳ ಹೊರೆಯನ್ನು ಭರಿಸ ಬೇಕಾಗುತ್ತದೆ.

ಮಾತ್ರವಲ್ಲಾ, ಈ ಬೆಲೆ ಏರಿಕೆಯು ವಾಣಿಜ್ಯಕ್ಕಾಗಿ ಬಳಸುವವರ ಮೂಲಕ ಜನ ಸಾಮಾನ್ಯರು ಬಳಸುವ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ ಹಾಗೂ ಸಾವಿರಾರು ಸಣ್ಣ ಕೈಗಾರಿಕೆಗಳ ಮುಚ್ಚುವಿಕೆಗೆ, ಅಲ್ಲಿ ದುಡಿಯುವ ದಶ ಸಾವಿರಗಟ್ಟಲೇ ಕಾರ್ಮಿಕರ ಕುಟುಂಬಗಳ ಬೀದಿಪಾಲು ಮಾಡಲು ಕಾರಣವಾಗುತ್ತದೆ.

ನೂತನ ಸರಕಾರವೂ ಗೃಹ ಜ್ಯೋತಿ ಯೋಜನೆಯಡಿ ರಾಜ್ಯದ ಜನತೆ ಬಳಸುವ ಉಚಿತ ವಿದ್ಯುತ್ ಗೂ ಹೆಚ್ಚಿನ ಹೊರೆಯನ್ನು ಭರಿಸಬೇಕಾಗುತ್ತದೆ.

ಕೆಈಆರ್‌ಸಿಯು ವಿದ್ಯುತ್ ಬೆಲೆಯನ್ನು ಪರಿಷ್ಕರಿಸಿ ಹೆಚ್ಚಿಸುವುದರಿಂದ ಪ್ರತಿವರ್ಷವು ಜನ ಸಾಮಾನ್ಯರು ಹಾಗೂ ಮಧ್ಯಮ ವರ್ಗ ಬೆಲೆ ಏರಿಕೆಯ ಹೊರೆಯನ್ನು ನಿರಂತರವಾಗಿ ಭರಿಸಬೇಕಾಗುತ್ತದೆ. ಪ್ರತಿವರ್ಷವು ಸಣ್ಣ ಕೈಗಾರಿಕೆಗಳು ಹೊರೆಯನ್ನು ಭರಿಸಲಾಗದೇ ಮುಚ್ಚುವಂತಹ ಸ್ಥಿತಿ ಮುಂದುವರೆಯುತ್ತದೆ.

ಭ್ರಷ್ಟತೆಯು ಸೇರಿದ ದುಬಾರಿ ಬೆಲೆಯ ಖಾಸಗೀ ವಿದ್ಯುತ್ ಖರೀದಿಯನ್ನು ನಿಲ್ಲಿಸದ ಮತ್ತು ವಿದ್ಯುತ್ ಕಳ್ಳತನವನ್ನು ಹಾಗೂ ಸೋರುವಿಕೆಯನ್ನು ತಡೆಯಲಾಗದ ವಿದ್ಯುತ್ ಕಂಪನಿಗಳು ಮತ್ತು ಕೆಈಆರ್‌ಸಿ ಜನರ ಮೇಲೆ ಪ್ರತಿವರ್ಷವೂ ವಿದ್ಯುತ್ ಬೆಲೆ ಏರಿಕೆಯ ಹೊರೆಯನ್ನು ಹೇರುತ್ತಿರುವುದು ಅಕ್ಷಮ್ಯವಾಗಿದೆ.

ರಾಜ್ಯ ಸರಕಾರ ದುಬಾರಿ ಬೆಲೆಯ ಖಾಸಗೀರಂಗದ ವಿದ್ಯುತ್ ಖರೀದಿಯನ್ನು ಈ ಕೂಡಲೇ ನಿಲ್ಲಿಸಬೇಕು ಎಂದಿದೆ.

ಈ ಕೆಈಆರ್‌ಸಿ ಸಂಸ್ಥೆಯನ್ನು ಹುಟ್ಟು ಹಾಕಿದ್ದೇ, ವಿದ್ಯುತ್ ರಂಗದ ಖಾಸಗೀಕರಣಕ್ಕೆ ಮತ್ತು ಖಾಸಗೀ ರಂಗದ ವಿದ್ಯುತ್ ಬೆಲೆ ಏರಿಕೆಯನ್ನು ನಿಯಮಿತವಾಗಿ ಹೆಚ್ಚಿಸುವ ದುರುದ್ದೇಶದಿಂದ ಆದ್ದರಿಂದ ಅದನ್ನು ರದ್ದುಪಡಿಸಲು ಕ್ರಮವಹಿಸುವುದು ಅಗತ್ಯವಿದೆ ಎಂದಿದೆ..

ಬಿಜೆಪಿಯಲ್ಲಿ ಮುಗಿಯದ ಶೋಧ....

ಪುಟ 3 ರಿಂದ

ಸರ್ಕಾರದ ಸೂತ್ರ ಸಂಘವೇ ಇಟ್ಟುಕೊಳ್ಳಲು ಒಂದು ಖಚಿತವಾದ ನಿರ್ಧಾರವನ್ನು ಕೈಗೊಳ್ಳಲಾಗಿತ್ತು. ಯಡಿಯೂರಪ್ಪನವರನ್ನು ನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ನಂತರದಿಂದಲೇ ಆ ಪ್ರಯತ್ನ ಅತ್ಯಂತ ಆಕ್ರಮಣಕಾರಿಯಾಗಿ ನಡೆದಿತ್ತು. ಬಸವರಾಜ್ ಬೊಮ್ಮಾಯಿ ಅವರೇ ನಾಯಕರು ಅವರೇ ಮುಂದಿನ ಮುಖ್ಯಮಂತ್ರಿಗಳು ಎಂದು ಜೋರಾಗಿ ಮೈಕ್ ನಲ್ಲಿ ಹೇಳುತ್ತಿದ್ದರೂ ಅಂತಿಮವಾಗಿ ಕೇಶವ ಕೃಪಾದಲ್ಲಿ ಕೈಗೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತಿತ್ತು. ಆಂತರಿಕವಾಗಿ ಈ ಚುನಾವಣಾ ಫಲಿತಾಂಶದ ಬಳಿಕ ಹೊಸ ಮುಖ್ಯಮಂತ್ರಿಯನ್ನು ನೇಮಿಸುವ ಗುಪ್ತ ನಿರ್ಧಾರವು ಇಲ್ಲದೆ ಇರಲಿಲ್ಲ. ಈ ಕಾರಣಗಳಿಂದಲೂ ಪಕ್ಷದೊಳಗಡೆ ಇನ್ನೂ ಬಲವನ್ನು ಹೊಂದಿದ್ದ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಬಣವನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಿ ಮೂಲೆಗುಂಪು ಮಾಡುವ ಪ್ರಯತ್ನಗಳು ನಡೆದಿದ್ದವು. ಸಾರ್ವಜನಿಕರಲ್ಲಿ ಈ ಸಂದೇಶ ಹೋದರೆ ತಿರುಗು ಬಾಣವಾಗಬಹುದು ಎನ್ನುವ ಅಂದಾಜಿನೊಂದಿಗೆ ಯಡಿಯೂರಪ್ಪನವರು ಪ್ರಚಾರದ ಅಧ್ಯಕ್ಷರು, ಪ್ರಮುಖರು ಎಂದೆಲ್ಲಾ ಬಿಂಬಿಸಲು ಪ್ರಯತ್ನಿಸಿದ್ದು ಜೊಳ್ಳು ಎನ್ನುವುದು ಬಿಜೆಪಿಯ ಆಂತರಿಕ ವಲಯದಲ್ಲಿ ಸ್ಪಷ್ಟವಿತ್ತು. ಈಗಲೂ ಬಿಜೆಪಿ ಪಕ್ಷದೊಳಗೆ ನಡೆಯುತ್ತಿರುವ ಗುಜುಗುಜು, ಗೊಂದಲ ಮತ್ತು ಹಿಂದೇಟುಗಳನ್ನು ಗಮನಿಸಿದರೆ ಈ ಸೋಲಿಗೆ ನಿಖರವಾದ ಕಾರಣಗಳನ್ನು ಗುರುತಿಸಿಕೊಳ್ಳಲು ಬಿಜೆಪಿ ನಾಯಕತ್ವ ಸಿದ್ಧವಿಲ್ಲ. ಮತ್ತು ರಾಜ್ಯದ ಸಂಘಟನಾ, ರಾಜಕೀಯ ವಿದ್ಯಾಮಾನಗಳಲ್ಲಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಅತಿಯಾದ ಮೂಗು ತೂರಿಸುವಿಕೆ, ಎಲ್ಲವನ್ನೂ ನಿಯಂತ್ರಿಸುವ ಸರ್ವಾಧಿಕಾರಿ ಶಕ್ತಿ ಮತ್ತು ಕರ್ನಾಟಕ ರಾಜ್ಯದಲ್ಲಿ ಬಿಜೆಪಿಗಿರುವ ಬೆಂಬಲವನ್ನು ಸಂಪೂರ್ಣವಾಗಿ ಸಂಘ ಪರಿವಾರದ ಹಿಂದುತ್ವದ ಅಜೆಂಡಾಕ್ಕೆ ಅನುಗುಣವಾಗಿ ಹಿಡಿತಕ್ಕೆ ತೆಗೆದುಕೊಳ್ಳುವ ಉದ್ದೇಶ ಬಿಟ್ಟು ಕೊಡಲು ತಯಾರಿಲ್ಲ. ಅಂದರೆ ಹಿಂದುತ್ವದ ಅಜೆಂಡವನ್ನು ಮತ್ತಷ್ಟು ತೀವ್ರವಾಗಿ ಕರ್ನಾಟಕದಲ್ಲಿ ಜಾರಿಗೊಳಿಸಲು ಆರ್ ಎಸ್ ಎಸ್ ಉತ್ಸುಕವಾಗಿದೆ, ಬದ್ಧವಾಗಿದೆ ಎನ್ನುವುದು ಸ್ಪಷ್ಟವಿದೆ.

ಬಿಜೆಪಿ ಸೋತ ಫಲಿತಾಂಶದ ಬೆನ್ನಲ್ಲೇ ಪಕ್ಷದ ರಾಜ್ಯಾಧ್ಯಕ್ಷ ಸಂಸದ ನಳಿನ್ ಕುಮಾರ್ ಕಟೀಲ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂಬ ಕೂಗು ದೊಡ್ಡ ಪ್ರಮಾಣದಲ್ಲಿ ಕೇಳಿ ಬಂತು. ವಿಶೇಷವಾಗಿ ಅವರ ಆಯ್ಕೆಯಾಗಿರುವ ಕರಾವಳಿ ಭಾಗದಲ್ಲಿ ಸ್ವಪಕ್ಷೀಯರಿಂದಲೇ ಅಂತಹ ಅಗ್ರಹದ ಪ್ರತಿಭಟನೆಗಳು ನಡೆದವು. ಸೋಲಿನ ಹೊಣೆಯನ್ನು ಸಾಮಾನ್ಯವಾಗಿ ಪಕ್ಷದ ಚುಕ್ಕಾಣಿ ಹಿಡಿದಿರುವ ರಾಜ್ಯದ ಅಧ್ಯಕ್ಷರು ವಹಿಸಿಕೊಳ್ಳುವುದು ಈ ಪಕ್ಷಗಳಲ್ಲಿ ನಡೆವ ಒಂದು ಸಹಜ ಸಂಪ್ರದಾಯ. ಆದರೆ ಬಿಜೆಪಿಯ ಅತ್ಯಂತ ದುರ್ಬಲ ಅಧ್ಯಕ್ಷರೆಂದು ಸ್ವಪಕ್ಷೀಯರಿಂದಲೇ ಬಣ್ಣಿಸಲ್ಪಟ್ಟ ನ.ಕು.ಕಟೀಲ್ ಅವರು ಚುನಾವಣೆಯ ಸಂಘಟನಾ ನಿರ್ಧಾರಗಳನ್ನು ಅಥವಾ ಯಾವುದೇ ಕಾರ್ಯತಂತ್ರಗಳನ್ನು ನಿರ್ಧರಿಸುವ ಅಥವಾ ಪ್ರಭಾವಿಸುವ ಯಾವುದೇ ಶಕ್ತಿಯನ್ನು ಹೊಂದಿಲ್ಲ ಎನ್ನುವುದು ಕೂಡ ಎಲ್ಲರಿಗೂ ಗೊತ್ತಿರುವ ಸಂಗತಿ. ನಿಜಕ್ಕೂ ನ.ಕು. ಕಟೀಲ್ ಅವರನ್ನು ಅಧ್ಯಕ್ಷರನ್ನಾಗಿಸಿದ ಹೊಣೆ ಸಂಘ ಪರಿವಾರದ್ದೇ. ಪರಿವಾರಕ್ಕೆ ಬೇಕೆದ್ದುದು ಹೇಳಿದ ಮಾತು ಕೇಳುವ ಒಬ್ಬ ಡೆಮ್ಮಿ ಅಧ್ಯಕ್ಷ! ಯಡಿಯೂರಪ್ಪನವರನ್ನು ಬೈಯ್ಯಬೇಕು ಎಂದಾಗ ಬೈಯ್ಯುವ ಹೊಗಳಬೇಕೆಂದಾಗ ಹೊಗಳುವ ಪ್ರಸಂಗಗಳನ್ನು ನೋಡಿ ಆಗಿದೆ. ಒಂದು ವೇಳೆ ಸೋಲಿನ ಹೊಣೆಯನ್ನು ರಾಜ್ಯದ ಅಧ್ಯಕ್ಷ ಹೊತ್ತುಕೊಳ್ಳ ಬೇಕು ಎಂದಾದರೆ ಅದನ್ನು ಆರ್.ಎಸ್.ಎಸ್ಸೇ ಹೊತ್ತುಕೊಳ್ಳಬೇಕಾಗುತ್ತದೆ.

ಎಲ್ಲಾ ವಿದ್ಯಮಾನಗಳನ್ನು ಗಮನಿಸಿದರೆ ಕರ್ನಾಟಕದಲ್ಲಿ ಚುನಾವಣೆಯನ್ನು ನಡೆಸುವ ಹೊಣೆ ಖಂಡಿತಕ್ಕೂ ರಾಜ್ಯದ ಸಾಂಸ್ಥಿಕ ನಾಯಕರಲ್ಲಿ ಇರಲಿಲ್ಲ ಎನ್ನುವುದು ಕಾಣುತ್ತದೆ. ಅಂದರೆ ಈ ಚುನಾವಣೆಯನ್ನು ಬಿಜೆಪಿಯ ಹೈಕಮಾಂಡ್ ಮತ್ತು ಆರ್ ಎಸ್ ಎಸ್ ಗಳೇ ಸಂಪೂರ್ಣವಾಗಿ ವಹಿಸಿಕೊಂಡಿವೆ. ಬಿ.ಎಲ್.ಸಂತೋಷ್ ಅದರ ಪ್ರಮುಖ ವಾಹಕ. ಆದರೆ ಈ ಸತ್ಯ ಸಂಗತಿಯನ್ನು ನಿಖರ ಮತ್ತು ನಿಷ್ಠುರವಾಗಿ ಹೇಳಲು ಬಿಜೆಪಿಯ ಯಾವೊಬ್ಬ ನಾಯಕರು ತಯಾರಿಲ್ಲ! ಹಾಗೊಂದು ವೇಳೆ ಹೇಳಿದ್ದೇ ಆದಲ್ಲಿ ಬಿಜೆಪಿ ಪಕ್ಷದಲ್ಲಿ ಉಳಿಯುವುದು ಮಾತ್ರವಲ್ಲ ಸಾರ್ವಜನಿಕವಾಗಿಯೂ ಅವರು ರಾಜಕೀಯವಾಗಿ ತಲೆ ಎತ್ತಿ ಓಡಾಡುವಂತೆ ಇರಲಿಕ್ಕಿಲ್ಲ ಎನ್ನುವ ಭಯ ಬಹುತೇಕರನ್ನು ಕಾಡುತ್ತಿದೆ. (ಸಿಬಿಐ, ಇ.ಡಿ. ಇತ್ಯಾದಿ ಸರ್ಪಗಳು ಹೆಡೆ ಎತ್ತಿ ಆಡುತ್ತಿರುವಾಗ!) ಹೀಗಾಗಿಯೇ ಹುಲ್ಲಿನ ಪೊದೆಯ ಸುತ್ತಲೇ ಹುಲ್ಲು ಕಡ್ಡಿಯಿಂದ ಹೊಡೆಯುವ ಶಾಸ್ತ್ರ ಮಾಡಲಾಗುತ್ತಿದೆ.

ಈ ನಡುವಿನಲ್ಲಿಯೇ ಮುಂದಿನ ಪಾರ್ಲಿಮೆಂಟ್ ಚುನಾವಣೆಯ ಸಿದ್ಧತೆಗಳನ್ನು ಆರಂಭಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಈಗಿರುವ ಸುಮಾರು 13 ಸಂಸದರ ಸ್ಪರ್ಧೆಗೆ ಕೊಕ್ ಕೊಡಲು ನಿರ್ಧರಿಸಲಾಗಿದೆಯಂತೆ. ಅಂತವರ ಪಟ್ಟಿಯಲ್ಲಿ ಮಾಜಿ ಮುಖ್ಯಮಂತ್ರಿ ಹಾಲಿ ಕೇಂದ್ರ ಸಚಿವ ಬೆಂಗಳೂರು ಉತ್ತರದ ಡಿ.ವಿ. ಸದಾನಂದ ಗೌಡ, ಚಿಕ್ಕಬಳ್ಳಾಪುರದ ಸಂಸದ ಬಚ್ಚೇಗೌಡ, ಕೋಲಾರದ ಮುನಿಸ್ವಾಮಿ, ಚಾಮರಾಜನಗರದ ಶ್ರೀನಿವಾಸ ಪ್ರಸಾದ್, ವಿಜಯಪುರದ ರಮೇಶ್ ಜಿಗಜಿಣಗಿ, ತುಮಕೂರು ಜಿ.ಎಸ್. ಬಸವರಾಜು, ಕೊಪ್ಪಳದ ಸಂಗಣ್ಣ ಕರಡಿ, ದಾವಣಗೆರೆಯ ಜಿ.ಎಂ. ಸಿದ್ದೇಶ್ವರ, ಚಾಮರಾಜ ನಗರದ ಶ್ರೀನಿವಾಸ್ ಪ್ರಸಾದ್, ಉತ್ತರ ಕನ್ನಡದ ಅನಂತ ಕುಮಾರ್ ಹೆಗ್ಡೆ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಮುಂತಾದವರು ಸೇರಿದ್ದಾರೆ. ಇದರಲ್ಲಿ ಕೆಲವರ ಅನಾರೋಗ್ಯದ ಪ್ರಶ್ನೆಗಳಿದ್ದರೂ ಉಳಿದವರನ್ನು

ಕೈ ಬಿಡುವ ಅಂಶವು ಕೂಡ ಬಿಜೆಪಿಯಲ್ಲಿ ಹಳೆಯ ತಲೆಮಾರಿನ ನಾಯಕರು ನಿರ್ಗಮಿಸಬೇಕು, ಆಜ್ಞಾ ಪಾಲಕ ಸಂಘನಿಷ್ಠರು ಬರಬೇಕು ಎನ್ನುವ ಸೂತ್ರವೇ ಕಾರ್ಯಾಚರಣೆಯಲ್ಲಿ ಇರುವುದನ್ನು ಕಾಣಬಹುದು. ತಮ್ಮನ್ನು ಕೈ ಬಿಡುವ ಕುರಿತಾದಂತೆ ಡಿವಿ ಸದಾನಂದ ಗೌಡರು ಬಹಿರಂಗವಾಗಿಯೇ ಅತೃಪ್ತಿ ಮತ್ತು ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಅತೃಪ್ತರು, ಆಕಾಂಕ್ಷಿಗಳು ಅನಾರೋಗ್ಯದ ಕಾರಣ ಇರುವುದನ್ನು ಹೊರತುಪಡಿಸಿದರೆ ಉಳಿದವರು ಸಂಸತ್ ಚುನಾವಣೆಯಲ್ಲಿ ವಹಿಸಬಹುದಾದ ಪಾತ್ರದ ಬಗ್ಗೆಯೂ ಯೋಚಿಸಬೇಕಿದೆ.

ಕರ್ನಾಟಕದಲ್ಲಿನ ವಿಧಾನಸಭಾ ಚುನಾವಣೆಯ ಫಲಿತಾಂಶದ ಬಳಿಕ ಎಚ್ಚೆತ್ತಿರುವ ಬಿಜೆಪಿ ವಿವಿಧ ರಾಜ್ಯಗಳಲ್ಲಿ ವಿವಿಧ ಸ್ಥಳೀಯ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಂಗೀತ ವ್ಯಕ್ತಪಡಿಸಿದೆ. ಮತ್ತು ಆ ದೆಸೆಯಲ್ಲಿ ಆಗಲೇ ಒಳ ಮಾತುಕತೆಗಳು ಆರಂಭಗೊಂಡಿವೆ. ತೆಲಂಗಾಣ-ಆಂಧ್ರದಲ್ಲಿ ಚಂದ್ರಬಾಬು ನಾಯ್ಡು ತೆಲುಗು ದೇಶಂ ಪಕ್ಷ, ಕರ್ನಾಟಕದಲ್ಲಿ ಜಾತ್ಯತೀತ ಜನತಾದಳ ಹೀಗೆ ಪ್ರಸ್ತಾವಿತವಾಗುತ್ತಿರುವ ಹೆಸರುಗಳು. ಈ ಪಕ್ಷಗಳ ನಾಯಕರ ಇತ್ತೀಚಿನ ಹೇಳಿಕೆಗಳನ್ನು ಗಮನಿಸಿದರೆ ಅಂತಹ ಮೈತ್ರಿಯ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ನೂತನ ಸಂಸತ್ತಿನ ಉದ್ಘಾಟನೆಗೆ ದೇವೇಗೌಡ್ರು ಹೋಗಿ ಬಂದ ಬಳಿಕ, ಕಾಂಗ್ರೆಸ್ ವಿರೋಧಿಸುವ ಭರದಲ್ಲಿ ಜೆಡಿಎಸ್ ನಾಯಕರ ಅಭಿಪ್ರಾಯಗಳು ಗಮನ ಸೆಳೆಯುವಂತೆ ಇವೆ.

ಅಂತೂ, ಬಿಜೆಪಿಯಲ್ಲಿನ ಆತ್ಮಾವಲೋಕನದ ಪ್ರಹಸನವೇನೋ ಮುಗಿದಿಲ್ಲ. ಅಷ್ಟು ಸುಲಭದಲ್ಲಿ ಮುಗಿಯುವಂತೆಯೂ ಇಲ್ಲ! 'ಗೆಲುವು ತನ್ನಿಂದ, ಸೋಲು ಇತರರಿಂದ' ಎನ್ನುವ ದಾಟಿ ಬಿಜೆಪಿಯಲ್ಲಿ ಢಾಳಾಗಿ ಕಾಣಿಸುತ್ತಿದೆ. ಮತ್ತು ಆ ಪಕ್ಷದಲ್ಲಿ ನಾಯಕರು ಅಬ್ಬರಿಸುವಂತೆ ಆಂತರಿಕ ಪ್ರಜಾಪ್ರಭುತ್ವದ ಅವನತಿ ಹೇಗಿದೆ ಎನ್ನುವುದು ದರ್ಶನವಾಗುತ್ತಿದೆ. ಇವೆಲ್ಲವುದರ ನಡುವೆಯೂ ಮುಂದಿನ ಸಂಸತ್ತಿನ ಚುನಾವಣೆಯಲ್ಲಿ ಬಿಜೆಪಿಯ ಕಾರ್ಯತಂತ್ರ, ಅದರ ದಾಳಿ ಯಾವುದನ್ನು ಕಡಿಮೆ ಅಂದಾಜು ಮಾಡುವಂತಿಲ್ಲ ಎಂಬುದನ್ನೂ ಮರೆಯುವಂತಿಲ್ಲ.

1995 ಹಾಗೂ 1998 ರಲ್ಲಿ ಬಿಎಸ್‌ಎಎಲ್ ಸ್ಟೀಲ್ ಕೈಗಾರಿಕೆಗೆಂದು ಜಮೀನು ಬಿಟ್ಟುಕೊಟ್ಟು ವಂಚನೆಕ್ಕೀಡಾದ

ಭೂ ಸಂತ್ರಸ್ಥ ರೈತರಿಗೆ ನ್ಯಾಯ ದೊರಕಿಸಿಕೊಡಲು ಆಗ್ರಹ

ಬಳ್ಳಾರಿ ಜಿಲ್ಲಾ ಬಳ್ಳಾರಿ ತಾಲೂಕಾ ಬೇವಿನಹಳ್ಳಿ, ಕಕ್ಕಬೇವಿನಹಳ್ಳಿ, ಅಮರಾಪುರ, ಟಿ.ಬೂದಿಹಾಳ್, ಚಾಗನೂರು ಗ್ರಾಮಗಳಿಗೆ ಸೇರಿದ ಮತ್ತು ಕೆಐಎಡಿಬಿ, ಬಿಎಸ್‌ಎಎಲ್ ಹಾಗೂ ಶೇಷ ಗೋವಾ ಕಂಪನಿಗಳಿಂದ ಮತ್ತು ಐಎಫ್‌ಸಿಐ ಸಂಸ್ಥೆಗಳಿಂದ ಮತ್ತು ರಾಜ್ಯ ಸರಕಾರದ ಶಾಮೀಲುತನದಿಂದ ದೌರ್ಜನ್ಯಕ್ಕೊಳಗಾದ ಭೂ ಸಂತ್ರಸ್ಥರು ಕೂಡಲೇ ಕಾರ್ಖಾನೆಗಳನ್ನು ಸ್ಥಾಪಿಸಿ, ಉದ್ಯೋಗ ನೀಡಿ, ಇಲ್ಲವೆ ನಮ್ಮಿಂದ ಪಡೆದ ಭೂಮಿಯನ್ನು ವಾಪಾಸ್ ನೀಡಿ ಅಥವಾ ಭೂ ಬೆಲೆಯಲ್ಲಿ ಆದ ಅನ್ಯಾಯವನ್ನು ಸರಿಪಡಿಸಲು ಒತ್ತಾಯಿಸಿ ಇಂದು ಬೆಳಿಗ್ಗೆ ಬಳ್ಳಾರಿಯ ನಗರೂರು ನಾರಾಯಣರಾವ್ ಉದ್ಯಾನವನದಿಂದ ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ, ಮಾನ್ಯ ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಸಿಐಟಿಯು ಅಧ್ಯಕ್ಷರಾದ ಜೆ.ಸತ್ಯಬಾಬು ಮಾತನಾಡುತ್ತಾ, 1995 ಮತ್ತು 1998ರಲ್ಲಿ ಕ್ರಿಮಿನಲ್ ದುಷ್ಕೃತ್ಯದಲ್ಲಿ ತೊಡಗಿರುವ ಕುಖ್ಯಾತ ಕೆಐಎಡಿಬಿಯು ನಮ್ಮ ಗ್ರಾಮಗಳ ಸುಮಾರು 1,169 ಎಕರೆ ಜಮೀನುಗಳನ್ನು ಮತ್ತೊಂದು ಮೋಸದ ಕಂಪನಿಯಾದ ಬಿಎಸ್‌ಎಎಲ್ ಸ್ಟೀಲ್ ಕಂಪನಿ ನಿರ್ಮಾಣಕ್ಕೆಂದು ಸ್ವಾಧೀನಪಡಿಸಿಕೊಂಡಿತು. ಈ ತೀರ್ಪಿನಂತೆ ಮೊದಲ ಹಂತದ ಸ್ವಾಧೀನದಲ್ಲಿ 746.35 ಎಕರೆ ಜಮೀನುಗಳನ್ನು ಕೇವಲ 43,000 ರೂ ಹಾಗೂ 72,000 ರೂ.ಗಳಿಗೆ ಮತ್ತು ಎರಡನೇ ಹಂತದಲ್ಲಿ 423.33 ಎಕರೆ ಜಮೀನುಗಳನ್ನು 56,000 ರೂ. ಹಾಗೂ 85,000 ರೂ.ಗಳಂತೆ ತಲಾ ಎಕರೆಗೆ ನಿಗದಿಸಿ, ಖರೀದಿಸಿ ರೈತರನ್ನು ವಂಚಿಸಲಾಯಿತು. ಕೈಗಾರಿಕೆ ಸ್ಥಾಪನೆಯಾದಲ್ಲಿ ಭೂ ಬೆಲೆಯ ಜೊತೆ ಜಮೀನು ನೀಡಿದ ಪ್ರತಿಯೊಂದು ಕುಟುಂಬಕ್ಕೆ ತಲಾ ಒಂದು ಉದ್ಯೋಗ ನೀಡಲಾಗುವುದು ಮತ್ತು ಗ್ರಾಮಾಭಿವೃದ್ಧಿಗೆ ನೆರವು ನೀಡಲಾಗುವುದೆಂದು ಭರವಸೆ ನೀಡಿ, ನಂತರ ಜಮೀನು ಪಡೆದುಕೊಂಡ ಎರಡು ವರ್ಷಗಳಲ್ಲಿಯೇ ಕೈಗಾರಿಕೆ ನಿರ್ಮಿಸುವ ಒಪ್ಪಂದವಿದ್ದರೂ, ಇಂದಿಗೆ 28 ವರ್ಷ ಕಳೆದರೂ ಕೈಗಾರಿಕೆ ನಿರ್ಮಾಣ ಮಾಡಲಿಲ್ಲ ಮತ್ತು ಉದ್ಯೋಗ ನೀಡಲಿಲ್ಲ ಮಾತ್ರವಲ್ಲ ಗ್ರಾಮಗಳ ಅಭಿವೃದ್ಧಿಗೆ ಕ್ರಮವಹಿಸಲಾಗುವುದೆಂದು ಭರವಸೆ ನೀಡಿದ್ದು, ಇಲ್ಲಿಯವರೆಗೆ ಯಾವುದೇ ಕೆಲಸವೂ ನಡೆದಿಲ್ಲ ಎಂದರು.

ಇಷ್ಟೆಲ್ಲಾ ಒಪ್ಪಂದ ಉಲ್ಲಂಘನೆ ಮಾಡಿದರೂ ಕೆಐಎಡಿಬಿ ಸಂಸ್ಥೆಯು ಬಿಎಸ್‌ಎಎಲ್ ಕಂಪನಿಯಿಂದ ಜಮೀನುಗಳನ್ನು ವಾಪಾಸು ಪಡೆಯುವ ಮತ್ತು ಒಪ್ಪಂದದ ಉಲ್ಲಂಘನೆಯ ಮೇಲೆ ಯಾವುದೇ ಶಿಸ್ತು ಕ್ರಮವಹಿಸದೇ ಮೌನವಹಿಸಿರುವುದು ಅದು ಜನವಿರೋಧಿ ನಿಲುಮೆ ಮತ್ತು ಸರ್ಕಾರವು ಇದರಲ್ಲಿ ಶಾಮೀಲುತನವನ್ನು ಎತ್ತಿ ತೋರುತ್ತದೆ. ಬದಲಿಗೆ, ಐಎಫ್‌ಸಿಐಯಿಂದ ನಮ್ಮ ಜಮೀನುಗಳ ಮೇಲೆ ಕಂಪನಿ ಸಾಲ ಪಡೆಯಲು ನೆರವಾಗಿದೆ ಮತ್ತು ಬಿಎಸ್‌ಎಎಲ್ ಕಂಪನಿ, ಕೈಗಾರಿಕೆ ನಿರ್ಮಾಣವನ್ನು ಪೂರ್ಣಗೊಳಿಸದೇ, ಉತ್ಪಾದನೆ ಮಾಡದೇ, ಕೈಗಾರಿಕೆ ನಷ್ಟದಲ್ಲಿದೆಯೆಂದು ಮತ್ತು ರೋಗಗ್ರಸ್ಥವೆಂದು ಹೇಳಿಕೊಂಡು ಐಎಫ್‌ಸಿಐನ್ನು ವಂಚಿಸಿದೆ. ಇಂತಹದೊಂದು ಫ್ರಾಡ್ ಕಂಪನಿಗೆ ನಮ್ಮಿಂದ ನಮ್ಮನ್ನು ವಂಚಿಸಿ ಅತ್ಯಂತ ಕಡಿಮೆ ಬೆಲೆಗೆ ಭೂಮಿ ಕೆಐಎಡಿಬಿ ಪಡೆದಿದೆ ಎಂದು ಆರೋಪಿಸಿದರು.

ಐಎಫ್‌ಸಿಐ ಮತ್ತು ಕೆಐಎಡಿಬಿ ಈ ಕುರಿತಂತೆ ರೈತರ ಗಮನಕ್ಕೆ ತರದೇ ಶೇಷಾ ಗೋವಾ ಕಂಪನಿಗೆ ಹರಾಜಿನಲ್ಲಿ ನಮ್ಮ ಜಮೀನುಗಳನ್ನು 220 ಕೋಟಿ ರೂಗಳಿಗೆ 2011 ರಲ್ಲಿಯೇ ಮಾರಾಟ ಮಾಡಿವೆ. ನಮ್ಮಿಂದ ಅತ್ಯಂತ ಕಡಿಮೆ ಬೆಲೆಗೆ ಅಂದರೇ ತಲಾ ಎಕರೆಗೆ ಕೇವಲ 43000, 56,000, 72,000 ಮತ್ತು 85,000 ರೂಗಳಂತೆ ಕೇವಲ 8 ಕೋಟಿ ರೂ.ಗಳಿಗೆ ಪಡೆದ ಜಮೀನುಗಳನ್ನು ಕೇವಲ 8–10 ವರ್ಷಗಳಲ್ಲಿ ತಲಾ ಎಕರೆಯನ್ನು 31.42 ಲಕ್ಷ ರೂಗಳಿಗೆ ಮಾರಾಟ ಮಾಡಿಕೊಂಡಿದ್ದಾರೆ. ಇದರಿಂದ ನಮಗೆ ಭೂ ಬೆಲೆಯಲ್ಲಾದ ಮೋಸ ಸ್ಪಷ್ಟವಾಗುತ್ತದೆ ಎಂದರು.

ಈ ಶೇಷಾ ಗೋವಾ ಕಂಪನಿಯು ನಮ್ಮಗಳ ಕುರಿತಂತೆ ಯಾವುದೇ ಗಮನವನ್ನು ಹರಿಸದೇ ಭುಮಿಯ್ನು ಪಡೆದುಕೊಂಡು ಇಂದಿಗೆ ಹನ್ನೆರಡು ವರ್ಷಗಳಾಗಿವೆ. ಇದು ಕೂಡಾ ಕೈಗಾರಿಕೆ ನಿರ್ಮಿಸಲಿಲ್ಲ ನಮ್ಮಗಳಿಗೆ ಉದ್ಯೋಗ ನೀಡಲಿಲ್ಲ. ಈಗಲೂ ಈ ಕುರಿತಂತೆ ಕೆಐಎಡಿಬಿ ಏನೂ ಕ್ರಮವಹಿಸಲಿಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ ಎಂದು ತಿಳಿಸಿದರು.



ಹೀಗೆ ಈ ಎಲ್ಲಾ ಕಂಪನಿಗಳು ಕೈಗಾರಿಕೆ ನಿರ್ಮಾಣ ಮಾಡದೇ ನಮ್ಮ ಕುಟುಂಬಗಳಿಗೆ ಉದ್ಯೋಗವನ್ನು ನೀಡದೇ ಕಳೆದ 27 ವರ್ಷಗಳಿಂದ ವಂಚಿಸುತ್ತಿದ್ದರೂ ನಮಗೆ ನ್ಯಾಯ ಕೊಡಿಸುವ ಯಾವುದೇ ಕೆಲಸವನ್ನು ರಾಜ್ಯ ಸರಕಾರವೂ, ಜಿಲ್ಲಾಧಿಕಾರಿಗಳು ಸೇರಿದಂತೆ ಮಾಡದಿರುವುದು ಸ್ಪಷ್ಟವಿದೆ. ಉದ್ಯೋಗವಿಲ್ಲದೇ ಮತ್ತು ಜಮೀನುಗಳು ಸಾಗುವಳಿಗೆ ಲಭ್ಯವಿಲ್ಲದೇ ನಮ್ಮನ್ನು ಸಂಕಷ್ಟಕ್ಕೀಡು ಮಾಡಿದರೇ ಬಿಎಸ್‌ಎಎಲ್ ಮತ್ತು ಶೇಷ ಗೋವಾದಂತಹ ಕಂಪನಿಗಳಿಗೆ ಭಾರೀ ಲಾಭ ಮಾಡಿಕೊಟ್ಟಿವೆ ಎಂದರು.

ನಮಗೆ ಭೂ ಬೆಲೆಯಲ್ಲಿ ತಲಾ ಎಕರೆಗೆ ದಶ ಲಕ್ಷಾಂತರ ರೂ. ವಂಚನೆಯಾಗಿರುವುದು ಮಾತ್ರವಲ್ಲಾ, ಉದ್ಯೋಗ ದೊರೆತು ಪ್ರತಿ ವರ್ಷ ಸರಾಸರಿ 2.5 ಲಕ್ಷರೂ ದುಡಿಯುತ್ತಿದ್ದೆವೆಂದರೂ ಒಟ್ಟಾರೆ ಒಂದೊಂದು ಕುಟುಂಬಗಳು ಈ 25 ವರ್ಷಗಳಲ್ಲಿ ಸುಮಾರು 65 ಲಕ್ಷರೂ ಆದಾಯದಿಂದ ವಂಚಿತರಾಗಿದ್ದೇವೆ. ಭೂಮಿಯಿಂದ ತಲಾ ಎಕರೆಗೆ 50,000 ರೂ ಪ್ರತಿವರ್ಷ ಪಡೆಯುತ್ತಿದ್ದೆವೆಂದರೂ ಒಟ್ಟಾರೆ ಈ 25 ವರ್ಷಗಳಲ್ಲಿ ಒಂದೊಂದು ಎಕರೆಗೆ ತಲಾ 12.5 ಲಕ್ಷರೂ ನಷ್ಟ ಹೊಂದಿದ್ದೇವೆ. ಹೀಗೆ ನಮ್ಮೆಲ್ಲಾ ಕುಟುಂಬಗಳು ಐದು ನೂರು ಕೋಟಿ ರೂಗಳಿಗೂ ಅಧಿಕ ನಷ್ಟವನ್ನು ಹೊಂದಿವೆ.



ಹೀಗಾಗಿ, ತಾವುಗಳು ಈ ಕೂಡಲೇ ಮಾನ್ಯ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಿ ನಮಗೆ ನ್ಯಾಯ ಒದಗಿಸಿ, ಈ ಕೆಳಕಂಡಂತೆ ಕ್ರಮ ವಹಿಸಲು ಮನವಿ ಮಾಡಿದರು.

ಯಾವುದೇ ಕಂಪನಿಯು ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡು ಒಪ್ಪಂದದಂತೆ ಕೈಗಾರಿಕೆ ನಿರ್ಮಾಣ ಮಾಡದೇ ಒಪ್ಪಂದ ಉಲ್ಲಂಘಿಸಿರುವುದರಿಂದ ತಕ್ಷಣವೇ ಸದರಿ ಜಮೀನುಗಳನ್ನು ಮೂಲ ರೈತರಿಗೆ ವಾಪಾಸು ನೀಡಬೇಕು. ಸರಕಾರ ಅಥವಾ ಕೆಐಎಡಿಬಿ ನಮ್ಮ ಜಮೀನುಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವುದಾದರೇ ಅಲ್ಲಿ ಯಾವುದೇ ಕಂಪನಿ ಕೈಗಾರಿಕೆ ನಿರ್ಮಾಣ ಮಾಡುವ ವರ್ಷದಲ್ಲಿ ಹೊಸ ಭೂ ಬೆಲೆ ನಿಗದಿಸಿ ನೀಡಬೇಕು. ಅದೇ ರೀತಿ ಈ 28 ವರ್ಷಗಳಲ್ಲಿ ಆದ ಉದ್ಯೋಗ ಮತ್ತಿತರೆ ನಷ್ಟಕ್ಕೆ ಪರಿಹಾರವಾಗಿ ತಲಾ ಕುಟುಂಬಕ್ಕೆ ಕನಿಷ್ಠ 50 ಲಕ್ಷ ರೂ ಪರಿಹಾರ ಒದಗಿಸಬೇಕು.

ಸದರಿ ಪರಿಹಾರವನ್ನು ಬಿಎಸ್‌ಎಎಲ್ ಮತ್ತು ಶೇಷಾ ಗೋವಾ ಕಂಪನಿಗಳ ಅಥವಾ ಅದರ ಮಾಲೀಕರ ಆಸ್ತಿಗಳನ್ನು ಜಪ್ತಿಮಾಡಿಕೊಂಡು ಮತ್ತು ಕೆಐಎಡಿಬಿ ಆಸ್ತಿಗಳನ್ನು ಜಪ್ತಿಮಾಡಿ ಒದಗಿಸಬೇಕು. ಅದನ್ನು ಮಾಡಲು ಸರಕಾರಕ್ಕೆ ಸಾದ್ಯವಾಗದಿದ್ದರೇ ರಾಜ್ಯ ಸರಕಾರವೇ ಒದಗಿಸಬೇಕು.

ಬಿಎಸ್‌ಎಎಲ್ ಕಂಪನಿಯ ವಂಚನೆಯ ಇಡೀ ಪ್ರಕರಣವನ್ನು ಲೋಕಾಯುಕ್ತ ಇಲ್ಲವೇ ನ್ಯಾಯಾಂಗ ತನಿಖೆಗೆ ವಹಿಸಬೇಕು. ಕೆಐಎಡಿಬಿ ಅಧಿಕಾರಿಗಳ ಶಾಮೀಲುತನವನ್ನು ಪ್ರತ್ಯೇಕವಾಗಿ ತನಿಖೆ ನಡೆಸಬೇಕು. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಬೇಕು ಎಂದರು.

ಈ ಸಂದರ್ಭದಲ್ಲಿ ಈ ಪ್ರತಿಭಟನಾ ಮೆರವಣಿಗೆಯಲ್ಲಿ ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷ ಯು.ಬಸವರಾಜ, ಜಿಲ್ಲಾಧ್ಯಕ್ಷ ವಿ.ಎಸ್.ಶಿವಶಂಕರ್, ಸಿಐಟಿಯು ಅಧ್ಯಕ್ಷರು ಜೆ ಸತ್ಯಬಾಬು ಜೆ ಚಂದ್ರಕುಮಾರಿ ರಿಟ ರಾಜ್ಯ ಜಂಟಿ ಕಾರ್ಯ, ಭೂ ಸಂತ್ರಸ್ಥರ ಹೋರಾಟ ಸಮಿತಿಯ ಮುಖಂಡರಾದ ಬಿ.ಎಂ.ಬಸವರಾಜ, ಬಿ.ಸೋಮಶೇಖರ, ಅಯ್ಯನಗೌಡ, ವೈ. ಈರಣ್ಣ ಅಮರಾಪುರ, ದೇವೇಂದ್ರಪ್ಪ ಚಾಗನೂರು ಸೇರಿದಂತೆ ಹಲವಾರು ಭೂ ಸಂತ್ರಸ್ಥರು ಉಪಸ್ಥಿತರಿದ್ದರು. ●

ಒಡಿಶಾ ರೈಲು ಅಪಘಾತ ಮತ್ತು ಸುರಕ್ಷತಾ ಪ್ರಶ್ನೆಗಳ ಬಗ್ಗೆ ಉನ್ನತ ಮಟ್ಟದ ನಿಷ್ಪಕ್ಷಪಾತ ತನಿಖೆ ನಡೆಯಬೇಕು–ಸಿಐಟಿಯು ಆಗ್ರಹ

ಒಡಿಶಾದ ಬಾಲಸೋರ್ ಬಳಿ ಜೂನ್ 2ರಂದು ಸಂಭವಿಸಿದ ಇತ್ತೀಚಿನ ಇತಿಹಾಸದಲ್ಲೇ ಅತ್ಯಂತ ಭೀಕರ ರೈಲು ಅಪಘಾತದ ಬಗ್ಗೆ ಸಿಐಟಿಯು ತೀವ್ರ ಕಳವಳ ವ್ಯಕ್ತಪಡಿಸಿದೆ. ಎರಡು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದ್ದ ಎಕ್ಸ್‌ಪ್ರೆಸ್ ರೈಲುಗಳು ಹಳಿ ತಪ್ಪಿದ್ದು ಮತ್ತು ನಿಂತಿದ್ದ ಗೂಡ್ಸ್ ರೈಲಿನೊಂದಿಗೆ ಡಿಕ್ಕಿಯಿಂದ ಅಪಘಾತ ಸಂಭವಿಸಿದೆ ಎಂದು ವರದಿಯಾಗಿದೆ. ನೂರಾರು ಪ್ರಯಾಣಿಕರು ಪ್ರಾಣ ಕಳೆದುಕೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಸಾವಿರಕ್ಕೂ ಹೆಚ್ಚು ಪ್ರಯಾಣಿಕರು ಮತ್ತು ಲೋಕೋ ಪೈಲಟ್‌ಗಳು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಅಪಘಾತದಲ್ಲಿ ತಮ್ಮ ಆತ್ಮೀಯರನ್ನು ಕಳೆದುಕೊಂಡ ಕುಟುಂಬಗಳಿಗೆ ಸಿಐಟಿಯು ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ ಮತ್ತು ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಹಾರೈಸಿದೆ.

ಇಂತಹ ಪ್ರಮುಖ ಅಪಘಾತಗಳು ಸೇರಿದಂತೆ ರೈಲ್ವೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದು ತೀವ್ರ ಕಳವಳಕಾರಿ ವಿಷಯವಾಗಿದೆ ಎಂದು ಅದು ಹೇಳಿದೆ. ಇದು ರೈಲ್ವೇ ಹಳಿಗಳು ಮತ್ತು ಇತರ ಮೂಲಸೌಕರ್ಯಗಳ ನಿರ್ವಹಣೆಯಲ್ಲಿನ ದಕ್ಷತೆ ಯಾವ ಸ್ಥಿತಿಯಲ್ಲಿದೆ ಮತ್ತು ಅಪಘಾತ ತಡೆಗಟ್ಟುವ ಸುರಕ್ಷತಾ ಕ್ರಮಗಳ ನಿರ್ವಹಣೆ ಯಾವ ರೀತಿಯಲ್ಲಿದೆ ಎಂಬ ಬಗ್ಗೆ ಬಹಳಷ್ಟು ಹೇಳುತ್ತದೆ. ನಿರ್ಣಾಯಕವಾದ ಮತ್ತು ಅಗತ್ಯವಾಗ ಸುರಕ್ಷತಾ ಕೆಲಸಗಳ ಗಣನೀಯ ಭಾಗವನ್ನು ಹೊರಗಿನವರಿಗೆ/ಗುತ್ತಿಗೆಗೆ ಒಳಪಡಿಸಲಾಗಿದೆ. ಎಲ್ಲಾ ರೈಲ್ವೆ ವಲಯಗಳಲ್ಲಿ ಸುರಕ್ಷತಾ ವಿಭಾಗಗಳು ಮತ್ತು ಲೋಕೋ ರನ್ನಿಂಗ್ ಸಿಬ್ಬಂದಿ ಸೇರಿದಂತೆ ಮಾನವಶಕ್ತಿಯ ಗಂಭೀರ ಕೊರತೆಯಿದೆ. ರೈಲ್ವೇ ಸೇವೆಗಳ ವಿಸ್ತರಣೆ, ವೇಗ ವರ್ಧನೆಗಳು, ವಿವಿಧ ಹೆಸರುಗಳಲ್ಲಿ ಹೊಸ ರೈಲುಗಳ ಪರಿಚಯ ಇತ್ಯಾದಿಗಳ ಬಗ್ಗೆ ಸರ್ಕಾರದ ಜೋರಾದ ಪ್ರಚಾರದ ನಡುವೆ, ಅವೆಲ್ಲದಕ್ಕೆ ಅನುಗುಣವಾಗಿ ಮತ್ತು ನಿಯತಕಾಲಿಕವಾಗಿ ಹಳಿಗಳ ಉನ್ನತೀಕರಣ / ನಿರ್ವಹಣೆ ಮತ್ತು ಇತರ ಕಾರ್ಯಾಚರಣೆಯ ಮೂಲಸೌಕರ್ಯಗಳನ್ನು ಯಾವುದೇ ರಾಜಿಯಿಲ್ಲದೆ ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆಯೇ ಎಂಬುದರ ತನಿಖೆ ಮತ್ತು ಉಸ್ತುವಾರಿ ಇಂತಹ ಭೀಕರ ಹಾಗೂ ಆಘಾತಕಾರಿ ಮಾನವ ದುರಂತವನ್ನು ತಪ್ಪಿಸಲು ಮತ್ತು ತಡೆಗಟ್ಟಲು ಅಗತ್ಯವಾಗಿದೆ ಎಂದು ಸಿಐಟಿಯು ಹೇಳಿದೆ.

ಸಿಐಟಿಯು ಎಲ್ಲಾ ಸಂತ್ರಸ್ತರಿಗೆ, ಪ್ರಾಣ ಕಳಕೊಂಡವರ ಕುಟುಂಬಗಳಿಗೆ ಮತ್ತು ಗಾಯಗೊಂಡವರಿಗೆ ನ್ಯಾಯಸಮ್ಮತ ಪರಿಹಾರವನ್ನು ಕೊಡಬೇಕು ಎನ್ನುತ್ತ ಸಿಐಟಿಯು, ಈ ಅಪಘಾತದ ಕಾರಣವನ್ನು ನಿರ್ಧರಿಸಲು ಸಂಪೂರ್ಣ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಒತ್ತಾಯಿಸಿದೆ. ನಿರ್ವಹಣೆ ಮತ್ತು ಸಂಬಂಧಿತ ನೀತಿ ಕ್ರಮಗಳ ಹೊಣೆಗಾರಿಕೆಯನ್ನು ನಿರ್ಧರಿಸಲು ಮೂಲಸೌಕರ್ಯ ನಿರ್ವಹಣೆ, ಸಮಗ್ರ ಸುರಕ್ಷತಾ ನಿರ್ವಹಣೆ ಮತ್ತು ಆ ನಿರ್ಣಾಯಕ ಕಾರ್ಯಗಳಲ್ಲಿ ಒಳಗೊಂಡಿರುವ ಮಾನವಶಕ್ತಿಯ ನಿರ್ವಹಣೆಯನ್ನು ಪರೀಕ್ಷಿಸಬೇಕು. 'ಸುಧಾರಣೆಗಳು' ಎಂಬ ಹೆಸರಿನಲ್ಲಿ ಮೋದಿ ಸರಕಾರ ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆಗೆ ಧಕ್ಕೆ ತರಲು ಸಾಧ್ಯವಿಲ್ಲ ಎಂದು ಸಿಐಟಿಯು ಒತ್ತಿ ಹೇಳಿದೆ.

ಕಲಬುರಗಿ ಜಿಲ್ಲೆ: ಕಾಂಗ್ರೆಸ್ ಗೆ ಹೆಚ್ಚಿದ ಸ್ಥಾನಗಳು.....

ಪುಟ 2 ರಿಂದ

ನಿಪುಣ. ಇದೆಲ್ಲವೂ ಜನರಿಗೆ ಬಹಳ ಬೇಸರ ತರಿಸಿತ್ತು. ವಾರಗಟ್ಟಲೆ ಕರ್ಫ್ಯೂ ರೀತಿಯ ನಿಷೇಧಾಜ್ಞೆಯಲ್ಲಿ ಬಡ ಮುಸ್ಲಿಮರು ಬಳಲಿದ್ದಾರೆ. ಮುಸ್ಲಿಂ ಸಮುದಾಯದೊಳಗಿನ ಮೂಲಭೂತವಾದಿಗಳಿಂದಲೂ ಸಾಮಾನ್ಯ ಜನರು ಹೈರಾಣಾಗಿದ್ದಾರೆ. ಅವರಿಗೆ ಎಲ್ಲದರಿಂದಲೂ ಬಿಡುಗಡೆ ಬೇಕಿತ್ತು. ನಿರಾಳ ಬದುಕು ಬೇಕಿತ್ತು. ಹೀಗಾಗಿ ಏಕಮುಖವಾಗಿ ಮುಸ್ಲಿಂ ಮತಗಳು ಕಾಂಗ್ರೆಸ್ ನತ್ತ ವಾಲಿವೆ. ಜೆಡಿಎಸ್ ಪಕ್ಷವು ಬಿಜೆಪಿಯನ್ನು ದೃಢವಾಗಿ ಸೋಲಿಸುವ ಭರವಸೆಯ ಪಕ್ಷವೆಂದು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಕ್ಕೆ ನಂಬಲು ಸಾಧ್ಯವಾಗಲಿಲ್ಲ. ಮತ್ತು ಭರವಸೆಯು ಬರಲಿಲ್ಲ. ಅದು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಜೆಡಿಎಸ್ ನ ಹಿಂದಿನ ನಡೆಯ ಕಾರಣವಾಗಿದೆ. ಹೀಗಾಗಿ ಮೂರನೆಯ ಪರ್ಯಾಯ ಶಕ್ತಿಯಾಗಿ ಎಡ ಮತ್ತು ಜಾತ್ಯಾತೀತ ಪಕ್ಷಗಳೊಂದಿಗೆ ಬೆಳೆದು ಬರಬೇಕಾದ ಜೆಡಿಎಸ್ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆ ಕಾಣುತ್ತಿಲ್ಲ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾದ ರಾಜಕೀಯ ಶಕ್ತಿ ಬೆಳೆಯಬೇಕಿದೆ.

ಜಿಲ್ಲೆಯಲ್ಲಿ ಒಂಬತ್ತು ವಿಧಾನ ಸಭಾ ಕ್ಷೇತ್ರಗಳಿವೆ

ಸಿಪಿಐ(ಎಂ) ಕಲ್ಬುರ್ಗಿ ಜಿಲ್ಲಾ ಸಮಿತಿಯು ಜೇವರ್ಗಿ ವಿಧಾನ ಸಭಾ ಕ್ಷೇತ್ರದಲ್ಲಿ ಮಾತ್ರ ಜೆಡಿಎಸ್ ಪಕ್ಷಕ್ಕೆ ಬೆಂಬಲಿಸಲು ತೀರ್ಮಾನ ಮಾಡಿತ್ತು. ಕಲಬುರ್ಗಿ ಗ್ರಾಮೀಣದಲ್ಲಿ ನಮ್ಮ ಪಕ್ಷವೇ ಸ್ಪರ್ಧಿಸುವುದು. ಇನ್ನುಳಿದ ಏಳು ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯವಿರುವ ಪಕ್ಷವು ಕಾಂಗ್ರೆಸ್ ಎಂದು ಗುರುತಿಸಿದ್ದರಿಂದ ಆ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಗೆ ಮತ ಹಾಕಿಸಬೇಕೆಂದು ನಿರ್ಣಯ ಮಾಡಲಾಗಿತ್ತು. ಜೇವರ್ಗಿ ತಾಲ್ಲೂಕಿನಲ್ಲಿ ರಾಜಕೀಯ ಸಮಾವೇಶ ನಡೆಸಿ ನಮ್ಮ ನಿಲುವು ಹೇಳಲಾಗಿದೆ. ಕಲಬುರ್ಗಿ ನಗರದ ಉತ್ತರದಲ್ಲಿ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯರು ಮತ್ತು ಜಿಲ್ಲಾ ಸಮಿತಿ ಸದಸ್ಯರು ಕೆಲಸ ಮಾಡಿದ್ದಾರೆ.

ಕಾಂಗ್ರೆಸ್ ಸ್ಪರ್ಧೆ

ಈ ಚುನಾವಣೆಯಲ್ಲಿ ಕಾಂಗ್ರೆಸ್ ಐಕ್ಯತೆಯಿಂದ ಕಾಣಿಸಿಕೊಂಡಿದೆ. ರೈತರ ಪ್ರಶ್ನೆ, ರಾಷ್ಟ್ರೀಯ ಶಿಕ್ಷಣ ನೀತಿ, ಎನ್ಪಿ.ಆರ್-ಎನ್.ಸಿ.ಸಿ.-ಸಿಎಎ ಮುಂತಾದ ಬೇರೆ ಬೇರೆ ಸಮಸ್ಯೆಗಳಲ್ಲಿ ಮಧ್ಯ ಪ್ರವೇಶ ಮಾಡಿದೆ. ರೈತರ ತೊಗರಿಗೆ ನಟೆ ಹಾಯ್ದಾಗಲೂ ಕಾಂಗ್ರೆಸ್ ಹೋರಾಟ ನಡೆಸಿದೆ. ಬಹಳ ಗಂಭೀರವಾಗಿ ಕೈಗೆತ್ತಿಕೊಂಡಿದೆ ಅಂತೇನಿಲ್ಲ. ಆದರೂ ಅಲ್ಲಲ್ಲಿ ಮಧ್ಯ ಪ್ರವೇಶ ಮಾಡಿದೆ. ಹಾಗಂತ ಜನತೆಯ ಸಮಸ್ಯೆಗಳನ್ನು ಪ್ರದಾನವಾಗಿ ಪರಿಗಣಿಸಿದೆಯೆ? ಎಂದರೆ ಇಲ್ಲ ಎಂದೇ ಹೇಳಬೇಕಾಗುತ್ತದೆ. ಕಾಂಗ್ರೆಸ್ ಗೆಲುವಿಗೆ ಬೇರೆ ಬೇರೆ ಅಂಶಗಳು ಕಾರಣವಾಗಿವೆ. ಮಲ್ಲಿಕಾರ್ಜುನ ಖರ್ಗೆಯವರು ರಾಷ್ಟ್ರೀಯ ಅಧ್ಯಕ್ಷರಾಗಿದ್ದು. ಬಿಜೆಪಿಯು ಜಿಲ್ಲೆಯಲ್ಲಿ ಕೋಮುದಂಗೆಯ ಮೂಲಕ ಗೆಲ್ಲಲು ಹೊರಟಿದ್ದು ಮತ್ತು ಅದು ತನ್ನ ಬೇಸ್ ಅನ್ನೇ ಅಲ್ಲಾಡಿಸುವುದು ಎಂಬ ಸಾಮಾನ್ಯ ತಿಳಿವಳಿಕೆ ಕಲಬುರ್ಗಿಯ ಕಾಂಗ್ರೆಸ್ ನ ಕೆಲವರಲ್ಲಿ ಇದೆ. ಜಾತಿ ಅಂಶವೂ ಪ್ರದಾನವಾಗಿದೆ. ಬಿಜೆಪಿಯು ಚಿತಾಪುರದಂತಹ ಕಡೆ ರೌಡಿ ಶೀಟರ್ ಗೆ ಟಿಕೆಟು ಕೊಟ್ಟಿರುವುದು, ಬಿಜೆಪಿ ಸೋಲಿಸಲು ಪ್ರಗತಿಪರ ವ್ಯಕ್ತಿ ಸಂಘ ಸಂಸ್ಥೆಗಳು ಶ್ರಮಿಸಿದ್ದು, ಮುಸ್ಲಿಂ ಸಮುದಾಯವು ಬಿಜೆಪಿಯನ್ನು ಸೋಲಿಸಲು ದೃಢವಾಗಿ ನಿಂತಿದ್ದು, ಹಣದ ಹಂಚುವಿಕೆಯ ಮೇಲುಗೈ ಸಹ ಕಾರಣವಾಗಿದೆ. ಅಫಜಲಪುರ ಮತ್ತು ಚಿಂಚೋಳಿ ಹೊರತುಪಡಿಸಿದರೆ ಎಲ್ಲ ಕ್ಷೇತ್ರಗಳಲ್ಲಿ ಓಟಿಂಗ್ ಪರ್ಸೆಂಟೇಜ್ ಹೆಚ್ಚಾಗಿದೆ. ಅಫಜಲಪುರದಲ್ಲಿ ಕಾಂಗ್ರೆಸ್ ಬರುವುದಿಲ್ಲ ಎಂಬುದೇ ಇತ್ತು. ಪಂಚಮಸಾಲಿ, ಆದಿ, ದೀಕ್ಷ ಎಂಬ ಲಿಂಗಾಯತ ಉಪಜಾತಿಗಳ ತಿಕ್ಕಾಟದಲ್ಲಿ ಮತ್ತು ಗುತ್ತೆದಾರ ಕುಟುಂಬದೊಳಗಿಂದಲೇ ಇಬ್ಬರು ಸ್ಪರ್ಧೆ ಮಾಡಿದ್ದು ಈ ಎಲ್ಲದರ ನಡುವೆ ಕಾಂಗ್ರೆಸ್ ಗೆದ್ದು ಬಿಟ್ಟಿದೆ.



ಚಿಂಚೋಳಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಒಂದೇ ಸಮುದಾಯದ ಅಭ್ಯರ್ಥಿಗಳು. ಹಿಂದಿನ ಕಾಂಗ್ರೆಸ್ ನಿಂದ ಕಳೆದ ಎಂಪಿ ಚುನಾವಣೆಯಲ್ಲಿ ಬಿಜೆಪಿಗೆ ಪಕ್ಷಾಂತರ ಮಾಡಿ ಸಂಸದರಾಗಿ ಆಯ್ಕೆಯಾದವರ ಮಗನೇ ಚಿಂಚೋಳಿಯ ಉಪಚುನಾವಣೆಯಲ್ಲಿ ಎಂಎಲ್ಎಯಾದರು. ಈಗ ಪುನ: ಅದೇ ಅಭ್ಯರ್ಥಿಯನ್ನು ಜನರು ಆರಿಸಿದ್ದಾರೆ. ಲಂಬಾಣಿ ಸಮುದಾಯವು ಬಿಜೆಪಿಗೆ ಓಟು ಹಾಕಲಿಕ್ಕಿಲ್ಲ ಎಂಬುದು ಚರ್ಚೆಯಲ್ಲಿತ್ತು. ಇತರೆ ಕ್ಷೇತ್ರಗಳಲ್ಲಿ ಹಾಗೆ ಆಗಿದೆ. ಆದರೆ ಚಿಂಚೋಳಿಯಲ್ಲಿ ಮಾತ್ರ ಲಂಬಾಣಿ ಮತಗಳನ್ನು ಬಿಜೆಪಿ ಪಡೆದಿದೆ. ಚಿಂಚೋಳಿಯಲ್ಲಿ ಹೊರಗಿನಿಂದ ಬಂದು ಮತ ಚಲಾಯಿಸಿದವರೂ ಇದ್ದಾರೆ. ವರ್ಷದ ಮೊದಲಲ್ಲಿಯೇ ಮತಪಟ್ಟಿಯಲ್ಲಿ ದೊಡ್ಡ ಪ್ರಮಾಣದಲ್ಲಿ ತಮ್ಮದೇ ಓಟರುಗಳ ಹೆಸರುಗಳನ್ನು ಸೇರಿಸಿದ ಅನುಮಾನಗಳು ಬಲವಾಗಿವೆ. ಚಿಂಚೋಳಿಯಿಂದ ವಿಜಯಪುರಕ್ಕೆ 120 ಜನ ಹೋಗಿದ್ದು ಸಿಕ್ಕಿ ಬಿದ್ದಿದ್ದು ಸುದ್ದಿಯಾಗಿದೆ. ಹಾಗೆಯೇ ಕಲಬುರಗಿ ಮತ್ತು ಸಮೀಪದ ರಾಜ್ಯಗಳಿಂದ ಜನರು ಬಂದು ಮತ ಚಲಾಯಿಸಿದ್ದಿದೆ. ಚಿಂಚೋಳಿ ಮತ್ತು ಕಲಬುರಗಿ ಗ್ರಾಮೀಣದಲ್ಲಿ ಬಿಜೆಪಿಯು ಮಿತಿಯಿಲ್ಲದಷ್ಟು ಹಣವನ್ನು ಹಂಚಿದೆ.

ಕಲಬುರಗಿ ಗ್ರಾಮೀಣದಲ್ಲಿ ಕಾಂಗ್ರೆಸ್ ಅಭ್ಯರ್ಥಿಯು ಹಿಂದಿನ ಬಿಜೆಪಿಯಲ್ಲಿದ್ದವರೇ. ಅವರು ಕಡೆಯತನಕ ಹಣ ಹಂಚಲಿಲ್ಲ ಎಂದು ಕಾರ್ಯಕರ್ತರು ದೂರುತ್ತಾರೆ. ಕೊನೆಯ ದಿನದಲ್ಲಿ ಕೊಟ್ಟ ಹಣ ಜನರಿಗೆ ತಲುಪಿಲ್ಲ ಎಂಬುದು ಸಹ ಸತ್ಯವೇ ಇರಬಹುದು. ಕಾಂಗ್ರೆಸ್ ಗೆ ಗೆಲ್ಲಿಸಬೇಕೆಂಬುದು ಮತದಾರರ ಮತ್ತು ಅನೇಕ ಸಂಘ ಸಂಸ್ಥೆಗಳ ವ್ಯಕ್ತಿಗಳ ಬಲವಾದ ಇಚ್ಛೆಯಿದ್ದರೂ ಅಭ್ಯರ್ಥಿಯ ಕಾರಣದಿಂದಲೂ ಕಾಂಗ್ರೆಸ್ ಸೋಲು ಕಂಡಿತು. ನಮ್ಮ ಪಕ್ಷದ ಪುರಾತನ ಮತದಾರರು ಸಹ ಬಿಜೆಪಿ ನಮ್ಮ ಶತ್ರು ಅದನ್ನು ಸೋಲಿಸಲು ಕಾಂಗ್ರೆಸ್ ಗೆ ಓಟು ಮಾಡಬೇಕು ಎಂದು ಪ್ರಚಾರ ಮಾಡಿದ್ದಾರೆ. ಆದರೂ ಕಾಂಗ್ರೆಸ್ ಸೋತಿದೆ. ಹಾಗಂತ ಓಟಿನ ಪರ್ಸೆಂಟೇಜ್ ಕಡಿಮೆಯಾಗಿಲ್ಲ. ಕಾಂಗ್ರೆಸ್ 45.5% ಮತಗಳು ಅಂದರೆ ಹಿಂದಿನ ಚುನಾವಣೆಗಿಂತಲೂ ಹೆಚ್ಚಿಗೆ ಪಡೆದಿದೆ. ಹಾಗೆಯೇ 36.8% ಪಡೆದಿರುವ ಬಿಜೆಪಿಯೂ ಹಿಂದಿನ ಚುನಾವಣೆಗಿಂತಲೂ ಹೆಚ್ಚಿಗೆ ಪಡೆದಿದೆ.

ಜೆಡಿ(ಎಸ್)

ಜಿಲ್ಲೆಯಲ್ಲಿ ಈ ಬಾರಿ ಎರಡು ಸ್ಥಾನಗಳನ್ನು ಹೊರತುಪಡಿಸಿ ಉಳಿದ ಏಳು ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಕಾಂಗ್ರೆಸ್ ಬಿಜೆಪಿ ಹೊರತುಪಡಿಸಿ ಇತರೆ ಪಕ್ಷಗಳು ಜೆಡಿಎಸ್ ಸಹ ಜಿಲ್ಲೆಯಲ್ಲಿ ಹೆಚ್ಚು ಮತಗಳನ್ನು ಪಡೆದು ವಿಧಾನ ಸಭಾ ಚುನಾವಣೆಯಲ್ಲಿ ಆಯ್ಕೆಯಾಗುವ ಪರಿಸ್ಥಿತಿಯಲ್ಲಿ ಇಲ್ಲ. ಈ ಬಾರಿ ವಿಧಾನ ಸಭಾ ಚುನಾವಣೆಯಲ್ಲಿ ಜೆಡಿಎಸ್ ಮತಗಳ ಪರ್ಸೆಂಟೇಜ್ ಗಣನೀಯವಾಗಿ ಹೆಚ್ಚಳವಾಗಿದೆ. ಜೇವರ್ಗಿಯಲ್ಲಿ ಜೆಡಿಎಸ್ ನಿಂದ ಹಿಂದಿನ ಅಭ್ಯರ್ಥಿಯಾಗುತ್ತಿದ್ದವರು ಕಾಂಗ್ರೆಸ್ ಗೆ ಪಕ್ಷಾಂತರ ಮಾಡಿದರು. ಮತ್ತು ಬಿಜೆಪಿಯಲ್ಲಿದ್ದಂತಹ ಹಿಂದಿನ ಅಭ್ಯರ್ಥಿ ಈ ಬಾರಿ ಜೆಡಿಎಸ್ ಗೆ ಪಕ್ಷಾಂತರ ಮಾಡಿರುವರು. ಹಾಗೆ ನೋಡಿದರೆ ಜೇವರ್ಗಿ ತಾಲ್ಲೂಕಿನಲ್ಲಿ ಹಿಂದೆ ಸಿಪಿಐ (ಭಾರತ ಕಮ್ಯುನಿಸ್ಟ್ ಪಕ್ಷ) ಗಟ್ಟಿಯಾಗಿತ್ತು. ಕಾಂಗ್ರೆಸ್ ಪಕ್ಷವು ಅವರಲ್ಲಿ ಅನೇಕರನ್ನು ಆಮಿಷಕ್ಕೆ ಒಳಪಡಿಸಿ ತನ್ನೆಡೆಗೆ ಸೆಳೆಯಿತು. ಮತ್ತು ಚಳುವಳಿಯನ್ನು ದುರ್ಬಲಗೊಳಿಸಿತು. ಸಿಪಿಐನ ಜಿಲ್ಲಾ ಕಾರ್ಯದರ್ಶಿಯೇ ಜೆಡಿಎಸ್ ಗೆ ಬಂದರು. ಈ ಬಾರಿ ಚುನಾವಣೆಗೆ ಸ್ಪರ್ಧಿಸಿದ ವ್ಯಕ್ತಿಯು ಬಿಜೆಪಿಯಲ್ಲಿದ್ದೂ ಕೋಮುವಾದಿಯಲ್ಲದ ವ್ಯಕ್ತಿತ್ವ ಹೊಂದಿದ್ದೂ ಹೆಚ್ಚು ಮತಗಳು ಬರಲು ಕಾರಣವಾಗಿದೆ. ಜೇವರ್ಗಿಯು ಮೂರನೆಯ ರಾಜಕೀಯ ಪರ್ಯಾಯ ಶಕ್ತಿ ಬೆಳೆಯಲು ಅವಕಾಶವಿರುವ ತಾಲೂಕಾಗಿದೆ. ಕಾಂಗ್ರೆಸ್ ಆಂತರಿಕವಾಗಿ ಕೋಮವಾದಿಗಳಿಗೆ ಬೆಂಬಲಿಸುವ ನಿಲುವು ಹೊಂದಿದ್ದು ಅಲ್ಪಸಂಖ್ಯಾತ ಸಮುದಾಯವು ಅಸಮಾದಾನ ಅಲ್ಲಿ ಹೊಂದಿದೆ. ಆದರೂ ಈ ಚುನಾವಣೆಯಲ್ಲಿ ಜೆಡಿಎಸ್ ಮತಗಳ ಸಂಖ್ಯೆಯನ್ನು ಅಧಿಕಗೊಳಿಸಿಕೊಂಡಿದೆ.

ಆಳಂದ್ ನಲ್ಲಿ ಮೊದಲ ಭಾರಿ ಬಹಿರಂಗ ಸಭೆ ನಡೆದಿತ್ತು. ಕುಮಾರಸ್ವಾಮಿಯವರೇ ಬಂದಿದ್ದರು. ಜೆಡಿಎಸ್ ಗೆ ಬಿಜೆಪಿಯನ್ನು ಸೋಲಿಸುವ ಶಕ್ತಿಯಿಲ್ಲ. ಆದರೆ ಇವರ ಸ್ಪರ್ಧೆಯಿಂದ ಬಿಜೆಪಿ ಗೆಲುವಾಗಬಹುದು ಎಂಬ ಅನುಮಾನವಿತ್ತು. ಚಿಂಚೋಳಿಯಲ್ಲಿಯೂ ಸಹ ಬಿಜೆಪಿಯ ಗೆಲುವಿಗಾಗಿಯೇ ಜೆಡಿಎಸ್ ಸ್ಪರ್ಧಿಸಿದಂತಾಗಿದೆ. ನಮ್ಮ ಪಕ್ಷದ ಜಿಲ್ಲಾ ಸಮಿತಿಯಲ್ಲಿ ಇಂತಹದೊಂದು ವಿಶ್ಲೇಷಣೆ ನಡೆದಿದೆ. ಬಿಜೆಪಿಯ ಗೆಲುವು ಆಗಿರುವುದು ಕೇವಲ 858 ಮತಗಳಿಂದ ಮಾತ್ರ. ಕಲಬುರಗಿ ಉತ್ತರದಲ್ಲಿಯೂ ಜೆಡಿಎಸ್ ಹೆಚ್ಚು ಮತಗಳು ಪಡೆದಷ್ಟು ಬಿಜೆಪಿ ಗೆಲುವು ಸರಳವಾಗುವುದಿತ್ತು. ಜೆಡಿಎಸ್ ಈ ಬಾರಿ ಜಿಲ್ಲೆಯಲ್ಲಿ ಜೇವರ್ಗಿ (60,532), ಸೇಡಂ (21,125), ಕಲಬುರ್ಗಿ ಉತ್ತರ (17,114), ಅಫಜಲಪುರ (8,153), ಚಿಂಚೋಳಿ (6,555) ಮತಗಳನ್ನು ಪಡೆದು ಗಮನ ಸೆಳೆದಿದೆ. ಹಿಂದಿಗಿಂತಲೂ ಈ ಚುನಾವಣೆಯಲ್ಲಿ ಜೆಡಿಎಸ್ 43.22% ರಷ್ಟು ಮತಗಳಲ್ಲಿ ಹೆಚ್ಚಳ ಕಂಡಿದೆ.

ಸಿಪಿಐ ಸ್ಪರ್ಧೆ

ಆಳಂದ ಮತ್ತು ಜೇವರ್ಗಿಯಲ್ಲಿ ಸ್ಪರ್ಧೆ ಮಾಡಿರುವರು. ಆಳಂದನಲ್ಲಿ 811, ಜೇವರ್ಗಿಯಲ್ಲಿ 501 ಮತಗಳನ್ನು ಪಡೆದಿರುವರು. ಆಳಂದನಲ್ಲಿ ಮತಗಳ ಪ್ರಮಾಣದಲ್ಲಿ ಕುಸಿತ ಕಂಡಿದೆ. ಆಳಂದನಲ್ಲಿ ಒಂದು ಗ್ರಾಮ ಪಂಚಾಯತ್ (ತಡೋಳಾ)ನಲ್ಲಿ ಹಿಡಿತ ಹೊಂದಿದೆ ಸಿಪಿಐ. ಕಾಂಗ್ರೆಸ್ ಪಕ್ಷ ಒಂದಾದರೂ ಜಿಲ್ಲಾ ಪಂಚಾಯತ್ ಸ್ಥಾನಕ್ಕೆ ಹೊಂದಾಣಿಕೆ ಮಾಡಿಕೊಂಡರೆ ಸ್ಪರ್ಧೆಯಿಂದ ಹಿಂದೆ ಸರಿಯುವುದಾಗಿ ಸಿಪಿಐ ಆಳಂದನಲ್ಲಿ ಹೇಳಿತ್ತು. ಕಾಂಗ್ರೆಸ್ ಈ ಬಾರಿ ವ್ಯವಸ್ಥಿತವಾಗಿ ಚುನಾವಣೆ ಕೆಲಸ ಮಾಡಲು ಯೋಜನೆ ಮಾಡಿಕೊಂಡಿತ್ತು. ಮತ್ತು ತಾಲ್ಲೂಕಿನ ಪ್ರಗತಿಪರ ವೈಚಾರಿಕ ಚಿಂತಕರು ಬಿಜೆಪಿ ಸೋಲಿಸಲು ಅಭಿಪ್ರಾಯ ರೂಪಿಸಿದ್ದರು. ಮತ್ತು ಈ ಅವಧಿಯಲ್ಲಿ ನಮ್ಮ ಶಕ್ತಿಯು ಆಳಂದ ತಾಲ್ಲೂಕಿನಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ಮನರೇಗಾ ಮತ್ತು ಸೌಹಾರ್ದ ಚಟುವಟಿಕೆಯ ಕಾರಣವಾಗಿ ಕಾಂಗ್ರೆಸ್ ತಾನು ಸೋಲುವುದಿಲ್ಲ ಎಂಬ ನಂಬಿಕೆ ಹೊಂದಿತ್ತು. ಪಕ್ಷದ ಜಿಲ್ಲಾ ಸಮಿತಿ ನಿರ್ಣಯದಂತೆ ನಮ್ಮ ಮತಗಳು ಬಿಜೆಪಿ ಸೋಲಿಸಲು ಕಾಂಗ್ರೆಸ್ ಗೆ ಹಾಕಿಸಲಾಗಿದೆ.

ಎಸ್.ಯು.ಸಿ.ಐ. ಸ್ಪರ್ಧೆ

ಕಲಬುರಗಿಯ ಗ್ರಾಮೀಣ ಕ್ಷೇತ್ರದಲ್ಲಿ ಸ್ಪರ್ಧಿಸುವ ಸುಸಿ ಪಕ್ಷವು 2013ರಲ್ಲಿ ಪಡೆದ ಮತಗಳು 1673, 2018ರಲ್ಲಿ ಪಡೆದ ಮತಗಳು 1044, 2023 ರಲ್ಲಿ ಪಡೆದ ಮತಗಳು 881. ಶಹಬಾದನಲ್ಲಿ ಸುಸಿ ಪಕ್ಷದ ಸಂಘಟನೆಗಳಿಗೆ ಬಲವಿದೆ ಎಂದು ಹೇಳಲಾಗುತ್ತಿದೆ. ಆದರೆ ಶಹಾಬಾದ ವ್ಯಾಪ್ತಿಯಲ್ಲಿಯೂ ಮತಗಳು ಬರಲಿಲ್ಲ.

ಸ್ಥೂಲವಾದ ತುಲನಾತ್ಮಕ ವಿಶ್ಲೇಷಣೆ

ಆರ್.ಎಸ್.ಎಸ್. ಕಲಬುರಗಿ ಜಿಲ್ಲೆಯಲ್ಲಿ ಸೈದ್ಧಾಂತಿಕವಾಗಿ ವಿರೋಧಿಸುವವರ ಸೋಲಿಗಾಗಿ ಬಲವಾದ ಯೋಜನೆ ಮಾಡಿತ್ತು. ಕಳೆದ ವರ್ಷವೇ ಐದು ರಾಜ್ಯಗಳ ಬೈಠಕ್ ಸಭಾ ನಡೆಸಿದ್ದು ಸರಸಂಘ ಸಂಚಾಲಕ ಮೋಹನ ಭಾಗವತ್. ಇದನ್ನು ಮರೆಯಬಾರದು. ಲಿಂಗಾಯತ ಪ್ರತ್ಯೇಕ ಧರ್ಮದ ಕಿಡಿ ಹೊತ್ತಿಸಿದ್ದ ಆಳಂದ ಶಾಸಕ, ಸೇಡಂ ಶಾಸಕರನ್ನು ಮತ್ತು ಮಲ್ಲಿಕಾರ್ಜುನ ಖರ್ಗೆ ಇವರನ್ನು ಸೋಲಿಸುವಲ್ಲಿ ಕಳೆದ ವಿಧಾನ ಸಭಾ ಮತ್ತು ಸಂಸತ್ತು ಚುನಾವಣೆಯಲ್ಲಿ ಆರ್.ಎಸ್.ಎಸ್. ಯಶಸ್ಸು ಸಾಧಿಸಿತ್ತು. ಈಗಲೂ ಚಿತ್ತಾಪುರ, ಸೇಡಂ, ಆಳಂದ ಕ್ಷೇತ್ರಗಳು ಗುರಿಯಾಗಿದ್ದವು. ಸಾವಿರಾರು ಆರ್.ಎಸ್.ಎಸ್. ಕಾರ್ಯಕರ್ತರು ಮನೆಮನೆಗೆ ಪ್ರಚಾರ ಮಾಡಿದ್ದಾರೆ. ಚಿತ್ತಾಪುರದಲ್ಲಿ ರೌಡಿ ಶೀಟರ್ ನಿಗೆ ಟಿಕೇಟು ಕೊಟ್ಟು ಗೆಲ್ಲಿಸಬೇಕೆಂಬುದು ಮತ್ತು ಹೀನಾಯವಾಗಿ ಕಾಂಗ್ರೆಸ್ ಅನ್ನು ಸೋಲಿಸಬೇಕೆಂಬುದು ಅದರ ಉದ್ದೇಶವಾಗಿತ್ತು. ರೌಟಿಶೀಟರ್ ಪಡೆದ ಮತಗಳು ಕಡಿಮೆಯೇನಲ್ಲ, ಪಡೆದದ್ದು 67,683. ಹಿಂದಿನ ಮತಗಳಿಗಿಂತಲೂ ಹೆಚ್ಚು ಎಂಬುದು ಗಂಭೀರವಾದ ವಿಷಯ. ಜನಮಾನಸದಿಂದ ಬಿಜೆಪಿಯೇತರ ರಾಜಕೀಯ ಚಿಂತನೆಗಳನ್ನು ಅಳಸಿ ಹಾಕುವ ಮತ್ತು ಹಿಂದೂ ರಾಷ್ಟ್ರಕ್ಕಾಗಿ ರೌಡಿಗಳಂಥವರ ಅಗತ್ಯತೆ ಇದೆ ಎಂಬುದನ್ನು ಜನರ ವಿಚಾರವಾಗಿ ಮಾರ್ಪಡಿಸುವಲ್ಲಿ ಆರ್.ಎಸ್.ಎಸ್. ಯಶಸ್ವಿಯಾಗುತ್ತಿದೆ ಇಲ್ಲಿ ಎಂಬುದು ಗಮನಿಸಬೇಕು. ಅವರು ಅಂದಾಜಿಗೆ ನಿಲುಕದಷ್ಟು ಹಣದ ಹೊಳೆ ಹರಿಸಿದ್ದಾರೆ. ಮತ್ತು ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ಆಳಂದನ ಲಾಡ್ಲೆ ಮಷಾಕ್ ದರ್ಗಾದಲ್ಲಿನ ಶಿವಲಿಂಗದ ಸೌಹಾರ್ದ ಪರಂಪರೆಗೆ ಧಕ್ಕೆ ತರುವ ಪ್ರಯತ್ನ ಗಂಭೀರವಾಗಿ ಮಾಡಿರುವರು. ಕಲಬುರಗಿಯಲ್ಲಿ ಆರ್ ಎಸ್ ಎಸ್ ಪಥಸಂಚಲನ ಮಾಡಿರುವರು. ದಸರಾ ಹಬ್ಬದಲ್ಲಿ ಸಾವಿರದಷ್ಟು ಮಹಿಳೆಯರ ಕೈಗೆ ಆಯುಧ ಕೊಟ್ಟು ಮೆರವಣಿಗೆ ಮಾಡಿಸಿದ್ದಾರೆ. ಕೋವಿಡ್ ಸಂದರ್ಭವನ್ನು ಮುಸ್ಲಿಂ ವಿರೋಧಿ ಭಾವನೆ ಬೆಳೆಸಲು ಬಳಸಿಕೊಂಡಿದ್ದಾರೆ.

ಇದೆಲ್ಲದರ ಆಚೆಗೂ ಕಲಬುರಗಿ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಏಳು ಸ್ಥಾನಗಳು ದೊರೆತವು. ಬಿಜೆಪಿಗೆ ಕೇವಲ ಎರಡು ಸ್ಥಾನಗಳು ಬಂದವು. ಆದರೆ ಬಿಜೆಪಿಗೆ ಓಟಿನ ಪರ್ಸೆಂಟೇಜ್ ಕುಸಿತವಾಗಿಲ್ಲ. ಬದಲಿಗೆ ಹೆಚ್ಚಳವಾಗಿದೆ. (12.4% ರಷ್ಟು ಹೆಚ್ಚು) ಇದನ್ನು ಕಾಂಗ್ರೆಸ್ ಬಿಜೆಪಿ ಎಂದು ಮಾತ್ರ ನೋಡಲಾಗುವುದಿಲ್ಲ. ಕಲಬುರಗಿಯಲ್ಲಿ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರಗಳು ಆರಂಭವಾಗಿವೆ. ಕಲಬುರಗಿ ನಗರದಲ್ಲಿ ಮತ್ತು ಆಳಂದ ತಾಲ್ಲೂಕಿನಲ್ಲಿ. ಬೃಹತ್ ಬಂಗಲೆಗಳು ಸಿದ್ಧಗೊಂಡಿವೆ. ತರಬೇತಿ ಕೇಂದ್ರಕ್ಕೆ ಬೇಕಾದ ಎಲ್ಲ ಸಂಪನ್ಮೂಲಗಳನ್ನು ಅದು ಕ್ರೋಢೀಕರಿಸಿಕೊಂಡಿದೆ. ಈವರೆಗೆ ಮಾಡಿದ ಕೋಮು ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಯುವಜನರನ್ನು ಗುರಿಯಾಗಿಸಿಕೊಂಡು ಅವರಿಗೆ ತರಬೇತಿ ಕೊಡಲು ತಯಾರಿ ಮಾಡಿಕೊಂಡಿದೆ. ಪೂರ್ಣಾವಧಿ ಕಾರ್ಯಕರ್ತರ ಪಟ್ಟಿಯಲ್ಲಿ ಯುವತಿಯರ ಸಂಖ್ಯೆಯು ಗಣನೀಯವಾಗಿದೆ. ಆರ್.ಎಸ್.ಎಸ್. ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು ಕೆಲಸ ಮಾಡುವಂತೆ ಮಾರ್ಗದರ್ಶನ ಮಾಡುತ್ತಿದೆ. ಎನ್.ಜಿ.ಓ. ಗಳು, ಶಿಕ್ಷಣದ ಹೆಸರಿನವು, ಗೋರಕ್ಷಣೆಯ ಹೆಸರಿನವು ಹೀಗೆ ದೊಡ್ಡ ಪಟ್ಟಿಯೇ ಇದೆ. ಮುಸ್ಲಿಂರನ್ನು ಶತ್ರುವಾಗಿಸಿ ಹಿಂದೂಗಳನ್ನು ಒಂದಾಗಿಸುವಲ್ಲಿ ಅದು ತೀವ್ರ ಕಾರ್ಯಯೋಜನೆ ಹೊಂದಿದೆ.

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಉದ್ಘಾಟನೆಗೆ ಶರಣಬಸಪ್ಪ ಅಪ್ಪ ಸಂಸ್ಥಾನದ ಮುಖ್ಯಸ್ಥೆ ದ್ರಾಕ್ಷಾಯಣಿ ಅವರನ್ನು ಒಳಗೊಳಿಸಲಾಗಿದೆ. ಈ ಬಾರಿ ಲಿಂಗಾಯತ ಮತಗಳು ದೊಡ್ಡ

ಕೇರಳದ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರ್ಕಾರ ಎರಡನೆ ಅವಧಿಗೆ ಅಧಿಕಾರಕ್ಕೆ ಬಂದು ಎರಡು ವರ್ಷ ಪೂರೈಸಿದ್ದು, ಸಾಮಾಜಿಕ ಸಾಮರಸ್ಯ ಮತ್ತು ಪ್ರಗತಿಪರವಾದ "ದಿ ರಿಯಲ್ ಕೇರಳ ಸ್ಟೋರಿ"ಯನ್ನು ರಾಜ್ಯವು ಆಚರಿಸುತ್ತಿದೆ. ಈ ಸಂದರ್ಭದಲ್ಲಿ ತಮ್ಮ ಸರ್ಕಾರದ ಸಾಧನೆಗಳ ಅಂಕಿ ಅಂಶಗಳ ಸಮೇತ ವಿವರವಾದ ವರದಿಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಒಂದು ವರದಿ ಇಲ್ಲಿದೆ.

ಕೇರಳ–ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕೆಗಳು

ಪಿ. ರಾಜೀವ್
ಕೈಗಾರಿಕೆ, ಕಾನೂನು ಮತ್ತು ನಿಯಮಗಳ ಸಚಿವರು

ಸಾಮಾಜಿಕ ಅಭಿವೃದ್ಧಿಯಲ್ಲಿ ದೇಶವನ್ನು ಮುನ್ನಡೆಸುವ ಶ್ರೀಮಂತ ಪರಂಪರೆಯನ್ನು ಕೇರಳ ಹೊಂದಿದೆ. ಆರೋಗ್ಯ, ಶಿಕ್ಷಣ ಮತ್ತು ಲಿಂಗ ಸಮಾನತೆಗೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಕೇರಳ ಯಾವಾಗಲೂ ಮುಂದಿದೆ. ಜಾಗತಿಕವಾಗಿ ಗುರುತಿಸಲ್ಪಟ್ಟ ಮತ್ತು ಶ್ಲಾಘನೀಯ ಸಾಧನೆಗಳ ವಿಷಯದಲ್ಲಿ ಕೇರಳವು ಒಂದು ಪ್ರಮುಖ ರಾಜ್ಯವಾಗಲು ಸಿದ್ಧವಾಗಿದೆ. ಅದೇ ಸಮಯದಲ್ಲಿ ಜವಾಬ್ದಾರಿಯುತ ಕೈಗಾರಿಕಾ ಹೂಡಿಕೆ ಕೇಂದ್ರವಾಗಿದೆ. ಉದ್ಯಮ ಮತ್ತು ವಾಣಿಜ್ಯ ವಲಯದಿಂದ ಉತ್ತೇಜಿಸಲ್ಪಟ್ಟ ಸಮಗ್ರ ಮತ್ತು ದೂರದೃಷ್ಟಿಯ ವಿಧಾನವು ಕೇರಳವನ್ನು ಹೂಡಿಕೆ ಸ್ನೇಹಿ ಕೈಗಾರಿಕಾ ತಾಣವನ್ನಾಗಿ ಮಾಡುತ್ತದೆ.

ಸಾರ್ವಜನಿಕ ವಲಯದ ಉದ್ಯಮಗಳನ್ನು ಆಧುನೀಕರಿಸಲಾಗಿದೆ. ಕಂಪನಿಗಳ ಸಂಖ್ಯೆ ಹೆಚ್ಚಿದೆ. ವ್ಯಾಪಾರ ಆರಂಭಿಸಲು ಇದ್ದ ಅಡೆತಡೆಗಳನ್ನು ನಿವಾರಿಸಲಾಗಿದೆ. ವಾಣಿಜ್ಯೋದ್ಯಮಿಗಳೊಂದಿಗೆ ನೇರ ಸಂಪರ್ಕದ ಮೂಲಕ ವಿಶ್ವದರ್ಜೆಯ ಕೈಗಾರಿಕಾ ಮೂಲಸೌಕರ್ಯವನ್ನು ರಚಿಸಲಾಗಿದೆ. ಇವುಗಳ ಮೂಲಕ ಕೇರಳ ಪ್ರಗತಿ ಸಾಧಿಸುತ್ತಿದೆ. ಇದು ಸಾಂಪ್ರದಾಯಿಕ ವಲಯಗಳನ್ನು ಬಲಪಡಿಸುವ ಮೂಲಕ ವಿಶಿಷ್ಟವಾದ ಕೈಗಾರಿಕಾ ಮಾದರಿಯನ್ನು ಸಹ ರಚಿಸುತ್ತದೆ. ಕೇರಳ ಪೇಪರ್ ಪ್ರಾಡಕ್ಟ್ಸ್ ಲಿಮಿಟೆಡ್ ಅನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮೇ 19, 2022 ರಂದು ಕೊಟ್ಟಾಯಂ ಜಿಲ್ಲೆಯ ವೆಲ್ಲೂರಿನಲ್ಲಿ ಉದ್ಘಾಟಿಸಿದರು. ನವೆಂಬರ್ 1 ರಂದು ವಾಣಿಜ್ಯ ಉತ್ಪಾದನೆ ಪ್ರಾರಂಭವಾಯಿತು. ಮಂಗಳಂ ಮತ್ತು ದಿ ಹಿಂದೂ ಪತ್ರಿಕೆಗಳನ್ನು ಕೇರಳ ಪೇಪರ್ ಪ್ರಾಡಕ್ಟ್ಸ್ ಲಿಮಿಟೆಡ್ ತಯಾರಿಸಿದ ಕಾಗದದಲ್ಲಿ ಮುದ್ರಿಸಲಾಗುತ್ತದೆ. ಕೇಂದ್ರ ಸರ್ಕಾರದ ಖಾಸಗೀಕರಣ ನೀತಿಯ ಭಾಗವಾಗಿ ಕೈಬಿಟ್ಟ ಹಿಂದೂಸ್ತಾನ್ ನ್ಯೂಸ್ ಪ್ರಿಂಟ್ ಲಿಮಿಟೆಡ್ ಅನ್ನು ರಾಜ್ಯ ಸರ್ಕಾರ ಸ್ವಾಧೀನಪಡಿಸಿಕೊಂಡಿದೆ. ಮರುಸಂಘಟಿತ ಮತ್ತು ಹೊಸದಾಗಿ ರೂಪುಗೊಂಡ ಕಂಪನಿ ಕೇರಳ ಪೇಪರ್ ಪ್ರಾಡಕ್ಟ್ಸ್ ಲಿಮಿಟೆಡ್. ಇಲ್ಲಿಂದ ಪ್ರಸ್ತುತ 25ಕ್ಕೂ ಹೆಚ್ಚು ದಿನಪತ್ರಿಕೆಗಳಿಗೆ ಕಾಗದ ಪೂರೈಕೆಯಾಗುತ್ತಿದೆ. ಏಪ್ರಿಲ್ 2023 ರಲ್ಲಿ ದೈನಿಕ್ ಭಾಸ್ಕರ್ ಮಾಧ್ಯಮದವರಿಂದ 10,000 ಟನ್ ಕಾಗದದ ಆದೇಶವನ್ನು ಸ್ವೀಕರಿಸಲಾಗಿದೆ. 3,000 ಕೋಟಿ ಆದಾಯದ ಕಂಪನಿಯಾಗಿ ಬೆಳೆಯುವುದು ಪ್ರಸ್ತುತ ಗುರಿಯಾಗಿದೆ. ಇದರಿಂದ 3,000 ಜನರಿಗೆ ಉದ್ಯೋಗ ದೊರೆಯಲಿದೆ. ಕೆಪಿಪಿಎಲ್ ವಾರ್ಷಿಕ ಐದು ಲಕ್ಷ ಮೆಟ್ರಿಕ್ ಟನ್ ಉತ್ಪಾದನಾ ಸಾಮರ್ಥ್ಯವಾಗಲಿದೆ. 1000 ಕೋಟಿ ವೆಚ್ಚದಲ್ಲಿ ನಾಲ್ಕು ಹಂತಗಳಲ್ಲಿ ನವೀಕರಣ ಕಾಮಗಾರಿಯನ್ನು ಯೋಜಿಸಲಾಗಿದ್ದು, 46 ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಮೊದಲ ಎರಡು ಹಂತಗಳು ಪೂರ್ಣಗೊಂಡಿವೆ.

ಕೇರಳ ರಬ್ಬರ್ ಲಿಮಿಟೆಡ್

ಮೇ 9 ರಂದು ವೆಲ್ಲೂರಿನಲ್ಲಿ ಕೈಗಾರಿಕಾ ವಲಯದ ಹೊಸ ಉದ್ಯಮವಾದ ಕೇರಳ ರಬ್ಬರ್ ಲಿಮಿಟೆಡ್‌ನ ಶಿಲಾನ್ಯಾಸವನ್ನು ಮಾಡಲಾಗಿದೆ. ಸದ್ಯ ನಿರ್ಮಾಣ ಕಾರ್ಯ ನಡೆಯುತ್ತಿದೆ. ರಾಜ್ಯ ಸರ್ಕಾರವು ರಬ್ಬರ್ ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸುವ ಗುರಿಯನ್ನು



ಹೊಂದಿರುವ ಕೈಗಾರಿಕೆಗಳನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ ಮತ್ತು ವೆಲ್ಲೂರನ್ನು ರಬ್ಬರ್ ಆಧಾರಿತ ಉತ್ಪನ್ನಗಳ ಕೇಂದ್ರವನ್ನಾಗಿ ಮಾಡುತ್ತದೆ. 3 ಹಂತಗಳಲ್ಲಿ ಪೂರ್ಣಗೊಳ್ಳುವ ಈ ಯೋಜನೆಗೆ 1,050 ಕೋಟಿ ರೂಪಾಯಿ ವೆಚ್ಚವಾಗಲಿದೆ. ಕೇರಳ ರಬ್ಬರ್ ಲಿಮಿಟೆಡ್ ಸಾವಿರಾರು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಮತ್ತು ರಬ್ಬರ್ ಬೆಳೆಯುವ ರೈತರ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಕಂಪನಿಯು ರಬ್ಬರ್ ವಲಯದಲ್ಲಿನ ರೈತರು, ಉದ್ಯಮಿಗಳು, ಸಂಸ್ಥೆಯ ಪ್ರತಿನಿಧಿಗಳು ಇತ್ಯಾದಿಗಳ ಬೆಂಬಲದೊಂದಿಗೆ ಕಾರ್ಯನಿರ್ವಹಿಸುತ್ತದೆ. ಗುಣಮಟ್ಟದ ರಬ್ಬರ್ ಉತ್ಪಾದಿಸಲು ರೈತರಿಗೆ ತಾಂತ್ರಿಕ ನೆರವು ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಲು ಉದ್ಯಮಿಗಳಿಗೆ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸಲಾಗುವುದು. ಉದ್ಯಮಿಗಳಿಗೆ ರಬ್ಬರ್ ಪರೀಕ್ಷೆ, ತರಬೇತಿ ಮತ್ತು ಹಣಕಾಸು ಸಂಸ್ಥೆಗಳಿಂದ ಬೆಂಬಲವನ್ನು ಖಾತ್ರಿಪಡಿಸಲಾಗುತ್ತದೆ. ನೈಸರ್ಗಿಕ ರಬ್ಬರ್ ಮತ್ತು ಕೈಗಾರಿಕಾ ರಬ್ಬರ್ ಉತ್ಪನ್ನಗಳ ಉತ್ಪಾದನೆಗೆ ಕಂಪನಿಯ ಚಟುವಟಿಕೆಗಳು ಸೂಕ್ತವಾಗಿವೆ.

ಕೇಂದ್ರ ಸರ್ಕಾರವು ಖಾಸಗೀಕರಣಗೊಳಿಸಲು ಪ್ರಯತ್ನಿಸಿರುವ ಕಾಸರಗೋಡು ಕೆಇಎಲ್ ಇಲೆಕ್ಟ್ರಿಕಲ್ ಮೆಷಿನ್ಸ್ ಲಿಮಿಟೆಡ್, ರಾಜ್ಯ ಸರ್ಕಾರದ ಅಡಿಯಲ್ಲಿ ಏಪ್ರಿಲ್ 1, 2022 ರಿಂದ ಸಾರ್ವಜನಿಕ ವಲಯದ ಉದ್ಯಮವಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸಂಸ್ಥೆಯನ್ನು ಉದ್ಘಾಟಿಸಿದರು.

ಕೇರಳ ಸರ್ಕಾರವು BHEL ಎಲೆಕ್ಟ್ರಿಕಲ್ ಮೆಷಿನ್ಸ್ ಲಿಮಿಟೆಡ್‌ನಲ್ಲಿ ಃಊಇಐ ಹೊಂದಿದ್ದ 51 ಪ್ರತಿಶತ ಪಾಲನ್ನು ಸ್ವಾಧೀನಪಡಿಸಿಕೊಂಡಿತು. ಆ ಮೂಲಕ ಇದನ್ನು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಒಡೆತನದ ಸಾರ್ವಜನಿಕ ವಲಯದ ಉದ್ಯಮವನ್ನಾಗಿ ಮಾಡಿತು. ಹಲವು ವರ್ಷಗಳಿಂದ ನಿರಂತರ ವಹಿವಾಟು ನಡೆಸುತ್ತಿದ್ದ ಸಂಸ್ಥೆಯನ್ನು ಮರುಸ್ಥಾಪಿಸಲು ಬೇಕಾಗುವ ಮೊತ್ತ ಹಾಗೂ ಈ ಹಿಂದೆ ಸಂಸ್ಥೆ ನಡೆಸಿದ ವ್ಯವಹಾರ ಸೇರಿ ಸುಮಾರು 77 ಕೋಟಿ ರೂ.ಗಳನ್ನು ವ್ಯಯಿಸಿ ಕೇರಳ ಸರ್ಕಾರ ಸಂಸ್ಥೆಯನ್ನು ಸಾರ್ವಜನಿಕ ವಲಯದ ಕಂಪನಿಯನ್ನಾಗಿ ಪರಿವರ್ತಿಸಿದೆ. ಇದರಲ್ಲಿ ಎರಡು ವರ್ಷಗಳಿಂದ ಕೆಲಸ ಮತ್ತು ಸಂಬಳವಿಲ್ಲದೆ ಕಂಗಾಲಾಗಿರುವ ನೌಕರರ ವೇತನ ಬಾಕಿ 14 ಕೋಟಿ ರೂ ಸೇರಿದೆ. ಸೂಕ್ತ ಯೋಜನೆಯೊಂದಿಗೆ ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಸರಕಾರ ಸ್ವಾಧೀನಪಡಿಸಿಕೊಂಡ ನಂತರ, ಕಾರ್ಖಾನೆಯನ್ನು ನವೀಕರಿಸಲು ಮತ್ತು ಕಾರ್ಯಾಚರಣೆಗೆ ಒಳಪಡಿಸಲು ಸಾಧ್ಯವಾಯಿತು.

ಕೇರಳದ ಪ್ರಸ್ತುತ ವ್ಯಾಪಾರ ಸ್ನೇಹಿ ವಾತಾವರಣದಲ್ಲಿ, ಸ್ಥಿರವಾದ ಲಾಭದಾಯಕ ಮತ್ತು ಸುಸ್ಥಿರವಾದ ವಿಶಿಷ್ಟ ಉತ್ಪನ್ನಗಳ ಜೊತೆಗೆ ರೈಲ್ವೆಗೆ ಅಗತ್ಯವಿರುವ ಟ್ರಾಕ್ಷನ್ ಮೋಟರ್ಸ್, ನಿಯಂತ್ರಕಗಳು, ಆಲ್ಟರ್ನೇಟರ್‌ಗಳು, ಟ್ರಾಕ್ಷನ್ ಆಲ್ಟರ್ನೇಟರ್ ಮೋಟಾರ್‌ಗಳು, ಸುರಕ್ಷತೆಗಾಗಿ ವಿಶೇಷ ಟ್ರಾನ್ಸ್‌ಫಾರ್ಮರ್‌ಗಳು, ವಿದ್ಯುತ್ ಉದ್ಯಮಕ್ಕೆ ಬೀದಿ ದೀಪ ನಿಯಂತ್ರಕಗಳನ್ನು ಉತ್ಪಾದಿಸುವ ಮೂಲಕ ಮಾದರಿ ಸಾರ್ವಜನಿಕ ವಲಯದ ಉದ್ಯಮವನ್ನಾಗಿಸುವ ಗುರಿಯನ್ನು ಹೊಂದಿದೆ. ಕಾರ್ಯಾಚರಣೆಯನ್ನು ಪ್ರಾರಂಭಿಸಿದ 10 ತಿಂಗಳೊಳಗೆ, ರೂ.1 ಕೋಟಿಗೂ ಹೆಚ್ಚು ಮೌಲ್ಯದ 6125KVA ಜನರೇಟರ್‌ಗಳನ್ನು ತಯಾರಿಸಲು ಅಂತರರಾಷ್ಟ್ರೀಯ ಆರ್ಡರ್ ಗಳನ್ನು ಪಡೆದುಕೊಂಡಿದೆ. ವಾಣಿಜ್ಯೋದ್ಯಮ ವಾರ್ಷಿಕ ಯೋಜನೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಉದ್ಯಮದ ನೇತೃತ್ವದಲ್ಲಿ ಉದ್ಯಮಶೀಲತಾ ವಾರ್ಷಿಕ ಯೋಜನೆ ಸಿದ್ಧಪಡಿಸಲಾಗಿದೆ. ಈ ಮೂಲಕ 2022–23ನೇ ಹಣಕಾಸು ವರ್ಷದಲ್ಲಿ ಒಂದು ಲಕ್ಷ ಕಂಪನಿಗಳನ್ನು ಆರಂಭಿಸಲು ಸರಕಾರ ಪ್ರಯತ್ನಿಸುತ್ತಿದ್ದು, 245 ದಿನಗಳಲ್ಲಿ 1 ಲಕ್ಷ ಕಂಪನಿಗಳನ್ನು ಆರಂಭಿಸುವಲ್ಲಿ ಯಶಸ್ವಿಯಾಗಿದೆ. ಈ ಯೋಜನೆಯ ಭಾಗವಾಗಿ ರೂ.8,417 ಕೋಟಿ ಹೂಡಿಕೆಯೊಂದಿಗೆ 1,39,828 ಕಂಪನಿಗಳು ಮತ್ತು 2,99,932 ಉದ್ಯೋಗಗಳನ್ನು ಸೃಷ್ಟಿಸಲಾಗಿದೆ.

➘ ಪ್ರಮಾಣದಲ್ಲಿ ಬಿಜೆಪಿಯತ್ತ ಹೋಗಿವೆ. ದಲಿತ, ಹಿಂದುಳಿದ, ಮುಸ್ಲಿಂ ಮತಗಳು ದೃಢವಾಗಿ ಕಾಂಗ್ರೆಸ್ ಬಂದಿವೆ. ಮುಸ್ಲಿಂ ಮತಗಳೂ ಕೆಲವು ಕಡೆ ದ್ವಂದ್ವಕ್ಕೆ ಬಿದ್ದಿವೆ. ಕಲಬುರಗಿ ಉತ್ತರದಲ್ಲಿ ಜೆಡಿಎಸ್ ಅಭ್ಯರ್ಥಿ ಪಡೆದ ಮತಗಳು ಬಹಳಷ್ಟು ಮುಸ್ಲಿಂ ಮತಗಳೇ ಆಗಿವೆ. ಜೆಡಿಎಸ್ ಬಿಜೆಪಿಯನ್ನು ಸೋಲಿಸಬಹುದು ಎಂಬ ಭಾವನೆ ತಂದಿದ್ದು ಹೌದು. ಆದರೆ ಕೊನೆಯಲ್ಲಿ ಎಚ್ಚೆತ್ತ ಮುಸ್ಲಿಂ ಮತದಾರರು ಬಿಜೆಪಿಗೆ ಸೋಲಿಸುವವರು ಯಾರು ಎಂಬುದು ಗುರುತಿಸಿದ್ದಾರೆ. ಆದರೂ ದೊಡ್ಡ ಪ್ರಮಾಣದ ಮತಗಳು ಜೆಡಿಎಸ್ ಗೆ ಚಲಾವಣೆಯಾಗಿವೆ.

ಇದೇ ಸಂದರ್ಭದಲ್ಲಿ ಅಲ್ಪಸಂಖ್ಯಾತರ ನಡುವಿನ ಮೂಲಭೂತವಾದಿಗಳು ಈ ಚುನಾವಣೆಯಲ್ಲಿ ಹೆಚ್ಚು ಹೆಡೆಯೆತ್ತಲಿಲ್ಲ. ಎಸ್.ಡಿ.ಪಿ.ಐ., ಪಿಎಫೈ ಇತ್ಯಾದಿ. ಆದರೆ ಈ ಅಪಾಯವನ್ನೂ ನಿರ್ಲಕ್ಷಿಸುವಂತಿಲ್ಲ. ಲಾಡ್ಲೆ ಮಷಾಕ್ ದರ್ಗಾದ ಪ್ರಕರಣದಲ್ಲಿ ಹಿಂದುತ್ವದ ಕೋಮುವಾದಿಗಳಿಗೆ ಮೇಲುಗೈಯಾಗಲು ಕಾರಣ ಅಲ್ಪಸಂಖ್ಯಾತ ಮೂಲಭೂತವಾದಿಗಳು.

ಆರ್.ಎಸ್.ಎಸ್. ಗೆ ಬಿಜೆಪಿಗೆ ಜಿಲ್ಲೆಯಲ್ಲಿ ಸ್ಥಾನಗಳು ಬಂದಿಲ್ಲ ಎಂಬ ಚಿಂತೆಯಿಲ್ಲ. ಅವರ ಸೈದ್ಧಾಂತಿಕ ಹರಿವಿಕೆಗೆ ಜನರ ತಲೆಗಳು ಸಿಕ್ಕಿವೆ. ಸೈದ್ಧಾಂತಿಕವಾಗಿ ಗಟ್ಟಿಗೊಂಡಿರುವ ಅಂದಾಜು ಅವರದಾಗಿರುವ ಸಾಧ್ಯತೆಗಳಿವೆ. ಅವರ ಐಟಿ ಸೆಲ್, ಉದ್ಯೋಗಿಗಳು, ಯೋಗ ಪತಂಜಲಿ ಮುಂತಾದ ಸಂಸ್ಥೆಗಳು, ವಿವೇಕಾನಂದ ಆಶ್ರಮಗಳು ಹೀಗೆ ಎಲ್ಲವೂ ಈ ಬಾರಿ ಬಿಜೆಪಿಗೆ ಮತ ಚಲಾಯಿಸಲು ಬೇಕಾದ ಎಲ್ಲ ತಾಲೀಮುಗಳನ್ನು ಮಾಡಿವೆ.

ಆದಾಗ್ಯೂ ಜನರು ಅವರ ಕಪಿಮುಷ್ಠಿಯಿಂದ ಬಿಡಿಸಿಕೊಂಡು ಅವರ ವಿರುದ್ಧ ಮತ ಹಾಕಿದ್ದಾರೆ. ಕಾರಣವಿಷ್ಟೆ, ತೀವ್ರವಾದ ಬೆಲೆಯೇರಿಕೆ, ನಿರುದ್ಯೋಗ, ಬಡತನ, ಕೃಷಿಯ ಕುಸಿತ ಹೀಗೆ ಜನರು ಜರ್ಜರಿತರಾಗಿ ಬದಲಾವಣೆಗೆ ಹಾತೊರೆಯುವಾಗ ಕಾಂಗ್ರೆಸ್ ನ ಗ್ಯಾರಂಟಿ ಕಾರ್ಡು, ಕಾಂಗ್ರೆಸ್ ಅಲೆ ಎಲ್ಲವೂ ಒದಗಿ ಬಂದಿತು. ಜೊತೆಗೆ ಕಾಂಗ್ರೆಸ್ ಸಹ ಬೇರೆಯವರಿಗೆ ಸರಿಸಾಟಿಯೆನ್ನುವಷ್ಟು ಹಣದ ಹೊಳೆ ಹರಿಸಿದೆ. ಯುವಜನರು ಬುದ್ಧಿಜೀವಿಗಳು, ಪ್ರಗತಿಪರ ಶಕ್ತಿಳು ಬಿಜೆಪಿ ಸೋಲಿಸಲು ಸತತ ಪ್ರ;ಯತ್ನ ಪಟ್ಟಿವೆ.

ಬಿಜೆಪಿ ಒಡ್ಡಿದ ಕೋಮುವಾದಿ ಸಾಂಸ್ಕೃತಿಕ ರಾಜಕಾರಣವನ್ನು ಹಿಮ್ಮೆಟ್ಟಿಸುವಲ್ಲಿ ಅತ್ಯಂತ ನಿರ್ಭಯದ ಚಟುವಟಿಕೆಗಳು ಕಲಬುರಗಿಯಲ್ಲಿ ನಡೆದಿವೆ. ಟಿಪ್ಪು ಸುಲ್ತಾನ, ಸಾವರ್ಕರ್, ಆರ್.ಎಸ್.ಎಸ್. ಚಟುವಟಿಕೆ ಇತ್ಯಾದಿ ಎಲ್ಲವುಗಳ ಕೋಮುವಿಷವನ್ನು ಬಯಲು ಗೊಳಿಸುವಲ್ಲಿ ನಮ್ಮ ಸಾಮೂಹಿಕ ಸಾಂಸ್ಕೃತಿಕ ಸಂಘಟನೆಗಳು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿವೆ. ಇದೂ ಸಹ ಬಿಜೆಪಿ ಸೋಲಿಗೆ ಕಾರಣವಾಗಿದೆ.

ಗಂಭೀರವಾಗಿ ಪರಿಗಣಿಸಬೇಕಾದ ಅಂಶ

ಹಿಂದೆ ಕಲಬುರಗಿ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಸ್ಥಾನಗಳು ಬರುತ್ತಿದ್ದವು. ಕಲಬುರಗಿ, ಶಹಾಬಾದ, ಜೇವರ್ಗಿ, ಚಿತ್ತಾಪುರಗಳಲ್ಲಿ. ಕಲಬುರಗಿಯ ನರೋಣಾ, ಚಿಂಚನಸೂರು ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಸ್ಥಾನಗಳು ಬರುತ್ತಿದ್ದವು.

ಮತಗಳ ಲೆಕ್ಕಾಚಾರದಲ್ಲಿಯೂ ಸಿಪಿಐ, ಸಿಪಿಐಎಂ, ಸುಸಿ ಮತಪ್ರಮಾಣದಲ್ಲಿ ತೀವ್ರ ಕುಸಿತ ಮುಂದುವರೆದಿದೆ. ಇದೇ ಸಂದರ್ಭದಲ್ಲಿ ಜೆಡಿಎಸ್ ಚೇತರಿಸಿಕೊಳ್ಳುತ್ತಿದೆ. ಕಾಂಗ್ರೆಸ್ ಬಿಜೆಪಿ ನಡುವೆ ಪೈಪೋಟಿ ರೀತಿಯಲ್ಲಿ ಬೆಳವಣಿಗೆ ಇದೆ. ಕಾಂಗ್ರೆಸ್ ಗೆ ಆರ್.ಎಸ್.ಎಸ್. ನ ಕೋಮುವಾದಿ ಅಜೆಂಡಾಗಳನ್ನು ಹಿಮ್ಮೆಟ್ಟಿಸುವ ಯಾವುದೇ ರಾಜಕೀಯ ಇಚ್ಛೆ ಇಲ್ಲವಾಗಿದೆ. ಸೈದ್ಧಾಂತಿಕವಾಗಿಯೂ ಅದರಲ್ಲಿ ಯಾವುದೇ ಯೋಜನೆಯಿಲ್ಲ. ಆದರೆ ಚಿತ್ತಾಪುರ ಶಾಸಕ, ಆಳಂದ ಮತ್ತು ಸೇಡಂ ಶಾಸಕರು ಸೈದ್ಧಾಂತಿಕವಾದ ಅಭಿಪ್ರಾಯ ರೂಪಿಸುವಲ್ಲಿ ಮುಂದಿದ್ದಾರೆ. ಆಳಂದ, ಸೇಡಂ ಶಾಸಕರಿಗಿಂತಲೂ ಚಿತ್ತಾಪುರ ಶಾಸಕರು ಹೆಚ್ಚು ಮೊನಚಾಗಿ ಕೋಮುವಾದವನ್ನು ಟೀಕಿಸುವುದು ಇದೆ.

ಜಿಲ್ಲೆಯಲ್ಲಿ ಎಡ ಪ್ರಜಾಸತ್ತಾತ್ಮಕ ಪಕ್ಷಗಳ ಸಾಮೂಹಿಕ ಚಟುವಟಿಕೆಗಳು ಬಹಳ ನಡೆಯುತ್ತವೆ. ಆದರೆ ಮತಗಳಾಗಿ ಪಡೆಯುವಲ್ಲಿ ಹಿನ್ನಡೆ ಇದೆ. ಮಾತ್ರವಲ್ಲ ಮತಪ್ರಮಾಣದಲ್ಲಿ ಕುಸಿಯುತ್ತಿದೆ. ಇದು ಗಂಭೀರವಾಗಿ ಯೋಚಿಸಬೇಕಿದೆ.

ಏನು ಮಾಡುವುದು?

ಎಲೆಕ್ಟೋಲ್ ರಾಜಕಾರಣ ನಡೆಸುವುದಕ್ಕಾಗಿಯೂ ನಾವು ತರಬೇತುಗೊಳ್ಳಬೇಕು. ಸಿದ್ದಗೊಳ್ಳಬೇಕು. ಬಂಡವಾಳಶಾಹಿ ಪಕ್ಷಗಳೇ ಸ್ಥಾನಗಳನ್ನು ಗೆಲ್ಲಲು ಐಕ್ಯತೆಯಿಂದ ಕೆಲಸಕ್ಕಿಳಿಯುತ್ತವೆ. ನಮ್ಮಲ್ಲಿ ಅದರ ಕೊರತೆ ಗಂಭೀರವಾಗಿದೆ. ಜಿಲ್ಲೆಯಲ್ಲಿ ಸಾಂಸ್ಕೃತಿಕವಾಗಿ ವಿಶೇಷ ಅಧ್ಯಯನ ನಡೆಯಬೇಕು. ಸೌಹಾರ್ದತೆಗಾಗಿ ಗಂಭೀರ ಕಾರ್ಯಯೋಜನೆ ರೂಪಿಸಬೇಕು. ಆರ್ಥಿಕ ನೆಲೆಯಲ್ಲಿ ದುಡಿಯುವ ವರ್ಗದ ಜನರನ್ನು ಸಂಘಟಿಸುವಲ್ಲಿ ಮುಂದಾಗಬೇಕು. ಅವರ ಜೀವನದ ಅಧ್ಯಯನದೊಂದಿಗೆ ಸ್ಪಷ್ಟವಾಗಿ ಸಮಸ್ಯೆಗಳನ್ನು ಗುರುತಿಸಿ ಹೋರಾಟಗಳನ್ನು ಸಂಘಟಿಸಬೇಕು.

ಪಕ್ಷದೊಳಗಿನ ಎಲ್ಲ ಸಂಗಾತಿಗಳಿಗೆ ಕೋಮುವಾದ, ಮೂಲಭೂತವಾದ, ಫ್ಯಾಸಿಜಂ ಮತ್ತದರ ಸ್ವರೂಪಗಳು, ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತದರ ಕಾಲಕಾಲದ ಸ್ವರೂಪಗಳು ಹೀಗೆ ನಿರಂತರ ತರಗತಿಗಳಲ್ಲಿ ಮನನ ಮಾಡಿಸಬೇಕಿದೆ. ಕೇಡರ್ ಬೇಸ್ಡ್ ಕಾರ್ಯಕರ್ತರ ಪ್ರಾಧಾನ್ಯತೆಯಲ್ಲಿ ಚಳುವಳಿಯನ್ನು ಆರಂಭಿಸಬೇಕಿದೆ. ವರ್ಗದೃಷ್ಟಿಕೋನದ ಕಣ್ಣೋಟದಲ್ಲಿಯೇ ಸಂಸದೀಯ ಸ್ಪರ್ಧೆಯನ್ನು ರೂಪಿಸಬೇಕು. ವರ್ಗದೃಷ್ಟಿಕೋನ ಹಿಂದಿಕ್ಕಿ ಕೋಮುವಾದಿಗಳ ಬಂಡವಾಳಿಗರ ಪಕ್ಷಗಳ ಷಡ್ಯಂತ್ರ ಅರಿಯದೆ ಹೊಂದಾಣಿಕೆ ರಾಜಕಾರಣಕ್ಕೆ ಇಳಿದರೆ ನಮ್ಮ ಚಳುವಳಿಯ ಮುಂದಕ್ಕೆ ಹೋಗಲು ಸಾಧ್ಯವೇ ಇಲ್ಲ. ಈ ಪ್ರಯತ್ನದೊಂದಿಗೆ ನಮ್ಮ ಶಕ್ತಿಯನ್ನು ಹೆಚ್ಚುಗೊಳಿಸಿಕೊಳ್ಳಬೇಕು. ಜಿಲ್ಲೆಯಲ್ಲಿ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಐಕ್ಯತೆಯೊಂದಿಗೆ ಕಾರ್ಯಕ್ರಮ ರೂಪಿಸಬೇಕು.

ಕೊಡುಗೆಗಳು ಮತ್ತು ರಾಜಕಾರಣ



ಕರ್ನಾಟಕದಲ್ಲಿ ಮತ್ತು ಬೇರೆ ಕಡೆಗಳಲ್ಲಿಯೂ ಈಗ ಉಚಿತ ಕೊಡುಗೆಗಳ ಕುರಿತೇ ಚರ್ಚೆ ನಡೆಯುತ್ತಿದೆ. ಹಲವು ಪ್ರಶ್ನೆಗಳನ್ನೂ ಎತ್ತಲಾಗುತ್ತಿದೆ. ಉದಾರಿಕರಣ, ಕಾರ್ಪೋರೇಟೀಕರಣದ ಆರ್ಥಿಕ ನೀತಿಗಳ ಜಾರಿಯಲ್ಲಿರುವ ಸರಕಾರಗಳು ನೀಡುತ್ತಿರುವ 'ಉಚಿತ' ಕೊಡುಗೆಗಳು–ಗ್ಯಾರಂಟಿಗಳು ಮತ್ತು ಅದರ ಸುತ್ತ ಇರುವ ರಾಜಕೀಯದ ಕುರಿತಾದಂತೆ ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ರವರು.

ಬಹುರಾಷ್ಟ್ರೀಯ ಕಂಪನಿಗಳು, ಕಾರ್ಪೋರೇಟ್ ಕಂಪನಿಗಳ ಪರವಾದ ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುವುದಷ್ಟೇ ಸರಕಾರದ ಕೆಲಸವಾಗಬೇಕು! ಸಾರ್ವಜನಿಕ ವೆಚ್ಚವನ್ನು ಕಡಿತ ಮಾಡಬೇಕು ಹಾಗೂ ಸಾರ್ವಜನಿಕ ಉದ್ದಿಮೆಗಳು ನಡೆಸುವುದು ಸರಕಾರದ ಕೆಲಸವಲ್ಲಾ! ಅವುಗಳನ್ನು ನಾವು ನಡೆಸಲು ನಾವಿದ್ದೇವೆ! ಬಡವರಿಗೆ ನೆರವು ನೀಡುವುದು ಬೇಡಾ? ಬಡತನದ ನಿವಾರಣೆಗೆ ನಾವಿದ್ದೇವೆ!

ಹೀಗೆ ಬಡತನ ನಿವಾರಣೆಯ ಕೆಲಸ ಉದ್ದಿಮೆಗಳನ್ನು ನಡೆಸುವ ಕೆಲಸ ನಿಮ್ಮದಲ್ಲ!. ಸರಕಾರದ ಕೆಲಸ ವೇನಿದ್ದರೂ ನಮಗೆ ಉತ್ತೇಜನ ನಿಡುವುದು ಮತ್ತು ನೆರವು ನೀಡುವುದಾಗಬೇಕು ಎಂದು ದೊಡ್ಡ ಬಂಡವಾಳದಾರರು ಸರಕಾರಗಳಿಗೆ ಮತ್ತು ಸಮಾಜಕ್ಕೆ ಬೋದನೆ ಮಾಡುವ ಮತ್ತು ಸರಕಾರಗಳು ಆ ದಿಸೆಯಲ್ಲಿ ಧೃಢವಾಗಿ ನಡೆಯುತ್ತಿರುವ ಜಾಗತೀಕರಣದ ಕಾಲದಲ್ಲಿ ನಾವಿದ್ದೇವೆ!

ಇದೀಗ ಕರ್ನಾಟಕದ ವಿಧಾನಸಭಾ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷ ಸ್ವಂತ ಬಲದ ಮೇಲೆ ಅಧಿಕಾರ ಹಿಡಿದು, ಚುನಾವಣೆಯಲ್ಲಿ ಅದು ಜನತೆಗೆ ನೀಡಿದ ಐದು ಖಾತ್ರಿ ವಾಗ್ದಾನಗಳನ್ನು ಜಾರಿಗೊಳಿಸಲು ಯತ್ನಿಸುವಾಗ ಪುನಃ ಬಿಜೆಪಿ ಪಕ್ಷ ಹಾಗೂ ಹಿಂದುತ್ವವಾದಿಗಳಿಂದ ಮತ್ತು ಕೆಲ ಬಂಡವಾಳಶಾಹಿ ಬುದ್ದಿಜೀವಿಗಳಿಂದ ಇದೇ ವಾದವನ್ನು ಮುಂದೆ ಮಾಡಲಾಗಿದೆ.

ಶ್ರೀಮಂತರಿಗೆ ಕೊಡುಗೆ ನೀಡುವುದು ಹೊರೆಯಲ್ಲ! ಬಡವರಿಗೆ ನೀಡಿದರೆ ದೇಶಕ್ಕೆ ಹೊರೆ!?

ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಹೊಸ ಕಾಂಗ್ರೆಸ್ ಸರಕಾರ ಈಚೆಗೆ ಐದು ಗ್ಯಾರಂಟಿಗಳನ್ನು ಚುನಾವಣೆಯಲ್ಲಿ ನೀಡಿದ ವಾಗ್ದಾನದಂತೆ ರಾಜ್ಯದ ಮತದಾರರಿಗೆ ನೀಡಲು ನಿರ್ಧರಿಸಿದೆ. ಗೃಹ ಜ್ಯೋತಿ ಹೆಸರಿನಲ್ಲಿ 200 ಯುನಿಟ್ ವರೆಗೆ ವಿದ್ಯುತ್, ಗೃಹ ಲಕ್ಷ್ಮಿ ಹೆಸರಿನಲ್ಲಿ ಮನೆಯೊಡತಿಯರಿಗೆ ಮಾಸಿಕ 2,000 ರೂ, ರಾಜ್ಯದ ಮಹಿಳೆಯರಿಗೆ ರಾಜ್ಯದಾದ್ಯಂತ ಪ್ರಯಾಣ ಮತ್ತು ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿದಾರರಿಗೆ ತಲಾ 10 ಕೆ.ಜಿ. ಪಡಿತರ ಮತ್ತು 2022–23 ರ ಸಾಲಿನ ಪದವಿಧರ ಹಾಗು ಡಿಪ್ಲೊಮಾ ನಿರುದ್ಯೋಗಿಗಳಿಗೆ ಯುವನಿಧಿ 24 ತಿಂಗಳ ಕಾಲ ತಲಾ ಕ್ರಮವಾಗಿ 3,000 ಮತ್ತು 1,500 ರೂ. ಗಳನ್ನು ಪ್ರಕಟಿಸಿದೆ.

ಸುಮಾರು 1.25 ಕೋಟಿ ಯಷ್ಟು ಬಡತನದ ರೇಖೆಯ ಕೆಳಗಿನ ಕುಟುಂಬದ ಬಡವರಿರುವ ರಾಜ್ಯದಲ್ಲಿ ಈ ಕೊಡುಗೆ ಖಂಡಿತಾ ಸ್ವಾಗತಾರ್ಹವಾಗಿದೆ. ಇದರಿಂದ ಪ್ರತಿ ಕುಟುಂಬ ಮಾಸಿಕ ಕನಿಷ್ಠ 4 ರಿಂದ 5 ಸಾವಿರದಷ್ಟು ನೆರವು ಪಡೆಯಲಿದೆ.

ಕಾಂಗ್ರೆಸ್ ಸರಕಾರದ ಈ ಕೊಡುಗೆಯಿಂದ ಬಿಜೆಪಿ ಹಾಗೂ ಹಿಂದೂ ಮತಾಂಧ ಶಕ್ತಿಗಳಿಗೆ ತನ್ನ ಮತದಾರರ ತಳಹದಿ ಕಳೆದುಕೊಳ್ಳುವ ಭೀತಿ ಎರಡು ಕಾರಣಕ್ಕೆ ಉಂಟಾಗಿದೆ.

ಒಂದು, ಬಿಜೆಪಿ ಹಾಗೂ ಹಿಂದುತ್ವವಾದಿ ಮತಾಂಧ ಶಕ್ತಿಗಳು ಈ ಹಿಂದಿನ ಚುನಾವಣೆಗಳಲ್ಲಿ ದೇಶದ ಹಾಗೂ ರಾಜ್ಯದ ಮತದಾರರಿಗೆ ಬಡಜನತೆಗೆ,ಯುವಜನತೆಗೆ ನೀಡಿದ ಒಂದೇ ಒಂದು ವಾಗ್ದಾನ ನೀಡದೇ ಸುಳ್ಳು ಹೇಳಿ ವಂಚಿಸಿರುವುದನ್ನು ಜನತೆ ತಿಳಿದಿರುವುದು ಮತ್ತು ಕಾಂಗ್ರೆಸ್ ಸರಕಾರದ ಈ ಕೊಡುಗೆಗಳಿಂದ ಜನತೆಗೆ ಬಿಜೆಪಿಯ ವಂಚನೆ ಮತ್ತಷ್ಟು ಮನನವಾಗುತ್ತಿರುವುದು. ಎಲ್ಲಾ ಬಡವರಿಗೆ ಅವರ ಬ್ಯಾಂಕ್ ಖಾತೆಗಳಿಗೆ ತಲಾ ಹದಿನೈದು ಲಕ್ಷ ರೂ. ಗಳನ್ನು ವಿದೇಶಗಳಲ್ಲಿರುವ 45 ಲಕ್ಷ ಕೋಟಿ ರೂ. ಕಪ್ಪು ಹಣ ಹೊರಗೆಳೆದು ನೀಡಲಾಗುವುದೆಂಬ ಭರವಸೆ, ಅದೇ ರೀತಿ, ಪ್ರತಿವರ್ಷ ವಿದ್ಯಾವಂತ ನಿರುದ್ಯೋಗಿಗಳಿಗೆ ಎರಡು ಕೋಟಿ ಉದ್ಯೋಗ ನೀಡುವುದಾಗಿ ಮತ್ತು ರೈತರ ಆದಾಯ ದ್ವಿಗುಣಗೊಳಿಸುವುದಾಗಿ ನೀಡಲಾದ ಮುಂತಾದ ಭರವಸೆಗಳು ಶ್ರೀ ನರೇಂದ್ರ ಮೋದಿಯವರು ಹತ್ತು ವರ್ಷಗಳ ಅಧಿಕಾರವನ್ನು ಪೂರೈಸುವ ಹಂತದಲ್ಲಿದ್ದರೂ ಈಡೇರಿಸಲಿಲ್ಲ. ಹೀಗಾಗಿ ಬಹುತೇಕ ಜನತೆಗೆ ಇದು 'ಸುಳ್ಳರ ಪಕ್ಷ'ವೆಂದು ಗುರುತಿಸುವಂತಾಗಿದೆ.

ಎರಡನೆಯದಾಗಿ, ಮುಂಬರುವ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಜನಪ್ರಿಯತೆಯು ಈ ಕೊಡುಗೆಗಳ ಕಾರಣದಿಂದ ವಿಸ್ತಾರಗೊಂಡು ರಾಜ್ಯದಲ್ಲಿ ಮತ್ತೊಮ್ಮೆ ತನಗೆ ಹಿನ್ನಡೆಯಾಗ ಬಹುದೆಂಬುದಾಗಿದೆ.

ಈ ಕಾರಣಗಳಿಂದ ಮಾತ್ರವಲ್ಲಾ, ತಾನು ಕಾರ್ಪೋರೇಟ್ ಕಂಪನಿಗಳ ಭಂಟನಾಗಿಯೆ ಇರುವೆನೆಂಬುದನ್ನು ತೋರಿಸಿಕೊಳ್ಳಲು ಕಾಂಗ್ರೆಸ್ ಸರಕಾರ ಮತದಾರರಿಗೆ ನೀಡಿದ ಕೊಡುಗೆಗಳ ಕುರಿತು ಟೀಕೆಗೆ ಮುಂದಾಗಿದೆ. ಇವರು ಮಾತ್ರವಲ್ಲಾ, ಕಾರ್ಪೋರೇಟ್ ಭಂಟ ಬುದ್ದಿಜೀವಿಗಳು ಈ ಕುರಿತಂತೆ ತಮ್ಮ ತಣ್ಣನೆಯ ವಾಗ್ದಾಳಿ ಹರಿಬಿಟ್ಟಿದ್ದಾರೆ.

ಈ ಭಂಟ ಬುದ್ದಿಜೀವಿಗಳು ಮತ್ತು ಬಿಜೆಪಿಗರು ಹಾಗೂ ಹಿಂದುತ್ವವಾದಿ ಮತಾಂಧರು ಒಕ್ಕೂಟ ಸರಕಾರದ ನರೇಂದ್ರ ಮೋದಿಯವರು, ಒಕ್ಕೂಟ ಸರಕಾರಕ್ಕೆ ಲಕ್ಷಾಂತರ ಕೋಟಿ ರೂ.ಗಳ ಆದಾಯ ತರುತ್ತಿದ್ದ ಒಕ್ಕೂಟ ಸರಕಾರದ ಉದ್ದಿಮೆಗಳಾಗಿದ್ದ ಬ್ಯಾಂಕ್, ವಿಮೆ, ರೈಲ್ವೇ, ಏರ್ ವೇಸ್, ಬಿ.ಎಸ್.ಎನ್.ಎಲ್. ಮುಂತಾದ ಸಂಸ್ಥೆಗಳನ್ನು ಕಾರ್ಪೋರೇಟ್ ಸಂಸ್ಥೆಗಳಿಗೆ ದಾನವಾಗಿ ಕೊಡುವಾಗ ಮತ್ತು ಒಂದು ನೂರು ಕಾರ್ಪೋರೇಟ್ ಕಂಪನಿಗಳ ಸುಮಾರು 11 ಲಕ್ಷ ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡುವಾಗ ಹಾಗೂ ದಶ ಲಕ್ಷಾಂತರ ಕೋಟಿ ರೂ.ಗಳ ತೆರಿಗೆ ಮನ್ನಾ ಮಾಡುವಾಗ ಅದೇ ರೀತಿ, ದೇಶದ ಜನತೆಯ ಮೇಲಿನ ಸಾಲದ ಹೊರೆಯನ್ನು ಶ್ರೀ ನರೇಂದ್ರ ಮೋದಿಯವರು 82 ಲಕ್ಷ ಕೋಟಿ ರೂಗಳಿಂದ 159 ಲಕ್ಷ ಕೋಟಿ ರೂಗಳಿಗೆ ಹೆಚ್ಚಿಸಿದಾಗ ಮತ್ತು ರಾಜ್ಯದ ಹಿಂದಿನ ಬಿಜೆಪಿ ಸರಕಾರ ರಾಜ್ಯ ಸರಕಾರದ ಸಾಲವನ್ನು ದ್ವಿಗುಣಗೊಳಿಸಿ 5.80 ಲಕ್ಷ ಕೋಟಿ ರೂಗಳಿಗೆ ವಿಸ್ತರಿಸಿದಾಗ, ದೇಶದ 75 ಕೋಟಿ ಜನ ಬಡವರ ಪಡಿತರವನ್ನು 10 ಕೆ.ಜಿ.ಯಿಂದ 5 ಕೆ.ಜಿ.ಗಳಿಗೆ ಇಳಿಸಿದಾಗ ಮುಂತಾದ ಸಂದರ್ಭದಲ್ಲಿ ಯಾಕೆ ಮಾತನಾಡಲಿಲ್ಲ? ಯಾಕೆ?

ಇಂತಹ ಎಲ್ಲ ದೇಶದ ಅತಿದೊಡ್ಡ ಶ್ರೀಮಂತರ ಪರವಾಗಿ, ಲೂಟಿಕೋರ ಕಾರ್ಪೋರೇಟ್ ಪರವಾಗಿ, ಬಡವರ ವಿರುದ್ಧವಾಗಿ ಬಿಜೆಪಿ, ಶ್ರೀ ನರೇಂದ್ರ ಮೋದಿ ಸರಕಾರ ದುಷ್ಕೃತ್ಯದಲ್ಲಿ ತೊಡಗಿದಾಗ ಅದು ಒಕ್ಕೂಟ ಸರಕಾರಕ್ಕೆ ಅಥವಾ ರಾಜ್ಯ ಸರಕಾರಕ್ಕೆ ಹೊರೆಯಾಗಲಿಲ್ಲ! ಈಗ ರಾಜ್ಯದ ಮಹಿಳೆಯರು, ದಲಿತರು, ಯುವಜನರ ಪರವಾಗಿ ಒಂದಷ್ಟು ನೆರವು ನೀಡಿದ ತಕ್ಷಣವೇ ಹೊರೆಯಾಗುತ್ತದೆಯೋ? ಅದು ಹೇಗೆ? ಶ್ರೀಮಂತರು, ಲೂಟಿಕೋರ ಕಾರ್ಪೋರೇಟ್ ಕಂಪನಿಗಳಿಗೆ ದಾನ ಮಾಡಿದರೇ ದೇಶಕ್ಕೆ ಹೊರೆಯಲ್ಲಾ? ಬಡ ಹಾಗೂ ದುರ್ಬಲ ಸಮುದಾಯಗಳಿಗೆ ನೆರವಾದರೇ ಹೊರೆಯಾಗುವುದೊ?

ಇದು ಯಾವ ನ್ಯಾಯ? ನಮಗೆ ಗೊತ್ತಿದೆ! ನೀವು ಹೇಳುವ ನ್ಯಾಯ ಇದು ಲೂಟಿಕೋರರ ಪರವಾದ ನ್ಯಾಯವೆಂಬುದು.

ಬಡವರ ನಡುವೆ ಸೋಮಾರಿತನ ಹೆಚ್ಚುವುದಿಲ್ಲವೇ?

ಇದರಿಂದ ಬಡವರ ನಡುವೆ ಸೋಮಾರಿತನ ಹೆಚ್ಚುವುದಿಲ್ಲವೇ? ಎಂಬುದು ಕೇಳಲಾಗುತ್ತಿರುವ ಪ್ರಶ್ನೆ.

ಖಂಡಿತಾ ಇಲ್ಲ! ರಾಜ್ಯ ಸರಕಾರದ ಅಂಕಿ ಅಂಶಗಳ ಪ್ರಕಾರ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡವರ ತಲಾ ಆದಾಯ 60–65 ರೂ. ಗಳಿಗಿಂತ ಕಡಿಮೆಯಾಗಿದೆ. ಈ ನೆರವು ಇನ್ನೊಂದು 10–20 ರೂಗಳನ್ನು ಹೆಚ್ಚಿಸಬಹುದಷ್ಟೇ? ಈ 60–80 ರೂ.ಗಳ ಆದಾಯದಲ್ಲಿ ಈ ದಿನದ ಅಗತ್ಯ ವಸ್ತುಗಳ ಬೆಲೆ ಏರಿಕೆ ಸಂದರ್ಭದಲ್ಲಿ ದಿನಗಳೆಯಲು ಸಾಧ್ಯವೇ? ಅವರು ದುಡಿಯಲೇ ಬೇಕಾಗುತ್ತದೆ. ಹೀಗೆ

ಪುಟ 10 ಕ್ಕೆ

ಗೃಹ ಲಕ್ಷ್ಮಿ: ಗೃಹ ಲಕ್ಷ್ಮಿ ಯೋಜನೆಯಡಿ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ನೀಡಿದ ವಾಗ್ದಾನ ಎಲ್ಲ ಗೃಹಿಣಿಯರಿಗೆ ಅಂದರೆ ಮನೆಯೊಡತಿಯರಿಗೆ ಮಾಸಿಕ 2,000 ರೂಗಳನ್ನು ನೀಡಲಾಗುವುದು ಎಂದಿದ್ದರು.

ಇದೀಗ ಅದರ ಅರ್ಜಿ ಸಲ್ಲಿಕೆಯಲ್ಲಿ ಅದರಲ್ಲೂ ಕಡಿತಗೊಳಿಸಿದ್ದಾರೆ.

ಆದಾಯ ತೆರಿಗೆ ನೀಡುವ ಗಂಡನನ್ನು ಹೊಂದಿರುವ ಗೃಹಿಣಿಯರನ್ನು ಹೊರಗಿಟ್ಟಿದ್ದಾರೆ.

ಮುಖ್ಯ ಮಂತ್ರಿ ಶಿದ್ಧರಾಮಯ್ಯನವರು ಮಂತ್ರಿಮಂಡಲದ ಆದೇಶವನ್ನು ಪತ್ರಿಕಾ ಗೋಷ್ಠಿಯಲ್ಲಿ ಹೇಳುವಾಗ ಎಲ್ಲ ಮನೆಯ ಒಡತಿಯರಿಗೂ ಎಂದಿದ್ದಾರೆ. ಭಾವುಕರಾಗಿ ನನ್ನ ಹೆಂಡತಿಗೂ ಸೇರಿ ಎಂದು ವಿವರಿಸಿದ್ದಾರೆ. ಈಗ ಆದಾಯ ತೆರಿಗೆ ನೀಡುವ ಯಾಜಮಾನನ ಮನೆಯ ಒಡತಿಯರನ್ನು ಹೊರಗಿಟ್ಟಿದ್ದಾರೆ. ಅವರಿಗೆ ಯಾವುದೇ ಆದಾಯವಿಲ್ಲದೇ, ಅವರು ಸ್ವತಃ ಆದಾಯ ತೆರಿಗೆ ನೀಡದವರಾಗಿದ್ದರೂ ಅವರು ಫಲಾನುಭವಿಗಳಾಗುವುದಿಲ್ಲ.

ಅದೇ ರೀತಿ, ಇದರ ಫಲಾನುಭವಿಯಾಗಲು ಆಧಾರ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಮತ್ತು ರೇಷನ್ ಕಾರ್ಡ ಇದ್ದರೆ ಸಾಲದಂತೆ, ಪ್ಯಾನ್ ಕಾರ್ಡ್, ವಿಳಾಸ ಮತ್ತು ವಾಸ ಸ್ಥಳದ ಸರ್ಟಿಫಿಕೇಟ್ ಗಳು ಬೇಕಂತೆ ಇಂತಹ ಅನಗತ್ಯಗಳಿಗಾಗಿ, ಅನಗತ್ಯವಾಗಿ ಜನತೆ ಸಾವಿರಾರು ರೂಗಳನ್ನು ಖರ್ಚು ಮಾಡಿಕೊಂಡು ಅಲೆಯ ಬೇಕಾಗಿದೆ. ಇದು ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಲಿದೆ.



ಮಹಿಳೆಯರಿಗೆ ಸಾರಿಗೆ ಉಚಿತ:

ಕೆಎಸ್‌ಆರ್‌ಟಿಸಿ ಬಿಎಂಟಿಸಿ ಯ ಕೆಲ ಐಶಾರಾಮಿ ಬಸ್ ಹೊರತು ಪಡಿಸಿ ಕೆಂಪು ಬಸ್‌ಗಳಲ್ಲಿ ರಾಜ್ಯದ ಎಲ್ಲ ಮಹಿಳೆಯರಿಗೆ ರಾಜ್ಯದೊಳಗೆ ಉಚಿತ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಆದರೇ ಈ ಯೋಜನೆಯಡಿ ಹಲವು ಷರತ್ತುಗಳು ಕೆಎಸ್‌ಆರ್‌ಟಿಸಿ ಸಂಸ್ಥೆಗೆ ಸೌಲಭ್ಯಕ್ಕಾಗಿ ಅಲೆಯುವುದನ್ನು ತಪ್ಪಿಸಬಹುದಿತ್ತು. ಮಹಿಳೆಯರು ಆಧಾರ್ ಕಾರ್ಡ್ ಅಥವಾ ಐಡಿ ಕಾರ್ಡ್ ತೋರಿಸಿದರೇ ಸಾಕೆಂಬ ಶರತ್ತು ಇದ್ದರೆ ಸಾಕಿತ್ತು.

ಯುವ ನಿದಿ

ಈ ಕಾರ್ಯಕ್ರಮ 2022–23 ರ ಸಾಲಿನಿಂದ ಜಾರಿಗೆ ಬರಲಿದೆ ಎಂದು ಹೇಳಿ, ಈ ಸಾಲಿನಲ್ಲಿ ಪದವಿ ಹಾಗೂ ಡಿಪ್ಲೊಮಾ ಪಡೆದವರು ಅಸರು ತಿಂಗಳ ಕಾಲ ನಿರುದ್ಯೋಗಿಯಾಗಿ ಉಳಿದರೆ ಅವರಿಗೆ ಮುಂದಿನ 24 ತಿಂಗಳವರೆಗೆ ಕ್ರಮವಾಗಿ ತಲಾ 3,000 ರೂ ಹಾಗೂ 1,500 ರೂ ನೀಡಲಾಗುವುದು ಎನ್ನಲಾಗಿದೆ. ಖಾಸಗೀ ಕೆಲಸದಲ್ಲಿ ತೊಡಗಿದ್ದರೂ ಉದ್ಯೋಗಿಗಳೇ ಎನ್ನಲಾಗಿದೆ. ಬಹುತೇಕ ನಿರುದ್ಯೋಗಿಗಳು ಉದ್ಯೋಗ ದೊರೆಯದೇ ಜೀವನ ನಿರ್ವಹಣೆಗಾಗಿ ಅವರ ವಿದ್ಯಾರ್ಹತೆಗೆ ತಕ್ಕದಲ್ಲದಾ ಮತ್ತೇನೋ ಕೆಲಸದಲ್ಲಿ ತೊಡಗಿದವರು ಅರೆ ಉದಗಯೋಗದಲ್ಲಿ ತೊಡಗಿದವರು ಮತ್ತಷ್ಟು ಸ್ಪಷ್ಟನೆ ಬಯಸಿದ್ದಾರೆ. ಇದನ್ನು 2020–21 ರ ಸಾಲಿನಿಂದ ಜಾರಿಗೆ ಬರುವಂತೆ ಕ್ರಮವಹಿಸಿದ್ದರೇ ಮತ್ತಷ್ಟು ನ್ಯಾಯ ಸಿಗುತ್ತಿತ್ತು ಎಂಬ ಧ್ವನಿ ಕೇಳಿ ಬರುತ್ತಿದೆ. ಏನೆ ಆದರೂ ರಾಜ್ಯದಾದ್ಯಂತ ಕಳೆದ ಹಲವಾರು ದಶಕಗಳಿಂದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಧ್ವನಿ ಎತ್ತುತ್ತಿದ್ದ ನಿರುದ್ಯೋಗ ಭತ್ಯೆಯ ವಿಚಾರದ ಹೋರಾಟಕ್ಕೆ ಇದರಿಂದ ಪುಷ್ಟಿ ಸಿಕ್ಕಂತಾಗಿದೆ.

ಖಾಸಗೀಕರಣದ ಆತಂಕ

ಈ ಕೊಡುಗೆಗಳು ಕೆಲವು ಕೊರತೆಗಳನ್ನು ಹೊಂದಿದ್ದರೂ ಇವು ಸ್ವಾಗತಾರ್ಹವೇ ಆಗಿವೆ.

ರಾಜ್ಯ ಸರಕಾರ ಇಂಧನ ಇಲಾಖೆಗೆ ಹಾಗೂ ಸಾರಿಗೆ ಸಂಸ್ಥೆಗಳಿಗೆ ಕೊಡುಗೆಗಳ ಕಾರಣದಿಂದ ಅವುಗಳಿಗೆ ಕೊಡಬೇಕಾದ ಹಣವನ್ನು ಸಕಾಲದಲ್ಲಿ ಒದಗಿಸಲು ಕ್ರಮ ವಹಿಸಬೇಕು.

ಸರಕಾರ ಒದಗಿಸಬೇಕಾದ ಸಕಾಲಿಕ ನೆರವು ಅಥವಾ ಬಾಕಿ ಹಣ ನೀಡದೇ ಹೋದಲ್ಲಿ ಅವುಗಳು ಮತ್ತಷ್ಟು ನಷ್ಟಕ್ಕೆ ತುತ್ತಾಗುವ ಸಂಭವಗಳಿವೆ. ಅದನ್ನೇ ನೆಪವಾಗಿಸಿ ಖಾಸಗೀಕರಣ ಮಾಡುವ ಹುನ್ನಾರಕ್ಕೆ ಖಾಸಗೀಕರಣ ಬಯಸುವ ಶಕ್ತಿಗಳಿಗೆ ಕುಮ್ಮಕ್ಕಾಗದಂತೆ ಸರಕಾರ ಎಚ್ಚರವಹಿಸುವುದು ಅಗತ್ಯವಿದೆ.

ಇಂತಹ ಅಪಾಯಕ್ಕೆ ಕಾಂಗ್ರೆಸ್ ಪಕ್ಷ ದೂಡಲಾರದೆಂಬ ಯಾವ ಗ್ಯಾರೆಂಟಿ ಇಲ್ಲವೆಂಬ ಆತಂಕಗಳು ಒಂದೆಡೆಯಾದರೇ ಮತ್ತೊಂದೆಡೆ, ಈ ಬೆಳವಣಿಗೆಗಾಗಿ ಕಾತರಿಸುತ್ತಿರುವ ಖಾಸಗೀಕರಣ ಬಯಸುವ ಶಕ್ತಿಗಳು ಜೊಲ್ಲು ಸುರಿಸುವ ಕ್ರಿಯೆಗಳು ನಡೆದಿವೆ. ಈ ಕುರಿತಂತೆ ಎಡ ಮತ್ತು ಜಾತ್ಯತೀತ ಪ್ರಗತಿಪರ ಶಕ್ತಿಗಳು ಈ ಕುರಿತಂತೆ ಜಾಗೃತಿಯನ್ನು ವಹಿಸಬೇಕಿದೆ.



ಬಾಲಾಸೋರ್ ರೈಲು ದುರಂತದ ಪಾಠಗಳು

ಬಾಲಾಸೋರ್ ರೈಲು ದುರಂತವು ಜನರಿಗೆ ಒಂದು ಹೃದಯ ವಿದ್ರಾವಕ ಎಚ್ಚರಿಕೆಯ ಕರೆ ಗಂಟೆಯಾಗಿದೆ. ಬೃಹತ್ ರೈಲ್ವೆ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಾಗಿಲ್ಲ ಎನ್ನುವುದೇ ಆ ಎಚ್ಚರಿಕೆ.

ಪ್ರಕಾಶ್ ಕಾರತ್

ಜೂನ್ 2 ರಂದು ಒಡಿಶಾದ ಬಾಲಾಸೋರ್ ಬಳಿ ನಡೆದ ಭೀಕರ ರೈಲು ದುರಂತ, ಇಡೀ ಭಾರತ ಮಾತ್ರವಲ್ಲದೆ ಜಗತ್ತನ್ನೇ ತಲ್ಲಣಗೊಳಿಸಿದೆ. ಈ ಅವಘಡದಲ್ಲಿ 288 ಜನರು ಮೃತಪಟ್ಟು 1100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ವೇಗವಾಗಿ ಬರುತ್ತಿದ್ದ ಒಂದು ರೈಲು ತಪ್ಪು ಮಾರ್ಗಕ್ಕೆ ಹೋಗಿ ಕಬ್ಬಿಣದ ಅದಿರು ತುಂಬಿಕೊಂಡು ಹಳಿ ಮೇಲೆ ನಿಂತಿದ್ದ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದು ಹಳಿ ತಪ್ಪಿತು. ಅದರ ಪರಿಣಾಮವಾಗಿ ವೇಗವಾಗಿ ಬರುತ್ತಿದ್ದ ಮೂರನೇ ರೈಲು ಕೂಡ ಹಳಿತಪ್ಪಿ ಈ ದುರಂತ ಸಂಭವಿಸಿತು.

ಎರಡೂ ಪ್ರಯಾಣಿಕ ರೈಲುಗಳಲ್ಲಿ ಜನರು ತುಂಬಿ ತುಳುಕುತ್ತಿದ್ದರು. ಮುಖ್ಯವಾಗಿ ಪಶ್ಚಿಮ ಬಂಗಾಳ, ಒಡಿಶಾ, ತಮಿಳು ನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ವಲಸೆ ಕಾರ್ಮಿಕರು ಮತ್ತು ಅವರ ಕುಟುಂಬಗಳು ಪ್ರಯಾಣಿಸುತ್ತಿದ್ದರು. ಭಾರತಕ್ಕೆ ರೈಲು ಅಪಘಾತಗಳು ಅಪರಿಚಿತವೇನಲ್ಲ. 2017–1021ರಲ್ಲಿ 2000ಕ್ಕೂ ಹೆಚ್ಚು ರೈಲು ಅಪಘಾತಗಳು ನಡೆದಿದ್ದು ಆ ಪೈಕಿ 217 'ಭೀಕರ' ಆಗಿದ್ದು ದೊಡ್ಡ ಪ್ರಮಾಣದಲ್ಲಿ ಸಾವು ಹಾಗೂ ಗಾಯ ಸಂಭವಿಸಿದ ಪ್ರಕರಣಗಳಾಗಿವೆ. ಅಲ್ಲದೆ ರೈಲ್ವೆ ಸೊತ್ತಿಗೂ ಅಪಾರ ನಷ್ಟವಾಗಿದೆ.

ಆದರೆ ಈಚಿನ ಈ ಅವಘಡವು ಜನರನ್ನು ಹೆಚ್ಚು ಕಂಗೆಡಿಸಿದೆ. ದುರಂತದ ಭೀಕರತೆ, ಸಾವಿನ ಬರ್ಬರ ಸ್ವರೂಪದಿಂದ ಮಾತ್ರವೇ ಹೀಗಾಗಿರುವುದಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ ಭಾರತೀಯ ರೈಲ್ವೆಯನ್ನು ಸುರಕ್ಷತೆ ಮತ್ತು ಸುಖ ಪ್ರಯಾಣಕ್ಕಾಗಿ ಈಚಿನ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಒಂದು 'ಸ್ಮಾರ್ಟ್' ಹಾಗೂ ವೇಗದ ಸಾರಿಗೆ ವ್ಯವಸ್ಥೆಯನ್ನಾಗಿ ಮಾಡಲಾಗುತ್ತಿದೆ ಎಂಬ ಭಾವನೆ ಬರುವಂತೆ ಬಿಂಬಿಸಲಾಗುತ್ತಿದ್ದುದೇ ಈ ಆಘಾತಕ್ಕೆ ಕಾರಣವಾಗಿದೆ. ಈ ರೀತಿಯ ಭಾವನೆ ಸೃಷ್ಟಿಯಾಗುವಂತೆ ಮೋದಿ ಸರಕಾರ ಭರ್ಜರಿ ಪ್ರಚಾರ ನಡೆಸಿತ್ತು. ದೇಶದಾದ್ಯಂತ ಪ್ರಧಾನಿಯೇ ಸ್ವತಃ ವಂದೇ ಭಾರತ್ ರೈಲುಗಳನ್ನು ಉದ್ಘಾಟಿಸುವ ಮೂಲಕ ಈ ಭಾವನೆ ಹರಡಲಾಗುತ್ತಿದೆ. ಹೆಚ್ಚಾಗಿ ಈ ಸೆಮಿ–ಹೈಸ್ಪೀಡ್ ವಂದೇ ಭಾರತ್ ರೈಲುಗಳು ಮತ್ತು 1275 ನಿಲ್ದಾಣಗಳ 'ಉನ್ನತೀಕರಣ' ಇತ್ಯಾದಿಗಳಿಗೆ ಈ ವರ್ಷದ ಬಜೆಟ್‌ನಲ್ಲಿ 2.4 ಲಕ್ಷ ರೂಪಾಯಿಗೂ ಅಧಿಕ ಹಣವನ್ನು ಹಂಚಿಕೆ ಮಾಡಲಾಗಿತ್ತು. ಆದ್ದರಿಂದ, ಬಾಲಾಸೋರ್ ರೈಲು ದುರಂತವು ಜನರಿಗೆ ಒಂದು ಹೃದಯ–ವಿದ್ರಾವಕ ಎಚ್ಚರಿಕೆಯ ಕರೆ ಗಂಟೆಯಾಗಿದೆ: ಬೃಹತ್ ರೈಲ್ವೆ ವ್ಯವಸ್ಥೆಯಲ್ಲಿ ಎಲ್ಲವೂ ಸರಿಯಾಗಿಲ್ಲ ಎನ್ನುವುದೇ ಆ ಎಚ್ಚರಿಕೆ.

ನ್ಯಾಯಸಮ್ಮತ ಪ್ರಶ್ನೆ

ಕೋಲ್ಕತಾದಿಂದ ಚೆನ್ನೈ ಕಡೆ ವೇಗವಾಗಿ ಸಂಚರಿಸುತ್ತಿದ್ದು ಮುಖ್ಯ ಮಾರ್ಗದಲ್ಲಿದ್ದ (ಮೇನ್ ಲೇನ್) ಕೋರಮಂಡಲ್ ಎಕ್ಸ್‌ಪ್ರೆಸ್ ರೈಲು ನಿಂತಿದ್ದ ಗೂಡ್ಸ್ ರೈಲಿದ್ದ ಲೂಪ್ ಲೈನ್‌ಗೆ ಹೋಗುವಂತೆ ಮಾಡಿದ್ದು ಯಾಕೆ ಎಂಬುದಕ್ಕೆ ಕಾರಣ ಹುಡುಕುವಂತೆ ವ್ಯಾಪಕವಾಗಿ ಬೇಡಿಕೆ ಕೇಳಿ ಬರುತ್ತಿರುವುದು ನ್ಯಾಯಸಮ್ಮತವಾಗಿಯೇ ಇದೆ. ಹಳಿಗಳ ಮೇಲೆ ರೈಲುಗಳನ್ನು ಬದಲಾಯಿಸುವ ಹಾಗೂ ಸಂಚರಿಸಬಹುದು ಅಥವಾ ಬೇಡ ಎಂಬ ಸಿಗ್ನಲ್ ನಿಯಂತ್ರಿಸುವ ಇಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿ ಬಹುಶಃ ಏನೋ ತಪ್ಪಿರಬೇಕು ಎಂದು ರೈಲ್ವೆ ಮಂಡಳಿ ಮತ್ತು ರೈಲ್ವೆ ಸಚಿವರು ಹೇಳಿದ್ದಾರೆ. ಪಾಯಿಂಟ್ಸ್ ವ್ಯವಸ್ಥೆಯನ್ನು ತಿರುಚಿರುವ ಸಾಧ್ಯತೆಯೂ ಇದೆಯೆಂಬ ಅನುಮಾನ ವ್ಯಕ್ತಪಡಿಸಿ ಸಿಬಿಐ ತನಿಖೆ ಅಗತ್ಯವಾಯಿತು ಎಂದೂ ಹೇಳಿದ್ದಾರೆ. ಇದೊಂದು ಗಮನವನ್ನು ಬೇರೆಡೆ ಸೆಳೆಯುವ ತಂತ್ರವಾಗಿದೆ. ರೈಲ್ವೆ ಸುರಕ್ಷತಾ ಆಯುಕ್ತರ ವರದಿ ಬರುವುದಕ್ಕೂ ಕಾಯದೇ ಅದಕ್ಕೂ ಮುಂಚೆಯೇ ಅಪಘಾತದಲ್ಲಿ ಯಾವುದೇ ಕ್ರಿಮಿನಲ್ ಕೃತ್ಯ ಇರಬಹುದಾದ್ದರ ಬಗ್ಗೆ ತನಿಖೆಗೆ ಆದೇಶಿಸುವ ಅಗತ್ಯವೇನಿತ್ತು?

ಸಿಎಜಿಯಿಂದ ಮಂಗಳಾರತಿ

ಆದರೆ ಇದೊಂದೇ ಸಂಪೂರ್ಣ ಕಥೆಯಲ್ಲ. ಮಹಾ ಲೆಕ್ಕ ಪರಿಶೋಧಕರ (ಸಿಎಜಿ) ಇತ್ತೀಚಿನ ಕಾರ್ಯಕ್ಷಮತೆ ವರದಿಯು 2017–21ರಲ್ಲಿ ರೈಲುಗಳು ಹಳಿ ತಪ್ಪಿದ ಕೆಲವು ಪ್ರಕರಣಗಳ ಇನ್ನೂ ಘೋರವಾದ ವಿಚಾರಗಳನ್ನು ಎತ್ತಿ ತೋರಿಸಿದೆ. ಹಳಿಗಳನ್ನು ದಾಖಲಿಸುವ ಕಾರುಗಳಲ್ಲಿ ಶೇಕಡ 20ರಿಂದ ಶೇಕಡ 100ರಷ್ಟು ಕೊರತೆಯಿದೆ ಎಂದು ಸಿಎಜಿ ವರದಿ ಹೇಳಿದೆ. ಈ ಕಾರುಗಳು ರೈಲು ಹಳಿಗಳ ಮೇಲಿನ ಸ್ಟ್ರಕ್ಚರಲ್ ಮತ್ತು ಜಾಮೆಟ್ರಿಕಲ್ ಲಕ್ಷಣಗಳನ್ನು ಮೌಲ್ಯಮಾಪನ ಮಾಡುತ್ತದೆ. 1129 ಹಳಿ ತಪ್ಪುವಿಕೆಗಳಲ್ಲಿ 422 ಪ್ರಕರಣಗಳು 'ಟ್ರ್ಯಾಕ್‌ಗಳ ನಿರ್ವಹಣೆ' (171 ಕೇಸ್‌ಗಳು) ಮತ್ತು 'ಟ್ರ್ಯಾಕ್ ಮಾನದಂಡಗಳನ್ನು ಅನುಮತಿಸಲಾದ ಮಿತಿಗಿಂತ ಆಚೆಗೂ ಡೀವಿಯೇಟ್ ಮಾಡುವುದು' (156 ಕೇಸ್‌ಗಳು) ಮುಂತಾದ ಇಂಜಿನಿಯರಿಂಗ್ ವೈಫಲ್ಯಗಳನ್ನು ಒಳಗೊಂಡಿದೆ. 182 ಪ್ರಕರಣಗಳಲ್ಲಿ ಬೋಗಿಗಳ ಚಕ್ರಗಳಲ್ಲಿ ದೋಷ ಮುಂತಾದವು ಕಾರಣವಾಗಿದ್ದು 275 ಪ್ರಕರಣಗಳಿಗೆ 'ಪಾಯಿಂಟ್‌ಗಳನ್ನು ತಪ್ಪಾಗಿ ನಿಗದಿಪಡಿಸಿರುವುದು ಮತ್ತಿತರ ಎದ್ದುಕಾಣುವ ದೋಷಗಳು ಕಾರಣ' ಎಂದು ಸಿಎಜಿ ವರದಿ ಸ್ಪಷ್ಟಪಡಿಸಿದೆ.

2017–18ರಿಂದೀಚೆಗೆ ಎಲ್ಲಾ ಸುರಕ್ಷತಾ ಸಂಬಂಧಿತ ಕಾರ್ಯಗಳನ್ನು ರಾಷ್ಟ್ರೀಯ ರೈಲ್ ಸಂರಕ್ಷಾ ಕೋಶ್ (ಆರ್‌ಆರ್‌ಎಸ್‌ಕೆ) ವ್ಯಾಪ್ತಿಗೆ ತರಲಾಗಿದೆ. ಅದಕ್ಕೂ ಮುಂಚೆ ಅವುಗಳಿಗೆ ಡೆಪ್ರಿಸಿಯೇಶನ್ ರಿಸರ್ವ್ ಫಂಡ್‌ನಿಂದ ಹಣಕಾಸು ಒದಗಿಸಲಾಗುತ್ತಿತ್ತು. ಹೊಸ ಆಡಳಿತದಲ್ಲಿ, ಆರ್‌ಆರ್‌ಎಸ್‌ಕೆಗೆ ನಿಗದಿಯಾದ 1 ಲಕ್ಷ ಕೋಟಿ ರೂಪಾಯಿಯಲ್ಲಿ ಶೇಕಡ 20ರಷ್ಟು ಹಣವನ್ನು ಆಂತರಿಕ ಸಂಪನ್ಮೂಲಗಳಿಂದ ಕ್ರೋಡೀಕರಿಸಬೇಕಾಗಿದೆ. ಇದು ಮೋದಿ ಆಡಳಿತದ ವಿಚಿತ್ರ ನೀತಿಯಾಗಿದೆ: ಖರ್ಚನ್ನು ಕಡಿತಗೊಳಿಸುವುದು ಹಾಗೂ ಪ್ರತಿಯೊಂದು ಸಂಸ್ಥೆಯೂ ತಮ್ಮ ಆಂತರಿಕ ಸಂಪನ್ಮೂಲಗಳಿಂದ ನಿಧಿಗಳನ್ನು ಸಂಗ್ರಹಿಸಬೇಕೆನ್ನುವುದೇ ಆ ವಿಚಿತ್ರ ಧೋರಣೆಯಾಗಿದೆ. ರೈಲ್ವೆಯ ಬಡ ಆಂತರಿಕ ಸಂಪನ್ಮೂಲ ಪರಿಸ್ಥಿತಿಯನ್ನು ಗಮನಿಸಿದರೆ, ಆರ್‌ಆರ್‌ಎಸ್‌ಕೆಯ ಸುಮಾರು ಶೇಕಡ 80ರಷ್ಟು ರೈಲ್ವೆಯ ಪಾಲನ್ನು ಕ್ರೋಡೀಕರಿಸಿಲ್ಲ. ಮೋದಿ ಅತ್ಯುತ್ಸಾಹದಿಂದ ತಮ್ಮ ಹೊಸ ರೈಲುಗಳ ಉದ್ಘಾಟನೆಯಲ್ಲಿ ತೊಡಗಿರುವಾಗ, ಅಗತ್ಯ ರೈಲ್ವೆ ಸುರಕ್ಷತಾ ಕ್ರಮಗಳಿಗೆ ಹಣಕಾಸಿನ ಕೊರತೆ ಕಾಡುತ್ತಿದೆ. ಇಷ್ಟು ಮಾತ್ರವೇ ಅಲ್ಲ. ಆರ್‌ಆರ್‌ಎಸ್‌ಕೆಯಿಂದ ಖರ್ಚು ಮಾಡುವ ಪ್ರಮಾಣ ಹಲವು ವರ್ಷಗಳಿಂದ ಇಳಿಮುಖ ಆಗಿರುವುದನ್ನು ಕೂಡ ಸಿಎಜಿ ವರದಿ ಎತ್ತಿ ತೋರಿಸಿದೆ. ಅದರಲ್ಲೂ ವಿಶೇಷವಾಗಿ ಹಳಿ ತಪ್ಪುವಿಕೆ ಮತ್ತು ಲೆವೆಲ್ ಕ್ರಾಸಿಂಗ್‌ಗಳಂಥ ಆದ್ಯತಾ ಕೆಲಸಗಳಿಗೆ ಈ ಕೊರತೆ ಕಾಡುತ್ತಿದೆ.

ಸಿಬ್ಬಂದಿ ಕೊರತೆ

ಸುರಕ್ಷತೆ ಬಗ್ಗೆ ಈ ಪರಿಯ ಕ್ರಿಮಿನಲ್ ಧೋರಣೆಯಲ್ಲದೆ, ರೈಲ್ವೆಯಲ್ಲಿ ಸಿಬ್ಬಂದಿ ಕೊರತೆಯೂ ದೊಡ್ಡ ಪ್ರಮಾಣದಲ್ಲಿದೆ. ರೈಲ್ವೆಯಲ್ಲಿ ಸುಮಾರು 3 ಲಕ್ಷ ನಾನ್–ಗಜೆಟೆಡ್ ಹುದ್ದೆಗಳು ಖಾಲಿಯಿವೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಫೆಬ್ರವರಿಯಲ್ಲಿ ರಾಜ್ಯ ಸಭೆಗೆ ತಿಳಿಸಿದ್ದರು. ದಕ್ಷಿಣ ವಲಯಕ್ಕೆ ಮಂಜೂರಾಗಿರುವ 5229 ಹುದ್ದೆಗಳಲ್ಲಿ 471 ಹುದ್ದೆಗಳನ್ನಾದರೂ ತುಂಬುವಂತೆ ಅಖಿಲ ಭಾರತ ಲೋಕೋ ರನ್ನಿಂಗ್ ಸ್ಟಾಫ್ ಅಸೋಸಿಯೇಶನ್ (ಎಐಎಲ್‌ಆರ್‌ಎಸ್‌ಎ) ಇತ್ತೀಚೆಗೆ ಆಗ್ರಹಿಸಿತ್ತು. ಲೋಕೋ ಸಿಬ್ಬಂದಿ ಒಂದೇ ಸಮನೆ ನಿರಂತರವಾಗಿ 12 ಗಂಟೆಗೂ ಹೆಚ್ಚು ಸಮಯ ಕೆಲಸ ಮಾಡುತ್ತಾರೆ ಎನ್ನುವುದನ್ನು ಸಂಘವು ಗಮನಕ್ಕೆ ತಂದಿದೆ. ಸಿಬ್ಬಂದಿ ಕೊರತೆಯೇ ಇದಕ್ಕೆ ಕಾರಣವಾಗಿದೆ. ಬಾಲಾಸೋರ್‌ನಂಥ ದುರಂತ ಇನ್ನೊಮ್ಮೆ ಪುನರಾವರ್ತನೆ ಆಗದಿರಬೇಕಾದರೆ ಮೋದಿ ಸರಕಾರ ರೈಲ್ವೆಯ ಸುರಕ್ಷತಾ ಕ್ರಮಗಳ ಪೂರ್ಣ ಹಾಗೂ ನೈಜ ಚಿತ್ರಣವನ್ನು ಬಹಿರಂಗ ಪಡಿಸಬೇಕು. ಮತ್ತು ಸಾರ್ವಜನಿಕ ವಿಶ್ವಾಸವನ್ನು ಮರಳಿಸಬೇಕಾದರೆ ಒಡೆದು ಹೋಗಿರುವ ವ್ಯವಸ್ಥೆಯನ್ನು ತ್ವರಿತವಾಗಿ ರಿಪೇರಿ ಮಾಡಬೇಕು. ರೈಲ್ವೆಯಲ್ಲಿ ನಡೆಯುತ್ತಿರುವ ಖಾಸಗೀಕರಣದಿಂದ ಮುಂದೆ ಏನು ದುರಂತ ಕಾದಿದೆ ಎನ್ನುವುದಕ್ಕೆ ಬಾಲಸೋರ್ ದುರಂತ ಮುನ್ನೆಚ್ಚರಿಕೆಯಾಗಿದೆ.

ರಾಜಕೀಯ ಪ್ರಶ್ನೆ

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಕಳೆದ ಎರಡು ದಶಕಗಳಲ್ಲೇ ಘೋರವಾದ ರೈಲ್ವೆ ದುರಂತಕ್ಕೆ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಿಲ್ಲವೇಕೆ ಎಂದು ರಾಜಕೀಯ ವಲಯದಲ್ಲಿ ನ್ಯಾಯೋಚಿತವಾದ ಪ್ರಶ್ನೆಯನ್ನು ಎತ್ತಲಾಗಿದೆ. 1956ರಲ್ಲಿ ತಮಿಳುನಾಡಿನಲ್ಲಿ ಸಂಭವಿಸಿದ ಒಂದು ರೈಲ್ವೆ ಅಪಘಾತದ ಹಿನ್ನೆಲೆಯಲ್ಲಿ ಲಾಲ್ ಬಹಾದೂರ್ ಶಾಸ್ತ್ರಿ ರೈಲ್ವೆ ಸಚಿವ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ನೆಹರೂ ಸಂಪುಟದಿಂದ ಹೊರ ಬಂದಿದ್ದರು. 1999ರಲ್ಲಿ ಪಶ್ಚಿಮ ಬಂಗಾಳದಲ್ಲಿ ಭೀಕರ ರೈಲ್ವೆ ಅಪಘಾತಕ್ಕೆ ಹೊಣೆ ಹೊತ್ತು ನಿತೀಶ್ ಕುಮಾರ್ ರೈಲ್ವೆ ಸಚಿವ ಸ್ಥಾನದಿಂದ ಪದತ್ಯಾಗ ಮಾಡಿ ಎ.ಬಿ. ವಾಜಪೇಯಿ ಸಂಪುಟದಿಂದ ಹೊರಬಂದಿದ್ದರು. ಈಗ, ಬಾಲಾಸೋರ್‌ನ ಘೋರ ದುರಂತಕ್ಕೆ ಹೊಣೆಗಾರಿಕೆ ತೋರಬೇಕೆಂಬ ಭಾವನೆ ಮೋದಿಗಾಗಲೀ ಅವರ ರೈಲ್ವೆ ಮಂತ್ರಿಗಾಗಲೀ ಇಲ್ಲ!

ಅನು: ವಿಶ್ವ

ಬಿಜೆಪಿ ಸರಕಾರ ಎಂಎಸ್‌ಪಿಯಲ್ಲಿ ರೈತರಿಗೆ ಮೋಸ ಮಾಡುವುದನ್ನು ನಿಲ್ಲಿಸಬೇಕು: ಎಐಕೆಎಸ್

ಕೇಂದ್ರ ಸರಕಾರ 2023–24ರ ಸಾಲಿನ ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಪ್ರಕಟಿಸಿದೆ. ಇದು ಹಿಂದಿನ ವರ್ಷಗಳಿಗಿಂತ ಅತಿ ಹೆಚ್ಚಿನ ಏರಿಕೆಯಾಗಿದೆ ಎಂದು ಆಹಾರ ಮಂತ್ರಿಗಳು ಹೇಳಿದ್ದಾರೆ. ಆದರೆ ಈ ಎಂಎಸ್‌ಪಿ ನಿರ್ಧಾರದಲ್ಲಿ ರೈತರಿಗೆ ಅನ್ಯಾಯವಾಗಿದೆ, ಅವರ ನಿರೀಕ್ಷೆಯನ್ನು ಹುಸಿಗೊಳಿಸಿದೆ, ಅವರಿಗೆ ಭಾರೀ ನಷ್ಟಗಳನ್ನುಂಟು ಮಾಡಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ. ಪ್ರಧಾನ ಮಂತ್ರಿಗಳು ರೈತರ ಆದಾಯವನ್ನು ಇಮ್ಮಡಿಗೊಳಿಸಲಾಗುವುದು ಎಂದಿದ್ದರು. ಆದರೆ ಏರುತ್ತಿರುವ ಲಾಗುವಾಡುಗಳ ವೆಚ್ಚ, ಅದರ ಜತೆಗೆ ಎಂಎಸ್‌ಪಿಯಲ್ಲಿ ಅನ್ಯಾಯ ರೈತರ ಮೇಲೆ, ವಿಶೇಷವಾಗಿ ಸಣ್ಣ, ಅಂಚಿನಲ್ಲಿರುವ ಮತ್ತು ಮಧ್ಯಮ ರೈತರ ಮೇಲೆ ಸಾಲಹೊರೆಯನ್ನು ಹೇರಿದೆ. ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಸಿ2+50% ಸೂತ್ರದಂತೆ ಎಂಎಸ್‌ಪಿ ಕೊಡಲಾಗುವುದು ಎಂಬ ಪ್ರಧಾನಿಗಳ ಆಶ್ವಾಸನೆ ಕೂಡ ಮತ್ತೆ ಹುಸಿಯಾಗಿದೆ, ಇದರಿಂದಾಗಿ ರೈತರು ಮಾಡಿದ ವೆಚ್ಚವನ್ನು ಕೂಡ ಭರಿಸಲಾರದೆ ಸಾಲಗ್ರಸ್ತರಾಗಬೇಕಾಗಿ ಬರುತ್ತಿದೆ ಎಂದು ಎಐಕೆಎಸ್ ಹೇಳಿದೆ.

ಸರಕಾರ ಪ್ರಕಟಿಸಿರುವ ಸರಾಸರಿ ವೆಚ್ಚದ ಆಧಾರದಲ್ಲಿ ಲೆಕ್ಕ ಹಾಕಿರುವ ವಿವಿಧ ಬೆಳೆಗಳ ಎಂಎಸ್‌ಪಿ ಗಳು ಸಿ2+50% ಸೂತ್ರದಿಂದ ಎಷ್ಟುದೂರದಲ್ಲಿದೆ ಎಂಬ ಒಂದು ಪಟ್ಟಿಯನ್ನೇ ಅದು ಕೊಟ್ಟಿದೆ. ಉದಾ: ಭತ್ತಕ್ಕೆ ಸಿ2 ವೆಚ್ಚ ಕ್ವಿಂಟಾಲ್‌ಗೆ 1911ರೂ. ಸ್ವಾಮಿನಾಥನ್ ಆಯೋಗದ ಸೂತ್ರದ ಪ್ರಕಾರ ಎಂಎಸ್‌ಪಿ ರೂ. 2866.50 ಆಗಬೇಕಿತ್ತು. ಆದರೆ ಸರಕಾರ ಪ್ರಕಟಿಸಿರುವುದು ರೂ. 2183. ಅಂದರೆ ಕ್ವಿಂಟಾಲ್‌ಗೆ ರೂ. 683.50 ನಷ್ಟ. ಸರಕಾರದ ಅಂದಾಜಿನ ಪ್ರಕಾರ ಭತ್ತದ ಉತ್ಪಾದಕತೆ ಹೆಕ್ಟೇರಿಗೆ 4 ಟನ್. ಇದರ ಪ್ರಕಾರ ಲೆಕ್ಕ ಹಾಕಿದರೆ ರೈತರಿಗೆ ಹೆಕ್ಟೇರಿಗೆ 27340ರೂ. ನಷ್ಟವಾಗುತ್ತದೆ.

ಇದಲ್ಲದೆ ಆಂಧ್ರಪ್ರದೇಶ, ಬಿಹಾರ, ಕರ್ನಾಟಕ, ಕೇರಳ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು, ತೆಲಂಗಾಣ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳು ಅಂದಾಜು ಪುಟ 10 ಕ್ಕೆ



ಕೊಡುಗೆಗಳು ಮತ್ತು ರಾಜಕಾರಣ..... ಪುಟ 8 ರಿಂದ

ಹೇಳುವವರು ಹೆದರಿಕೊಳ್ಳುವುದು! ಅವರ ಕೂಲಿ ಹೆಚ್ಚಳ ಮಾಡಿಕೊಳ್ಳುವ ಚೌಕಾಶಿತನಕ್ಕೆ ಇದು ನೆರವಾಗಲಿದೆ ಎಂಬುದಾಗಿದೆ. ಖಂಡಿತಾ ಈ ಬೆಳವಣಿಗೆ ಆಗಬೇಕಾದದ್ದೇ ಆಗಿದೆ.

ಈ ಬೆಳವಣಿಗೆ ಅವರ ನಡುವೆ ಸ್ವಾವಲಂಬಿತನ ಮತ್ತು ಸ್ವಾಭಿಮಾನ ಹೆಚ್ಚಲು ನೆರವಾಗಬಹುದಾಗಿದೆ.

ಕೊಡುಗೆ ನೀಡುವ ಬದಲು ಅವರ ಆದಾಯ ಹೆಚ್ಚಳಕ್ಕೆ ನೆರವಾಗಬಹುದಲ್ಲವೇ?

ಖಂಡಿತಾ ಸರಿ! ಇದನ್ನು ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಬಹುದಿತ್ತಲ್ಲವೇ? ಈಗಲೂ ಅದು ಒಕ್ಕೂಟ ಸರಕಾರ ನಡೆಸುತ್ತಿದೆ! ಅದೂ ಆ ಕೆಲಸವನ್ನು ಮಾಡ ಬಹುದು!?

ಜನತೆಯ ತಲಾ ಆದಾಯ ಹೆಚ್ಚಳವಾಗ ಬೇಕೆಂದರೆ, ಮಾಡ ಬೇಕಾದ ಕೆಲಸದ ಕುರಿತು ಈಗಾಗಲೇ ಎಡ ಮತ್ತು ಜಾತ್ಯತೀತ ಪ್ರಗತಿಪರ ಶಕ್ತಿಗಳು ಮತ್ತು ಸಿಪಿಐ(ಎಂ) ಪಕ್ಷವು ಒಕ್ಕೂಟ ಹಾಗೂ ರಾಜ್ಯ ಸರಕಾರಗಳ ಮುಂದೆ ಸ್ಪಷ್ಟ ಕಾರ್ಯಕ್ರಮವನ್ನು ಮಂಡಿಸಿವೆ.

ಗ್ರಾಮೀಣ ಪ್ರದೇಶದ ಬಡ ರೈತ ಹಾಗೂ ಗೇಣಿದಾರರಿಗೆ ತಲಾ ಐದು ಎಕರೆ ಜಮೀನು ಒದಗಿಸುವುದು ಮತ್ತು ಕೃಷಿಕೂಲಿಕಾರರಿಗೆ ತಲಾ ಎರಡು ನೂರು ದಿನಗಳ ಉದ್ಯೋಗ ಖಾತ್ರಿ ಕೆಲಸ ಒದಗಿಸಬೇಕು! ನಗರದ ಬಡವರಿಗೂ ಅದನ್ನು ವಿಸ್ತರಿಸಬೇಕು ಮತ್ತು ಕನಿಷ್ಟ ವೇತನವನ್ನು 650 ರೂ.ಗಳಿಗೆ ಹೆಚ್ಚಿಸಬೇಕು.

ರೈತಾಪಿ ಜನರ ಕೃಷಿ ಉತ್ಪನ್ನಗಳಿಗೆ ಅವುಗಳ ಉತ್ಪಾದನಾ ವೆಚ್ಚಕ್ಕೆ ಶೇಕಡಾ 50 ಲಾಭಾಂಶ ಸೇರಿಸಿ ನಿಗದಿಸುವ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಯಾಗಿ ದೊರೆಯುವಂತೆ ಕಾಯ್ದೆಯನ್ನು ಜಾರಿಗೊಳಿಸಬೇಕು ಮತ್ತು ಕೇರಳ ಸರಕಾರದ ಮಾದರಿಯಲ್ಲಿ ಋಣಮುಕ್ತ ಕಾಯ್ದೆಯನ್ನು ಜಾರಿಗೊಳಿಸಬೇಕು! ಕಾರ್ಮಿಕರ ಕನಿಷ್ಟ ವೇತನವನ್ನು ಮಾಸಿಕ 36,000 ರೂ. ಗಳಿಗೆ ಹೆಚ್ಚಿಸಬೇಕು. ಈ ಕಾರ್ಯಕ್ರಮಗಳ ಜಾರಿ ಖಂಡಿತಾ ಅವರ ಆದಾಯ ಹೆಚ್ಚಿಸಲು ಮತ್ತು ಆ ಮೂಲಕ ಕೊಂಡುಕೊಳ್ಳುವ ಶಕ್ತಿಯು ಮಾರುಕಟ್ಟೆ ವಿಸ್ತರಿಸಲು ನೆರವಾಗಲಿದೆ. ಅದು ಕೈಗಾರಿಕಾ ವಿಸ್ತರಣೆಗೆ ಮತ್ತು ಆ ಮೂಲಕ ವಿದ್ಯಾವಂತರ ನಿರುದ್ಯೋಗ ನಿವಾರಣೆಗೆ ನೆರವಾಗಲಿದೆ.

ಆದರೇ, ಇವುಗಳನ್ನು ಜಾರಿಗೆ ತರಲು ಆಳುವ ವರ್ಗಗಳಾದ ಭೂಮಾಲಕ ಬಂಡವಾಳದಾರರು ಹಾಗೂ ಕಾರ್ಪೊರೇಟ್ ಕಂಪನಿಗಳು ತಯಾರಿಲ್ಲ. ಇವು ಜಾರಿಯಾದರೇ ತಾವು ಮುಳುಗಿ ಹೋಗುತ್ತೇವೆಂಬ ಭಯ ಅವುಗಳಿಗಿದೆ. ಹೀಗಾಗಿ ಇವರನ್ನೇ ಬಹುತೇಕ ಪ್ರತಿನಿಧಿಸುವ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಈ ಕಾರ್ಯಕ್ರಮ ಜಾರಿಗೊಳಿಸಲು ತಯಾರಿಲ್ಲ.

ಅದೇ ರೀತಿ, ಕೇವಲ ರಾಜ್ಯ ಸರಕಾರ ಮಾತ್ರವೇ ಅವುಗಳ ಅಧಿಕಾರ ಮತ್ತು ಸಂಪನ್ಮೂಲಗಳ ಮಿತಿಯೊಳಗೆ ಜಾರಿಗೆ ತರಲು ಸಾಧ್ಯತೆಗಳು ಕಡಿಮೆ ಇವೆ. ಒಕ್ಕೂಟ ಹಾಗೂ ರಾಜ್ಯ ಸರಕಾರಗಳು ಒಟ್ಟಾಗಿ ನಿಲ್ಲಬೇಕಾಗುತ್ತದೆ.

ಹೀಗಾಗಿಯೇ ಅವುಗಳು ಜನ ಬೆಂಬಲ ಉಳಿಸಿಕೊಳ್ಳಲು ಹಲವು ಕಸರತ್ತುಗಳನ್ನು ಮಾಡುತ್ತವೆ! ಅದರಲ್ಲಿ ಬಿಜೆಪಿಯು ತನ್ನ ಮತದಾರರನ್ನು ಹೆಚ್ಚಿಸಿಕೊಳ್ಳಲು ಕೆಲವೊಮ್ಮೆ ಸಣ್ಣ ಪುಟ್ಟ ರಿಯಾಯಿತಿಗಳನ್ನು ನೀಡುತ್ತಾ ಹಿಂದುತ್ವವಾದಿ ಕೋಮುವಾದಿ ಚಟುವಟಿಕೆಗೆ ಹೆಚ್ಚಿನ ಆದ್ಯತೆ ನೀಡಿದರೇ! ದೇಶದಲ್ಲಿ ತನ್ನ ಈ ಹಿಂದಿನ ದುರಾಡಳಿತದಿಂದಾಗಿ ದುರ್ಬಲಗೊಂಡಿರುವ ಕಾಂಗ್ರೆಸ್ ಪಕ್ಷ ಇಂತಹ ಕೊಡುಗೆಗಳನ್ನು ಇದೀಗ ಪ್ರಕಟಿಸುತ್ತಾ ಜಾತಿ ರಾಜಕಾರಣಕ್ಕೆ ಕ್ರಮವಹಿಸುವ ಕೆಲಸದಲ್ಲಿ ತೊಡಗಿದೆ.

ಹೀಗಾಗಿ, ಕೊಡುಗೆಗಳನ್ನು ಕೊಡುವುದು ಬೇಡವೆಂದರೆ ಜನತೆಗೆ ಅದೂ ಇಲ್ಲ ಮತ್ತು ಇದೂ ಇಲ್ಲವೆಂದಾಗುತ್ತದೆ. ಬಡ ಜನತೆಗೆ ಹಾಗಾಗಲಿ ಎಂಬುದೇ ಆಳುವ ವರ್ಗಗಳ ಮತ್ತು ಅವರ ಬೆಂಬಲಿಗರ ರಾಜಕಾರಣವಾಗಿದೆ.

ಇದರೊಂದಿಗೆ, ಜನತೆಯ ನೈಜ ಸಮಸ್ಯೆ ಪರಿಹಾರ ಕಾಂಗ್ರೆಸ್ ಪಕ್ಷಕ್ಕೂ ಬೇಕಿಲ್ಲವೆಂಬುದನ್ನು ಗಮನಿಸಬೇಕು. ಪರಿಣಾಮವಾಗಿ, ಈ ಕೊಡುಗೆಗಳು ಕೇವಲ ಕಾಂಗ್ರೆಸ್ ಪಕ್ಷ ತನ್ನ ಅಧಿಕಾರಕ್ಕಾಗಿ ಮತದಾರರ ಬೆಂಬಲಗಳಿಸುವ ಉದ್ದೇಶದಿಂದ ಬಂದುದೆಂಬ ಅದರ ಮಿತಿಯನ್ನು ನಾವು ಅರಿಯಬೇಕಿದೆ. ಮತದಾರರು ನೈಜ ಪರಿಹಾರಕ್ಕಾಗಿ ಚಳುವಳಿಯನ್ನು ಮುನ್ನಡೆಸದೇ ಗತ್ಯಂತವಿಲ್ಲವೆಂಬುದನ್ನು ಇದು ತಿಳಿಸುತ್ತದೆ.

ಎಡ ಮತ್ತು ಪ್ರಜಾ ಸತ್ತಾತ್ಮಕ ರಾಜಕೀಯದ ಮೇಲಾಗುವ ಪರಿಣಾಮಗಳೇನು?

ಕಾಂಗ್ರೆಸ್ ಸರಕಾರ ಒಂದೆಡೆ ಈ ಬಡ ಮತದಾರರನ್ನು ಗಮನದಲ್ಲಿಟ್ಟುಕೊಂಡು ಕೊಡುಗೆಗಳನ್ನು ನೀಡಿದ್ದರೆ ಇನ್ನೊಂದೆಡೆ, ಅದು ಜಾಗತೀಕರಣದ ನೀತಿಗಳನ್ನು ಆಳುವ ವರ್ಗಗಳಾದ ಭೂ ಮಾಲಕ ಬಂಡವಾಳದಾರರು ಹಾಗೂ ಲೂಟಿಕೋರ ಕಾರ್ಪೊರೇಟ್ ಕಂಪನಿಗಳ ಪರ ಜಾರಿಗೆ ಕ್ರಮವಹಿಸುವುದನ್ನು ಹೀಗೆ ಅಲ್ಲದಿದ್ದರೂ ಮತ್ತೊಂದು ವಿಧದಲ್ಲಿ ಮುಂದುವರೆಸುವರೆಂಬುದು ಅನುಭವವಾಗಿದೆ. ಇಂತಹ ನೀತಿಗಳನ್ನು ಅದು ಜಾರಿಗೊಳಿಸುವಾಗ ಬಿಜೆಪಿ ಮತ್ತು ಮತಾಂಧ ಶಕ್ತಿಗಳು ರಾಜ್ಯದಲ್ಲಿನ ಸೌಹಾರ್ದತೆಯನ್ನು ಕದಡಿ ಜನತೆಯ ಗಮನವನ್ನು ಬೇರೆಡೆ ಸೆಳೆದು ಅವುಗಳ ಜಾರಿಗೆ ಕ್ರಮವಹಿಸುವ ಸಂಭವಗಳು ಇದ್ದೇ ಇವೆ.

ಹೀಗಾಗಿ, ಈ ಕೊಡುಗೆಗಳು ಬಡ ಮತದಾರರು, ಆಳುವ ವರ್ಗಗಳ ನಡುವೆ ಅವರು ನಡೆಸಿರುವ ಸಂಘರ್ಷಕ್ಕೆ ಸ್ವಲ್ಪವಾದರೂ ತುಪ್ಪ ಸುರಿದಿರುವುದನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಗಮನಿಸಬೇಕಾಗಿದೆ. ಇದು ಇನ್ನು ಮೇಲೆ ತೀವ್ರಗೊಳ್ಳುವುದು. ಸ್ವಲ್ಪವಾದರೂ ಮಹಿಳೆಯರ ಹಾಗೂ ದಲಿತರ ಕುಟುಂಬಗಳ ಸಬಲೀಕರಣಕ್ಕೆ ಕ್ರಮವಹಿಸಿರುವುದು, ಬಡವರು, ದಲಿತರು, ಮಹಿಳೆಯರು ಹಾಗೂ ಕಾರ್ಮಿಕರ ಮೇಲಿನ ದೌರ್ಜನ್ಯಗಳು ಹೆಚ್ಚಲು ಕಾರಣವಾಗುವ ಸಂಭವಗಳಿವೆ. ನಮ್ಮ ಗಮನವನ್ನು ಈ ದಿಶೆಯಲ್ಲಿ ಹೆಚ್ಚಿಸಬೇಕಾಗಿದೆ.

ಈ ಕೊಡುಗೆಗಳು, ಜನತೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಜೊತೆ ಈ ಮತದಾರರು ಸೇರದಂತೆ ತಾತ್ಕಾಲಿಕವಾಗಿ ತಡೆಯುವ ಸಂಭವಗಳು ಇವೆ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ. ಇವುಗಳಿಂದ ಕಾಂಗ್ರೆಸ್ ಮೇಲೆ ಒಲವು ಮತ್ತು ಅದರ ಪರಿಣಾಮವಾಗಿ ಅದರ ಹಿಡಿತವು ಜನರ ಮೇಲೆ ಹೆಚ್ಚಳವಾಗಬಹುದು. ಸ್ವಲ್ಪ ಮಟ್ಟಿಗೆ ಪ್ರತಿ ಕುಟುಂಬವು ಮಾಸಿಕವಾಗಿ ಆದಾಯಗಳಿಸುವುದರಿಂದ ಸಹಜವಾಗಿಯೇ ತಾತ್ಕಾಲಿಕವಾಗಿ ಚಳುವಳಿಯಿಂದ ಹಿಂದೆ ಸರಿಯುವ ಸಂಭವಗಳಿಗೆ ಹಲವು ಒತ್ತಡಗಳು ಉಂಟಾಗಲಿವೆ.

ಮತ್ತೊಂದು ಕಡೆ, ಈ ಕೊಡುಗೆಗಳು ಈ ಸರಕಾರದ ಮೇಲೆ ಮತ್ತಷ್ಟೂ ಒತ್ತಡ ಹೇರಿದರೆ, ತಮ್ಮ ಬೇಡಿಕೆಗಳನ್ನು ಚಳುವಳಿ ನಿರತರು ಪಡೆಯಲು ಅವಕಾಶಗಳಿವೆ ಎಂಬ ಆಶಾ ಭಾವನೆ ಹುಟ್ಟು ಹಾಕಿವೆ ಮತ್ತು ಅವು ಮುಂದೆ ಸಾಗಲು ಅನುವು ಮಾಡಿವೆ.

ಯುವನಿಧಿಯ ಲಾಭ ದೊರೆಯದ ಹಳೆಯ ನಿರುದ್ಯೋಗಿ ಯುವಕ ಯುವತಿಯರು ಚಳುವಳಿಯ ಮುನ್ನೆಲೆಗೆ ಬರಲು ಹೊಸ ಅವಕಾಶಗಳನ್ನು ತೆರೆದಿದೆ. ಈ ಹಿಂದೆಯೆ ಎಡ ಮತ್ತು ಪ್ರಜಾ ಸತ್ತಾತ್ಮಕ ಶಕ್ತಿಗಳು ನಿರುದ್ಯೋಗ ಭತ್ಯೆಯ ಪ್ರಶ್ನೆಯನ್ನು ಎತ್ತಿದ್ದವು! ಆದರೆ ಆ ಪ್ರಶ್ನೆಯನ್ನು ಸರಕಾರಗಳು ಗಮನಿಸದೇ ನಿರ್ಲಕ್ಷ್ಯ ಮಾಡುತ್ತಾ ಬಂದಿರುವುದರಿಂದ ನೇಪಥ್ಯಕ್ಕೆ ಸರಿದಿತ್ತು. ಈಗ ಅದು ಮುನ್ನೆಲೆಗೆ ಬರುವಂತೆ ಕ್ರಮವಹಿಸಬೇಕಾಗಿದೆ. ಆ ಮೂಲಕ ಪ್ರಜಾಸತ್ತಾತ್ಮಕ ಚಳುವಳಿ ವಿಸ್ತಾರಗೊಂಡು ಕೋಮುವಾದಿ, ಜಾತಿವಾದ ಹಾಗೂ ಭಾಷಾಂಧವಾದಂತಹ ವಿಭಜನಕಾರಿ ಶಕಿಗಳ ವಿರುದ್ದ ಬೆಳೆದು ಬರಲು ಅವಕಾಶಗಳನ್ನು ತೆರೆದಿದೆ.

ಉತ್ತರಪ್ರದೇಶದ ಡಬಲ್ ಇಂಜಿನ್ ಸರಕಾರದ ದಮನಚಕ್ರವನ್ನು ಎದುರಿಸಿ ನಿಂತಿರುವ ನೋಯ್ಡಾ ಪ್ರದೇಶದ ರೈತರ ದೀರ್ಘ ಹೋರಾಟ

ದೇಶ ರಾಜಧಾನಿ ಬಳಿ ಇರುವ ನೋಯ್ಡಾದಲ್ಲಿ ಒಂದೂವರೆ ತಿಂಗಳಿಂದ ಕಾನೂನುಬದ್ಧ ಪರಿಹಾರಗಳಿಗಾಗಿ ರೈತರು ಕಳೆದ ಒಂದೂವರೆ ತಿಂಗಳಿಂದ ನಡೆಸುತ್ತಿರುವ ಹೋರಾಟವನ್ನು ಬಗ್ಗುಬಡಿಯಲು ಯೋಗಿ–ಮೋದಿ ಡಬಲ್ ಇಂಜಿನ್ ಯುಪಿ ಸರ್ಕಾರ ಕ್ರೂರ ದಮನವನ್ನು ಹರಿಯ ಬಿಟ್ಟಿದೆ ಎಂದು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ರೈತರ ಅವಿರತ ಹೋರಾಟದಿಂದ ದಿಗ್ಭ್ರಮೆಗೊಂಡ ಗ್ರೇಟರ್ ನೋಯ್ಡಾ ಅಭಿವೃದ್ಧಿ ಪ್ರಾಧಿಕಾರವು ಯುಪಿ ಆಡಳಿತದೊಂದಿಗೆ ಕೈಜೋಡಿಸಿ ಅಖಿಲ ಭಾರತ ಕಿಸಾನ್ ಸಭಾದ ನಾಯಕ ರೂಪೇಶ್ ವರ್ಮಾ ಮತ್ತು 33 ರೈತರನ್ನು ಜೂನ್ 6 ರಂದು ತಡರಾತ್ರಿ ಬಂಧಿಸಿದೆ. ತಮ್ಮ ಮುಖಂಡರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತಿದ್ದ ರೈತರ ಮೇಲೆ ಪೊಲೀಸರು ಕ್ರೂರ ಲಾಠಿ ಚಾರ್ಜ್ ಮಾಡಿದ್ದಾರೆ. ಪೊಲೀಸರು ನೋಯ್ಡಾದಲ್ಲಿ ಸಾಮೂಹಿಕ ಸಂಘಟನೆಗಳ ಕಛೇರಿಗಳನ್ನು ಅಕ್ರಮವಾಗಿ ಮುಚ್ಚಿಸಿದ್ದಾರೆ ಮತ್ತು ಜಿಲ್ಲಾ ಸಿಐಟಿಯು ಅಧ್ಯಕ್ಷ ಗಂಗೇಶ್ವರ ದತ್ ಶರ್ಮಾ ಅವರ ಮೇಲೆ ನಿರ್ಬಂಧಗಳನ್ನು ಜಾರಿಗೊಳಿಸಿದ್ದಾರೆ.

ಇಂತಹ ಯಾವುದೇ ಹೇಡಿತನದ ಕ್ರಮಗಳು ನೋಯ್ಡಾ ರೈತರ ಹೋರಾಟವನ್ನು ಮುಂದುವರೆಸುವ ಸಂಕಲ್ಪವನ್ನು ದುರ್ಬಲಗೊಳಿಸುವುದಿಲ್ಲ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಪುನರುಚ್ಚರಿಸಿದೆ. ಸುತ್ತಲಿನ ಗ್ರಾಮಗಳ ಜಮೀನು ಕಳಕೊಂಡ ರೈತರಿಗೆ ನೋಯ್ಡ ಪ್ರಾಧಿಕಾರವು 2013ರ ಭೂಸ್ವಾಧೀನ ಕಾಯಿದೆಯಂತೆ ಪರಿಹಾರ, ಅಭಿವೃದ್ಧಿ ಪಡಿಸಿದ ಜಮೀನಿನಲ್ಲಿ ಶೇ.10 ರಷ್ಟು ನೀಡಬೇಕು, ಯುವಕರಿಗೆ ಉದ್ಯೋಗಾವಕಾಶದಂತಹ ಭರವಸೆಗಳನ್ನು ಪಾಲಿಸಬೇಕು. ಬಂಧಿತ ರೈತರನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಹೋರಾಟ ನಿರತ ರೈತರ ವಿರುದ್ಧ ಪೊಲೀಸರ ದೌರ್ಜನ್ಯದ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಯೋಗಿ ಆಡಳಿತ ಆದೇಶಿಸಬೇಕು ಎಂದು ಹೋರಾಟಗಾರರು ಆಗ್ರಹಿಸುತ್ತಿದ್ದಾರೆ.



ಬಿಜೆಪಿ ಸರಕಾರ ಎಂಎಸ್‌ಪಿಯಲ್ಲಿ ರೈತರಿಗೆ ಮೋಸ ಮಾಡುವುದನ್ನು ನಿಲ್ಲಿಸಬೇಕು........ ಪುಟ 9 ರಿಂದ

ಮಾಡಿದ ಭತ್ತ ಬೆಳೆಯುವ ವೆಚ್ಚ ಸಿಎಸಿಪಿ(ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ) ಲೆಕ್ಕ ಹಾಕಿದ ವೆಚ್ಚಕ್ಕಿಂತ ಹೆಚ್ಚಿದೆ. ಉದಾ: ಕೇರಳದಲ್ಲಿ ಭತ್ತಕ್ಕೆ ಅಂದಾಜುಮಾಡಿದ ವೆಚ್ಚ ಕ್ವಿಂಟಾಲಿಗೆ 2847ರೂ,. ಮತ್ತು ಸಿಎಸಿಪಿ ಅಂದಾಜು 2338ರೂ. ಮತ್ತು ಪಂಜಾಬಿನಲ್ಲಿ ಅದು ಅನುಕ್ರಮವಾಗಿ 2089 ಮತ್ತು 1462. ಈ ವ್ಯತ್ಯಾಸ ಇತರ ಬೆಳೆಗಳ ವಿಷಯದಲ್ಲೂ ಕಂಡಿದೆ. ಉದಾ: ತೊಗರಿಗೆ ಕರ್ನಾಟಕದ ಅಂದಾಜು 9588ರೂ. ಆಗಿದ್ದರೆ ಸಿಎಸಿಪಿ ಅಂದಾಜು ಕ್ವಿಂಟಾಲಿಗೆ 5744ರೂ. ಮಾತ್ರ. ಅಂದರೆ ಪ್ರತಿ ಕ್ವಿಂಟಾಲಿನಲ್ಲಿ 3844ರೂ. ಕಡಿಮೆ.

ರೈತರಿಗೆ ಈಗ ಪ್ರಕಟಿಸಿರುವ ಎಂಎಸ್‌ಪಿ ಯಲ್ಲಿ ಸ್ವಾಮಿನಾಥನ್ ಆಯೋಗದ ಶಿಫಾರಸಿನ ಪ್ರಕಾರ ಆಗಿರುವ 'ನಷ್ಟ' ಎಂಬುದನ್ನು ತಖ್ತೆಯಲ್ಲಿ ನೋಡಬಹುದು.

ಎಲ್ಲ ಬೆಳೆಗಳ ಉತ್ಪಾದನಾ ವೆಚ್ಚದ ಸಿಎಸಿಪಿ ಅಂದಾಜು ರಾಜ್ಯಗಳ ಅಂದಾಜಿಗಿಂತ ಕಡಿಮೆ ಇರುವುದು, ಒಟ್ಟಾರೆಯಾಗಿ ವಾಸ್ತವಿಕ ವೆಚ್ಚಕ್ಕಿಂತ ಬಹಳ ಕಡಿಮೆ ಇರುವುದು ರೈತರಿಗೆ ಮೊದಲ ಮೋಸ. ಮತ್ತು ಕನಿಷ್ಟ ಬೆಂಬಲ ಬೆಲೆ ನಿಗದಿ ಮಾಡುವಾಗ ರಾಷ್ಟ್ರೀಯ ಸರಾಸರಿಯನ್ನು ಲೆಕ್ಕ ಹಾಕುವಾಗ ಆಗುವ ಮತ್ತಷ್ಟು ಕಡಿತ ಎರಡನೇ ಮೋಸ. ಎಂಎಸ್‌ಪಿಗೆ ಸಿ2 ವೆಚ್ಚಗಳನ್ನು ತಗೊಳ್ಳದೆ ಅದಕ್ಕಿಂತ ಕಡಿಮೆ ಇರುವ ಎ2+ಎಫ್‌ಎಲ್ ವೆಚ್ಚಗಳನ್ನು ಪರಿಗಣಿಸಲಾಗುತ್ತದೆ. ಹೀಗೆ ನಿಗದಿ ಮಾಡುವ ಕನಿಷ್ಟ ಬೆಂಬಲ ಬೆಲೆ ಕೂಡ ಕಾಗದದ ಮೇಲೆಯೇ ಇರುತ್ತದೆ. ಏಕೆಂದರೆ ಹೆಚ್ಚಿನ ಬೆಳೆಗಳಿಗೆ ಖಚಿತ ಖರೀದಿ ವ್ಯವಸ್ಥೆ ಇಲ್ಲ. ಇದು ರೈತರಿಗಾಗುವ ಮೂರನೇ ಮೋಸ. ಇದಲ್ಲದೆ, ರಾಜ್ಯಗಳು ತಮ್ಮಲ್ಲಿ ಅಂದಾಜು ವೆಚ್ಚಗಳು ಹೆಚ್ಚಿದ್ದರೂ ಉತ್ಪಾದನಾ ಬೋನಸುಗಳನ್ನು ಅಥವ ಉತ್ತೇಜನೆಗಳನ್ನು ಕೊಡುವುದನ್ನು ಸಿಎಸಿಪಿ ಮತ್ತು ಬಿಜೆಪಿ ಸರಕಾರ ಇಷ್ಟಪಡುವುದಿಲ್ಲ. ಉದಾ: ಕೇರಳ ಸರಕಾರ ಭತ್ತಕ್ಕೆ ಕ್ವಿಂಟಾಲಿಗೆ 780ರೂ. ಹೆಚ್ಚುವರಿ ಬೆಲೆ ಕೊಡುತ್ತದೆ.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಪರಿಷ್ಕರಿಸಬೇಕು, ಅವನ್ನು ಸಿ2+50% ಸೂತ್ರದ ಪ್ರಕಾರ ಹೆಚ್ಚಿಸಬೇಕು ಮತ್ತು ಖಚಿತ ಖರೀದಿಯ ಭರವಸೆ ಕೊಡಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ್ರಹಿಸಿದೆ. ಕಲಮು 370ನ್ನು ರದ್ದು ಮಾಡಿದ ನಂತರ ಸಿಎಸ್ ದತ್ತಾಂಶಗಳ ಸಂಗ್ರಹದಲ್ಲಿ ಜಮ್ಮು –ಕಾಶ್ಮೀರವನ್ನು ಪರಿಗಣನೆಗೆ ತಗೊಳ್ಳುತ್ತಿಲ್ಲ. ಸರಕಾರ ಅದನ್ನು ಗಣನೆಗೆ ತಗೊಳ್ಳಬೇಕು, ಅಲ್ಲಿಯ ರೈತರಿಂದಲೂ ಕೃಷಿ ಉತ್ಪನ್ನಗಳನ್ನು ಖರೀದಿಸಬೇಕು ಎಂದೂ ಎಐಕೆಎಸ್ ಆಗ್ರಹಿಸಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ರೈತರಿಗೆ ಬಗೆಯುತ್ತಿರುವ ಈ ವಿಶ್ವಾಸಘಾತದ ವಿರುದ್ಧ ಪ್ರತಿಭಟಿಸಲು ಎದ್ದು ನಿಲ್ಲಬೇಕು, ಮತ್ತು ಈ ಸರಕಾರದ ವಂಚಕ ದಾವೆಗಳನ್ನು ಬಯಲಿಗೆಳೆಯಬೇಕು ಎಂದು ಎಲ್ಲ ರೈತರಿಗೆ ಎಐಕೆಎಸ್ ಕರೆ ನೀಡಿದೆ.

ಬೆಳೆ	ಸಿ2	ಸಿ2+50%	ಎಂಎಸ್‌ಪಿ	ನಷ್ಟ/ಕ್ವಿಂಟಲ್
ಭತ್ತ	1911	2866.50	2183	683.50
ಜೋಳ	2833	4249.50	3180	1069.50
ಸಜ್ಜೆ	1811	2716.50	2500	216.50
ಮುಸುಕಿನಜೋಳ	1797	2695.50	2090	605.50
ರಾಗಿ	3328	4992	3846	1146
ತೊಗರಿ	5993	8989.50	7000	1989.50
ಹೆಸರು	7218	10827	8558	2269
ಉದ್ದು	6239	9358.50	6950	2408.50
ನೆಲಗಡಲೆ	5350	8025	6377	1648
ಸೋಯಾಬೀನ್	4019	6028.50	4600	1428.50
ಸೂರ್ಯಕಾಂತಿ	5960	8940	6760	2180
ಸಾಸಿವೆ	7864	11,796	8635	3161
ಹುಚ್ಚೆಳ್ಳು	6793	10189.50	7734	2455.50
ಹತ್ತಿ	5786	8679	6620	2059

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಮೇ 30 ಕ್ಕೆ 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ನಿಜವಾಗಿಯೂ ಸಾಧನೆಗಳೇ? ಅವುಗಳು ಜನಪರವಾಗಿವೆಯೇ? ರಾಷ್ಟ್ರದ ಹಿತ ರಕ್ಷಿಸುವಂಥವೇ? ಸರ್ಕಾರದ ಈ ಎಲ್ಲಾ ಯೋಜನೆಗಳ ನಿಜವಾದ ಉದ್ದೇಶಗಳೇನು? ನವ ಉದಾರೀಕರಣ ನೀತಿಗಳ ಜಾರಿಗೆ ಈ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆಯೇ? ಭಾರತದ ಪ್ರತಿಯೊಂದು ವಲಯಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಒಪ್ಪಿಸಲು ಏನೆಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗಿದೆ. ವಿದೇಶಿ ನೇರ ಬಂಡವಾಳ ಹೂಡಿಕೆ (FDI)ಗೆ ಮುಕ್ತ ಅವಕಾಶದ ಕಾರಣದಿಂದ ದೇಶದ ಹಲವು ವಲಯಗಳ ಮೇಲೆ ವಿದೇಶಿ ಹಣಕಾಸು ಸಂಸ್ಥೆಗಳು ಹೇಗೆಲ್ಲಾ ಹಿಡಿತ ಸಾಧಿಸಿವೆ. ಖಾಸಗೀಕರಣ ನೀತಿಗೆ ಅನುಗುಣವಾಗಿ ರೂಪಿಸಲಾಗಿರುವ ಯೋಜನೆಗಳನ್ನು 'ಜನಪರ ಯೋಜನೆಗಳು' ಎಂದು ಹೇಗೆಲ್ಲಾ ನಂಬಿಸತೊಡಗಿದ್ದಾರೆ. ಈ ಕುರಿತು, ಬಿಜೆಪಿ ಹೇಳುತ್ತಿರುವ ಒಂದೊಂದೇ 'ಸಾಧನೆಗಳ" ವಿಮರ್ಶಾತ್ಮಕ ಪುಟ್ಟ ಲೇಖನಗಳ ಸರಣಿಯ 2ನೆಯ ಲೇಖನ. ಮುಂದಿನ ವರ್ಷ ಲೋಕಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಲೇಖನಗಳು ಓದುಗರಿಗೆ ಒಂದಷ್ಟು ಮಾಹಿತಿ ನೀಡಬಹುದು ಎಂಬುದು 'ಜನಶಕ್ತಿ'ಯ ಆಶಯ.

ಮೋದಿ ಆಡಳಿತದ 9 ವರ್ಷಗಳ ಸಾಧನೆಗಳೇನು?

13 ಲಕ್ಷ ಕೋಟಿ ರೈಟ್ ಆಫ್–20 ಲಕ್ಷ ಕೋಟಿ ಎನ್.ಪಿ.ಎ.

ಸಿ.ಸಿದ್ದಯ್ಯ


Business Standard
Saturday, June 10, 2023 | 06:01 PM IST EN | Hindi
Home E-Paper Market Opinion Politics Elections Industry Multimedia More
Banks write off NPAs as part of their regular exercise to clean up their balance sheet, avail tax benefit and optimise capital, it added
Press Trust of India | New Delhi
Illustration: Binay Sinha

ಮೋದಿ ಸರ್ಕಾರದ 9 ವರ್ಷಗಳ ಸಾಧನೆಗಳಲ್ಲಿ ಬ್ಯಾಂಕುಗಳಲ್ಲಿ ಸಾರ್ವಜನಿಕರ ಸಂಪತ್ತನ್ನು ಲೂಟಿ ಮಾಡಲು ದೊಡ್ಡ ಉದ್ಯಮಿಗಳಿಗೆ ಮುಕ್ತ ಅವಕಾಶ ಕೊಟ್ಟಿರುವುದೂ ಒಂದು ಸಾಧನೆ. ಆದರೆ, ಅವರ ಸಾಧನೆಗಳ ಪ್ರಚಾರದ ಪಟ್ಟಿಯಲ್ಲಿ ಈ ಅಂಶ ಸೇರಿಸಿಲ್ಲ. 2014–15 ರಿಂದ 2021–22ರ 8 ವರ್ಷಗಳ ಅವಧಿಯಲ್ಲಿ 12,49,698 ಕೋಟಿ ರೂಗಳ ಸಾಲ ರೈಟ್ ಆಫ್ (write off) ಮಾಡಲಾಗಿತ್ತು. 2022–23ರ ಆರ್ಥಿಕ ವರ್ಷದ ಮೊದಲ 9 ತಿಂಗಳ ಅವಧಿಯಲ್ಲಿ 91,000 ಕೋಟಿ ಸಾಲ ರೈಟ್ ಆಫ್ ಮಾಡಲಾಗಿದೆ ಎಂದು ರಾಜ್ಯಸಭೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದ್ದಾರೆ. ಇದೂ ಸೇರಿದಂತೆ ಕೇಂದ್ರದಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ 9 ವರ್ಷಗಳಲ್ಲಿ ಒಟ್ಟು 13,40,698 ಕೋಟಿ ಸಾಲ ರೈಟ್ ಆಫ್ ಮಾಡಲಾಗಿದೆ. ಈ ಮೊತ್ತ ಅಂದಾಜು 110.79 ಲಕ್ಷ ಕೋಟಿ ಮೊತ್ತದ ಬ್ಯಾಂಕ್ ಮುಂಗಡದ (non-food bank advances) ಶೇಕಡಾ 10.54ರಷ್ಟಿದೆ.

2018ರ ಮಾರ್ಚ್ ವೇಳೆ ಅತೀ ಹೆಚ್ಚು ವಸೂಲಾಗದ ಸಾಲದ ಪ್ರಮಾಣ (NPA) 10.36 ಲಕ್ಷ ಕೋಟಿ ಇತ್ತು. ಲೋಕಸಭೆಯಲ್ಲಿ ಸರ್ಕಾರ ನೀಡಿದ ಮಾಹಿತಿಯಂತೆ 2021ರ ಮಾರ್ಚ್ ವೇಳೆಯಲ್ಲಿ ಎನ್.ಪಿ.ಎ. 8.35 ಲಕ್ಷ ಕೋಟಿಗೆ ಇಳಿಯಿತು. ಅಂದರೆ 2018 ಮತ್ತು 2021ರ ಮೂರು ವರ್ಷಗಳ ಅವಧಿಯಲ್ಲಿ 2 ಲಕ್ಷ ಕೋಟಿ ಎನ್.ಪಿ.ಎ. ಕಡಿಮೆಯಾಯಿತು. ಆದರೆ, ಈ ಅವಧಿಯಲ್ಲಿ ರೈಟ್ ಆಫ್ ಮಾಡಿದ ಸಾಲದ ಮೊತ್ತ 6,59,639 ಕೋಟಿಯಾಗಿದೆ!. ಅಂದರೆ ಈ ಮೂರು ವರ್ಷಗಳಲ್ಲಿ 4,59,639 ಕೋಟಿ ಸಾಲ ಹೊಸದಾಗಿ ಎನ್.ಪಿ.ಎ. ಲೆಕ್ಕಕ್ಕೆ ಸೇರಿಸಲಾಗಿದೆ. ಇದುವರೆಗೆ ರೈಟ್ ಆಫ್ ಮತ್ತು ಸಾಲ ಮನ್ನಾ ಮಾಡಿರುವುದೂ ಸೇರಿದಂತೆ ಒಟ್ಟಾರೆಯಾಗಿ ಎನ್.ಪಿ.ಎ. 20 ಲಕ್ಷ ಕೋಟಿ ದಾಟಿದೆ. ಅನಧಿಕೃತ ವರದಿಗಳ ಪ್ರಕಾರ ಈ ಮೊತ್ತ ಇನ್ನೂ ಹೆಚ್ಚು.ಇಷ್ಟು ದೊಡ್ಡ ಮೊತ್ತದ ಸಾರ್ವಜನಿಕರ ಹಣವನ್ನು ದೊಡ್ಡ ಉದ್ಯಮಿಗಳು ದೋಚಿದ್ದಾರೆ.

ಸುಸ್ತಿದಾರ ಕಂಪನಿಗಳ ಮಾಹಿತಿ ನೀಡಲು ನಕಾರ

ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಕಳೆದ ಐದು ವರ್ಷಗಳಲ್ಲಿ ರೈಟ್ ಆಫ್ ಮಾಡಿದ ರೂ.500 ಕೋಟಿಗಿಂತ ಹೆಚ್ಚು ವಂಚನೆ ಮಾಡಿರುವ ಸುಸ್ತಿದಾರ ಕಂಪನಿಗಳ ಪಟ್ಟಿ ಕೊಡುವಂತೆ ಪೆಬ್ರವರಿ 15, 2016 ರಂದು ಸುಪ್ರೀಕೋರ್ಟ್ ಆರ್‌ಬಿಐಗೆ ಸೂಚಿಸಿತ್ತು. ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ಮೇಲೆ (Center for public interest litigation) ನ್ಯಾಯಾಲಯದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ ಮಂಡಿಸಿದ ವಕೀಲರಾದ ಪ್ರಶಾಂತ್ ಭೂಷಣ್ ಅವರು 2015ರಲ್ಲಿ 40,000 ಕೋಟಿ ಸಾಲ ರೈಟ್ ಆಫ್ ಮಾಡಲಾಗಿದೆ ಆರೋಪಿಸಿದ್ದರು.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ಆರ್. ಭಾನುಮತಿ ಅವರನ್ನೊಳಗೊಂಡ ನ್ಯಾಯಪೀಠ, 'ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಸರಿಯಾದ ಮಾರ್ಗಸೂಚಿಗಳಿಲ್ಲದೆ ಹೇಗೆ ದೊಡ್ಡ ಪ್ರಮಾಣದ ಸಾಲಗಳನ್ನು ನೀಡುತ್ತಿವೆ ಮತ್ತು ಅವುಗಳನ್ನು ವಸೂಲಿ ಮಾಡಲು ಸಾಕಷ್ಟು ಕಾರ್ಯವಿಧಾನವಿದೆಯೇ' ಎಂದು ತಿಳಿಯಲು ಬಯಸಿತು. ಈ ಸಂಬಂಧ ನ್ಯಾಯಾಲಯಕ್ಕೆ 'ಉದ್ದೇಶ ಪೂರ್ವಕವಾಗಿ' ವಂಚನೆ ಮಾಡಿದ ಕಂಪನಿಗಳ ಹೆಸರುಗಳುಳ್ಳ ಪ್ರಮಾಣ ಪತ್ರವನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಆರು ವಾರಗಳ ಕಾಲಾವಕಾಶ ಕೊಟ್ಟಿತ್ತು.

ಜುಲೈ 17,2017ರಂದು ಮುಖ್ಯ ನ್ಯಾಯಾಧೀಶರಾಗಿದ್ದ ಜೆ.ಎಸ್. ಖೇಹರ್, ನ್ಯಾಯಾಧೀಶ ಡಿ.ವೈ. ಚಂದ್ರಚೂಡ್ ಅವರಿದ್ದ ಪೀಠದಲ್ಲಿ ನಡೆದ ವಿಚಾರಣೆ ಸಂದರ್ಭದಲ್ಲಿ ಜುಲೈ 24ರ ಒಳಗೆ ಡಿಫಾಲ್ಟರ್ ಕಂಪನಿಗಳ ಪಟ್ಟಿ ಕೊಡುವಂತೆ ಮತ್ತೆ ಒಂದು ವಾರದ ಗಡುವು ನೀಡಿತು. ಆ ಸಮಯದಲ್ಲಿ ಎನ್.ಪಿ.ಎ. ಪ್ರಮಾಣ ಎಂಟು ಲಕ್ಷ ಕೋಟಿ ದಾಟಿತ್ತು.

"ಸಾರ್ವಜನಿಕರು, ಠೇವಣಿದಾರರು, ದೇಶದ ಆರ್ಥಿಕತೆ ಮತ್ತು ಬ್ಯಾಂಕಿಂಗ್ ವಲಯದ ಹಿತಾಸಕ್ತಿಗಳನ್ನು ಎತ್ತಿಹಿಡಿಯಲು ಆರ್‌ಬಿಐ ಶಾಸನಬದ್ಧ ಕರ್ತವ್ಯವನ್ನು ಹೊಂದಿದೆ," ಎಂದು ಸುಸ್ತಿದಾರರ ಪಟ್ಟಿಯನ್ನು ಬಹಿರಂಗಪಡಿಸುವಂತೆ ಆರ್‌ಬಿಐಗೆ ನಿರ್ದೇಶಿಸುವಾಗ ಅಂದು ನ್ಯಾಯಾಲಯ ಹೇಳಿತ್ತು.

"ಆರ್.ಬಿ.ಐ. ಕಾಯ್ದೆಯ ನಿಬಂಧನೆಗಳನ್ನು ಅನುಸರಿಸಲು ಆರ್.ಬಿ.ಐ. ಕರ್ತವ್ಯ ಬದ್ಧವಾಗಿದೆ. ಉದ್ದೇಶ ಪೂರ್ವಕ ಸುಸ್ತಿದಾರ ಕಂಪನಿಗಳ ಹೆಸರುಗಳನ್ನು ಬಹಿರಂಗ ಪಡಿಸುವುದರಿಂದ ದೇಶದ ಆರ್ಥಿಕ ಹಿತಾಸಕ್ತಿಗಳಿಗೆ ಧಕ್ಕೆ ತರುತ್ತದೆ ಎಂಬ ಆರ್.ಬಿ.ಐ.ನ ಆಧಾರರಹಿತ ವಾದವು ಸಂಪೂರ್ಣವಾಗಿ ತಪ್ಪು ಕಲ್ಪನೆಯಾಗಿದೆ" ಎಂದು ನ್ಯಾಯಾಲಯ ಹೇಳಿತ್ತು. ಇಷ್ಟಾದರೂ ಆರ್.ಬಿ.ಐ. ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡಿದ ಉದ್ಯಮಿಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಕೊಡಲಿಲ್ಲ.

ರೈಟ್ ಆಫ್ ಮಾತ್ರ. ಸಾಲ ಮನ್ನಾ ಅಲ್ಲ!!

'ಇದು ರೈಟ್ ಆಫ್ ಮಾತ್ರ, ಸಾಲ ಮನ್ನಾ ಅಲ್ಲ. ವಸೂಲಾಗದ ಸಾಲದ ಲೆಕ್ಕದ ಪುಸ್ತಕದಲ್ಲಿ ಕೆಲವನ್ನು ಅಳಿಸಿ ಹಾಕಲಾಗುತ್ತದಷ್ಟೆ. ಇದನ್ನು ವಸೂಲಿ ಮಾಡುವ ಪ್ರಕ್ರಿಯೆ ಮುಂದುವರಿಯುತ್ತದೆ. ರೈಟ್ ಆಫ್ ಮಾಡಿದ ಮಾತ್ರಕ್ಕೆ ಅದು ಮನ್ನಾ ಎಂದು ಹೇಳುವುದು ಸರಿಯಲ್ಲ' ಎಂದು ಕೇಂದ್ರದ ಸಚಿವರು ಮತ್ತು ಬಿಜೆಪಿ ನಾಯಕರು ಮತ್ತು ಆರ್.ಬಿ.ಐ. ಅಧಿಕಾರಿಗಳು ವಾದಿಸುತ್ತಾರೆ. ಬ್ಯಾಂಕುಗಳಲ್ಲಿನ ಸಾರ್ವಜನಿಕರ ಸಂಪತ್ತನ್ನು ಉಳಿಸುವ ಪ್ರಾಮಾಣಿಕತೆ ಆರ್.ಬಿ.ಐ. ಮತ್ತು ಕೇಂದ್ರ ಸರ್ಕಾರಕ್ಕೆ ಇದ್ದರೆ 'ರೈಟ್ ಆಫ್' ಮಾಡುವುದೇಕೆ ಎಂಬ ಪ್ರಶ್ನೆ ಮೂಡುತ್ತದೆ.

ಇವೆಲ್ಲವೂ ಹಿಂದಿನ ಸರ್ಕಾರದ ಅವಧಿಯಲ್ಲೇ ಪಡೆದ ಸಾಲಗಳಾಗಿದ್ದವು. ಈಗ ಅವು ಎನ್.ಪಿ.ಎ. ಆಗಿ ಪರಿವರ್ತನೆಯಾಗುತ್ತಿವೆ. ಅದರಲ್ಲಿ ಮೋದಿ ಸರ್ಕಾರದ ತಪ್ಪೇನಿಲ್ಲ. ಮೋದಿ ಅಧಿಕಾರಕ್ಕೆ ಬಂದ ನಂತರ ಹಗರಣಗಳನ್ನು ಪತ್ತೆಮಾಡಿ ಬೆಳಕಿಗೆ ತರುತ್ತಿದ್ದಾರೆ ಎಂದು ಬಿಜೆಪಿ ಬೆಂಬಲಿಗರು ಮೋದಿಯವರನ್ನು ಬಣ್ಣಿಸತೊಡಗಿದ್ದಾರೆ. ರಿಷಿ ಅಗರ್ ವಾಲ್ ವಂಚನೆ ಪ್ರಕರಣದಲ್ಲಿಯೂ ಇದೇ ವಾದವನ್ನು ಮಂಡಿಸುತ್ತಾರೆ. ಆದರೆ, ಈ ಪ್ರಮಾಣದ ಸಾಲ ಪಡೆದು ಮರುಪಾವತಿ ಮಾಡದಿರುವ ವಂಚಕರಿಗೆ ಸಾಲ ಕೊಡುವುದನ್ನು ಸ್ಥಗಿತಗೊಳಿಸಿದ ಮತ್ತು ಅಂತಹ ಎಲ್ಲರಿಂದ ಸಾಲ ವಸೂಲಿಗೆ ಕೈಗೊಂಡ ಕ್ರಮಗಳ ಬಗ್ಗೆ ಇವರು ಏನನ್ನೂ ಹೇಳುವುದಿಲ್ಲ.



NPA ನಿರಂತರವಾಗಿ ಏರುತ್ತಲೇ ಇದೆ

2014 ರಲ್ಲಿ ಐದು ಲಕ್ಷ ಕೋಟಿ ಇದ್ದ ವಸೂಲಾಗದ ಸಾಲದ ಪ್ರಮಾಣ (NPA), ಕಳೆದ ಎಂಟು ವರ್ಷಗಳಲ್ಲಿ 13 ಲಕ್ಷ ಕೋಟಿ ಸಾಲವನ್ನು ರೈಟ್ ಆಫ್ ಮಾಡಿದ ನಂತರವೂ 9 ಲಕ್ಷ ಕೋಟಿ ಇದೆ. 'ಉದ್ಯಮಿಗಳ ಸಾಲ ಮನ್ನಾ ಮಾಡಿಲ್ಲ. ಎನ್.ಪಿ.ಎ. ಪುಸ್ತಕದಿಂದ ಸಾಲದ ಲೆಕ್ಕ ಅಳಿಸಿಹಾಕಲಾಗಿದೆ (ರೈಟ್ ಆಫ್) ಅಷ್ಟೆ. ಅದನ್ನು ಮತ್ತೊಂದು ಪುಸ್ತಕದಲ್ಲಿ ಬರೆಯಲಾಗುತ್ತದೆ' ಎಂದು ಹಣಕಾಸು ಸಚಿವ ಅರುಣ್ ಜೇಟ್ಲಿ ಅವರೂ ಒಮ್ಮೆ ಹೇಳಿದ್ದರು. ಯಾವುದೇ ರೂಪದಲ್ಲಿ ಮರೆಮಾಚಿದರೂ ಇದು ಸಾಲ ಮನ್ನಾ ಮಾಡಿದಂತೆಯೇ ಆಗುತ್ತದೆ. ಒಮ್ಮೆ ಯಾವುದಾದರೂ ಒಂದು ಬ್ಯಾಂಕಿನಲ್ಲಿ ಸಾಲ ಪಡೆದು ಮರುಪಾವತಿಸದೇ ಹೋದ ವ್ಯಕ್ತಿ ಅಥವಾ ಸಂಸ್ಥೆ ಸಾಲ ಪಡೆಯಲು ಅನರ್ಹ ಎಂದೇ ಅರ್ಥ. ಅಂತಹವರಿಗೆ ಯಾವುದೇ ಬ್ಯಾಂಕಿನಲ್ಲಿ ಸಾಲ ಕೊಡುವಂತಿಲ್ಲ. ಆದರೂ, ಅಂತಹ ಸುಸ್ತಿದಾರ ಉದ್ಯಮಿಗಳಿಗೆ ಬ್ಯಾಂಕುಗಳು ಮತ್ತೆ ಮತ್ತೆ ಸಾಲ ಕೊಡುತ್ತಲೇ ಬಂದಿವೆ. ಮತ್ತೆ ಆ ಸಾಲವನ್ನು ಎನ್.ಪಿ.ಎ. (ವಸೂಲಾಗದ ಸಾಲದ ಪ್ರಮಾಣ) ಲೆಕ್ಕಕ್ಕೆ ಸೇರಿಸುತ್ತಾರೆ. ನಂತರ ಅದನ್ನು ರೈಟ್ ಆಫ್ ಮಾಡುವ ಮೂಲಕ ಸಾಲದ ಖಾತೆಯನ್ನೇ ರದ್ದುಪಡಿಸುತ್ತಾರೆ. ನಂತರ ಆ ವಸೂಲಾಗದ ಸಾಲವನ್ನು 'ವಸೂಲಾತಿ ಬಾಕಿ ಇರುವ ಮುಂಗಡ' (AUCA) ಖಾತೆಗೆ ಬದಲಾಯಿಸುತ್ತಾರೆ. ಈ ಎಲ್ಲಾ ಕ್ರಿಯೆಗಳಲ್ಲಿ ಎನ್.ಪಿ.ಎ. ಮೊತ್ತ ಕಡಿಮೆ ತೋರಿಸುವ ಉದ್ದೇಶ ಇದೆ. ಅಂದರೆ ವಸೂಲಾಗದ ಸಾಲದ ಮೊತ್ತವನ್ನು ಮರೆಮಾಚಲಾಗುತ್ತದೆ. ಸಾಲ ಪಡೆದ ಉದ್ಯಮಿಯೊಬ್ಬ ಯಾವ ಉದ್ಯಮದ ಹೆಸರಿನಲ್ಲಿ ಸಾಲ ಪಡೆದಿರುತ್ತಾನೋ, ಆ ಉದ್ಯಮ ನಷ್ಟಕ್ಕೊಳ್ಳಪಟ್ಟರೆ, (ಹಲವು ಬಾರಿ ಉದ್ದೇಶ ಪೂರ್ವಕವಾಗಿ ಸಾಲ ಪಡೆದ ಉದ್ಯಮ ನಷ್ಟಕ್ಕೆ ಒಳಗಾಗಿದೆ ಎಂಬಂತೆ ತೋರಿಸುತ್ತಾರೆ. ಬ್ಯಾಂಕ್ ಸಾಲ ಪಡೆಯಲೆಂದೇ ಸೃಷ್ಟಿಯಾದ ದಾಖಲೆಗಳಲ್ಲಿ ಮಾತ್ರ ಇರುವ ನಕಲಿ ಉದ್ಯಮಗಳೂ ಇವೆ. ಈ ವ್ಯವಹಾರಗಳಲ್ಲಿ ಭ್ರಷ್ಟ ರಾಜಕಾರಣಿಗಳು ಮತ್ತು ಹಿರಿಯ ಬ್ಯಾಂಕ್ ಅಧಿಕಾರಿಗಳು ಶಾಮೀಲಾಗಿರುತ್ತಾರೆ). ಸಾಲ ಪಡೆದವರ ಇನ್ನಿತರ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಅಧಿಕಾರ ಬ್ಯಾಂಕುಗಳಿಗೆ ಇದೆ. ಆದರೆ, ಬ್ಯಾಂಕುಗಳು ಅಂತಹ ಕಠಿಣ ನಿರ್ಧಾರ ಕೈಗೊಳ್ಳುವುದಿಲ್ಲ. ಇದಕ್ಕೆ ಕಾರಣ, ಸರ್ಕಾರ ಅಂತಹ ಸುಸ್ತಿದಾರರ ಪರವಾಗಿರುತ್ತದೆ. ಬೆಳೆಸಾಲ ಪಡೆದ ರೈತನೊಬ್ಬ ಬೆಳೆನಷ್ಟವಾಗಿ ಸಾಲ ಮರುಪಾವತಿ ಮಾಡದಿದ್ದರೆ, ಆ ರೈತನ ಮನೆಯಲ್ಲಿನ ವಸ್ತುಗಳನ್ನು ಜಪ್ತಿಮಾಡುತ್ತಾರೆ. ಅಂತದೇ ಕ್ರಮ ದೊಡ್ಡ ಬಂಡವಾಳ ಹೊಂದಿರುವ ಸುಸ್ತಿದಾರರ ವಿರುದ್ಧ ಇಲ್ಲ.

ಕೇಂದ್ರ ಸರ್ಕಾರದಿಂದ 7 ವರ್ಷಗಳಲ್ಲಿ ಬ್ಯಾಂಕುಗಳಿಗೆ 3 ಲಕ್ಷ ಕೋಟಿ ನೆರವು

ಎನ್.ಪಿ.ಎ., ರೈಟ್ ಆಫ್, ಸಾಲ ಮನ್ನಾ ಕಾರಣದಿಂದ ಬ್ಯಾಂಕುಗಳು ದಿವಾಳಿ ಆಗುವುದನ್ನು ತಡೆಯಲು 2020–21 ರವರೆಗಿನ 13 ವರ್ಷಗಳಲ್ಲಿ ಕೇಂದ್ರ ಸರ್ಕಾರ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ 4,05,000 ಕೋಟಿ ರೂಪಾಯಿಗಳನ್ನು ತುಂಬಿದೆ. ಮೋದಿ ಅಧಿಕಾರಕ್ಕೆ ಬಂದ ನಂತರದ ಏಳು ವರ್ಷಗಳಲ್ಲಿ ಪಿಎಸ್‌ಯು ಬ್ಯಾಂಕುಗಳಿಗೆ 3,42,990 ಕೋಟಿ ನೆರವು ನೀಡಲಾಗಿದೆ.

ಸಂಸತ್ತಿಗೆ 2019ರ ಜುಲೈ ತಿಂಗಳಲ್ಲಿ ಹಣಕಾಸು ರಾಜ್ಯ ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರು, ಸರ್ಕಾರಿ ಒಡೆತನದ ಬ್ಯಾಂಕ್‌ಗಳ ಪುಟ 14 ಕ್ಕೆ

ಅಸಲೀ ಹೊಣೆಗಾರರಿಗೆ 'ಕವಚ'ವಾಗಿ 'ರೈಲ್–ಟೂಲ್–ಕಿಟ್'

ಜೂನ್ 2ರ ಸಂಜೆ ಒಡಿಶಾದ ಬಾಲಸೋರ್ ಜಿಲ್ಲೆಯಲ್ಲಿ ನಡೆದ ಭೀಕರ ರೈಲು ಅಪಘಾತದ ಸುದ್ದಿ ದೇಶದಲ್ಲಿ ಆಘಾತ ಉಂಟುಮಾಡುತ್ತಿದ್ದಂತೆ ಕೇಂದ್ರದ ಆಳುವ ಪಕ್ಷದ ಸೋಷಿಯಲ್ ಮೀಡಿಯದ ಪ್ರತಿ–ಪ್ರಚಾರ ಸಕ್ರಿಯವಾಯಿತು. ಇದು 'ಆಪತ್ತನ್ನು ಅವಕಾಶವಾಗಿ ಪರಿರ್ತಿಸು'ವುದಕ್ಕೆ ಆಳುವ ಪಕ್ಷದ ಐಟಿ ಸೆಲ್ ಕಟ್ಟುತ್ತಿರುವ ಟೂಲ್‌ಕಿಟ್‌ಗಳ ತಂತ್ರದ ಭಾಗ ಎನ್ನುತ್ತಾರೆ 'ನ್ಯೂಸ್ ಕ್ಲಿಕ್' ಸುದ್ದಿ ಜಾಲತಾಣದ ಹಿರಿಯ ಪತ್ರಕರ್ತೆ ಭಾಷಾ ಸಿಂಗ್; ಅವರು ಈ ಹೊಸ ಟೂಲ್ ಕಿಟ್ಟನ್ನು 'ರೈಲ್–ಟೂಲ್–ಕಿಟ್' ಎಂದು ಕರೆದಿದ್ದಾರೆ.

275 ಜನ ಪ್ರಾಣ ಕಳಕೊಂಡು ಸಾವಿರಕ್ಕೂ ಹೆಚ್ಚು ಮಂದಿ ಸಾವು–ಬದುಕಿನ ಹೋರಾಟದಲ್ಲಿರುವಾಗ ಈ ಟೂಲ್‌ಕಿಟ್ ಕರೆ ಕೊಟ್ಟದ್ದು ರೈಲ್ವೆ ಮಂತ್ರಿಯ ಜತೆಗೆ ನಿಲ್ಲಿ ಎಂದು! ಬಿಜೆಪಿ/ಆರೆಸ್ಸೆಸ್‌ನ ಹಿರಿಯ ಮುಖಂಡ ರಾಂಮಾಧವ್ ಅವರ ಟ್ವೀಟ್ ಪ್ರಾಣ ಕಳಕೊಂಡವರು ಮತ್ತು ಗಾಯಗೊಂಡು ಸುಧಾರಿಸಿಕೊಳ್ಳುತ್ತಿರುವವರಿಗೆ ಒಳ್ಳೆಯದನ್ನು ಮಾಡು ಎಂದು 'ದೇವರನ್ನು ಪ್ರಾರ್ಥಿಸಿಕೊಳ್ಳುತ್ತ' ಕರೆ ಕೊಟ್ಟದ್ದು ರೈಲ್ವೆ ಮಂತ್ರಿ ಅಶ್ವಿನ್ ವೈಷ್ಣವ್ ನೆರವಿಗೆ ಧಾವಿಸಿ ಎಂದು! ಅವರು ದೇಶದ ಅತ್ಯುತ್ತಮ ರೈಲ್ವೆ ಮಂತ್ರಿ, ಆದ್ದರಿಂದ ಇದೀಗ ಅವರನ್ನು ಹತ್ತಾರು ಟೀಕೆ–ಟಿಪ್ಪಣಿಗಳಿಂದ ಕಾಡುವ ಸಮಯವಲ್ಲ, ಬದಲು ಅವರ ಮತ್ತು ಅವರ ಮಂತ್ರಾಲಯದ ಜತೆಗೆ ನಿಲ್ಲಬೇಕಾದ ಸಮಯ ಎಂದರು! ಇದನ್ನನುಸರಿಸಿ ರಿಪಬ್ಲಿಕ್ ಭಾರತ್, ಟೈಮ್ಸ್ ನೌ ನವಭಾರತ್ ಟೈಮ್ಸ್ ಮುಂತಾದ 'ಗೋದಿ ಮೀಡಿಯ'ದಲ್ಲಿ ರೈಲು ಮಂತ್ರಿಗಳ ಮತ್ತು ಪ್ರಧಾನ ಮಂತ್ರಿಗಳ 'ತಕ್ಷಣದ' ಕ್ರಮಗಳ ಜೈಕಾರ, ರೈಲ್ವೆ ಮಂತ್ರಿಗಳ ಐಐಟಿ ಎಂ.ಟೆಕ್ ಪದವಿ, ಅಮೆರಿಕಾದ ವಿಶ್ವವಿದ್ಯಾಲಯದಿಂದ ಮೇನೇಜ್‌ಮೆಂಟ್ ಪದವಿ ಇತ್ಯಾದಿ ಇತ್ಯಾದಿ 'ಸಾಧನೆ'ಗಳು ಮತ್ತು ಐಟಿ ಸೆಲ್‌ನ ಮುಖ್ಯಸ್ಥರನ್ನು ಅನುಸರಿಸಿ ಹಿಂದಿನ ಬಿಜೆಪಿಯೇತರ ರೈಲು ಮಂತ್ರಿಗಳ 'ಕೆಟ್ಟದಾಖಲೆ'ಗಳ ಪಟ್ಟಿಗಳ ಟ್ವೀಟ್‌ಗಳು, ರಿಟ್ವಿಟ್‌ಗಳು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಿಸಿದವು.



ಮಂತ್ರಿಗಳ ಟ್ವಿಟರ್‌ನಲ್ಲಿ ಅವರು ಅಪಘಾತ ನಡೆದ ಸ್ಥಳದಲ್ಲಿ ಹಗಲುರಾತ್ರಿಯೆನ್ನದೆ ಕಷ್ಟಪಡುತ್ತಿರುವುದನ್ನು ಪ್ರಸಾರ ಮಾಡಲಾಯಿತು, ಸ್ವಲ್ಪ ದೂರದಲ್ಲಿ ನೂರಾರು ಕಾರ್ಮಿಕರು, ರಕ್ಷಣಾ ಕಾರ್ಯಪಡೆಗಳ ಸಿಬ್ಬಂದಿ ಮತ್ತು ನಾಗರಿಕರು ತತ್ಪರತೆಯಿಂದ ನಡೆಸಿದ್ದ ರಕ್ಷಣಾ ಕಾರ್ಯಗಳ ಪ್ರಸಾರವಿಲ್ಲ, ಆ ಕಾರ್ಮಿಕರ ಪ್ರಯತ್ನದಿಂದ ಹಳಿಗಳು ಸಂಚಾರಕ್ಕೆ ಯೋಗ್ಯವಾದಾಗ ಹಸಿರು ಬಾವುಟ ತೋರಿಸಿದ ಮಂತ್ರಿಗಳು ವಂದೇ ಮಾತರಂ, ಭಾರತ್ ಮಾತಾಕೀ ಜೈ ಎಂದು ಘೋಷಣೆ ಕೊಡುವುದನ್ನು ಪ್ರಚಾರ ಮಾಡಲಾಯಿತು. ಪ್ರಧಾನ ಮಂತ್ರಿಗಳು ಭೇಟಿ ನೀಡಲು ಬಂದಾಗ ಅವರು ರ‍್ಯಾಲಿಯನ್ನುದ್ದೇಶಿಸಿ ಮಾತಾಡಲು ಬಂದಿದ್ದಾರೋ ಎಂಬಂತೆ 'ಮೋದಿ ಮೋದಿ' ಘೋಷಣೆಗಳ ವೀಡಿಯೋ. 'ಕೇರಿಂಗ್ ಪಿಎಂ' ಎಂಬ ಟ್ವೀಟ್‌ಗಳು, ರಿಟ್ವೀಟ್‌ಗಳ ಸರಣಿ!

ಇದಕ್ಕೆ ಸಮಾನಾಂತರವಾಗಿ, ನಗ್ನ ಕೋಮುವಾದಿ, ಜಾತಿವಾದಿ ಟ್ವೀಟ್‌ಗಳೂ, ವಾಟ್ಸ್–ಅಪ್ ಅಪಪ್ರಚಾರಗಳೂ ಈ 9 ವರ್ಷಗಳಲ್ಲಿ ಕುಪರಿಚಿತವಾಗಿರುವ ಕೇಸರೀ ಪಡೆಗಳ ಹ್ಯಾಂಡಲ್ ಗಳಿಂದ ನಡೆದವು.

ಅಪಘಾತ ನಡೆದ ಜಾಗದಲ್ಲಿರುವ ಒಂದು ಬಿಳಿ ಕಟ್ಟಡದತ್ತ ಗುರುತು ಮಾಡಿ, 'ಇಂದು ಶುಕ್ರವಾರ, ಹತ್ತಿರದಲ್ಲೇ ಒಂದು ಮಸೀದಿಯಿದೆ' ಎಂದು ಹೇಳಿ ಸೂಚ್ಯವಾಗಿ ಇದು ಮುಸ್ಲಿಮರ ಬುಡಮೇಲು ಕೃತ್ಯ ಎಂದು ಬಿಂಬಿಸುವ ಪ್ರಯತ್ನ ನಡೆಯಿತು. ಆದರೆ ಆ ಬಿಳಿ ಕಟ್ಟಡ ಇಸಾನ್ ಕೃಷ್ಣಮಂದಿರವೆಂದು ಆಲ್ಟ್ ನ್ಯೂಸ್ ಪತ್ತೆ ಮಾಡಿ ಹೇಳಿತು.

ನಂತರ ಅಲ್ಲಿಯ ಸ್ಟೇಷನ್ ಮಾಸ್ಟರ್ ಹೆಸರು ಶರೀಫ್, ಸಿಬಿಐ ತನಿಖೆಯ ಆದೇಶದ ನಂತರ ಪರಾರಿಯಾಗಿದ್ದಾರೆಂದು ಮತ್ತೊಂದು ಸುಳ್ಳುಸುದ್ದಿಯನ್ನು ಹರಿಯಬಿಡಲಾಯಿತು. 'ಈ ಕೋಮಿನದ್ದು ಇದೇ ಸಮಸ್ಯೆ' ಎಂಬ ಟಿಪ್ಪಣಿ ಬೇರೆ! ಸ್ಟೇಷನ್ ಮಾಸ್ಟರ್ ಹೆಸರು ಎಸ್ ಬಿ ಮೊಹಂತಿ, ಅವರು ರೈಲ್ವೆ ತನಿಖೆ ತಂಡದಲ್ಲಿ ಕೆಲಸ ಮಾಡಿದ್ದಾರೆ ಎಂದು ಕೂಡ ಆಲ್ಟ್ ನ್ಯೂಸ್ ಪತ್ತೆ ಮಾಡಿತು.

ಇದು ರೊಹಿಂಗ್ಯಾ ಮುಸ್ಲಿಮರು ಸಕ್ರಿಯರಾಗಿರುವ ಪ್ರದೇಶ ಎಂದು ಇನ್ನೊಂದು ಪ್ರಚಾರ ನಡೆಯಿತು. ಈ ಎಲ್ಲ ಕೋಮುವಾದಿ ಅಪಪ್ರಚಾರವನ್ನು ಎಷ್ಟು ವ್ಯಾಪಕವಾಗಿ ನಡೆಸಲಾಯಿತೆಂದರೆ ಒಡಿಶಾ ಪೋಲೀಸ್ ಕಾನೂನು ಕ್ರಮದ ಎಚ್ಚರಿಕೆ ಕೊಡಬೇಕಾಯಿತು.

ಇಷ್ಟೇ ಅಲ್ಲ, ಒಂದೆಡೆಯಲ್ಲಿ ಇದು ಮುಸ್ಲಿಮರ ಬುಡಮೇಲು ಕೃತ್ಯ ಎಂದು ಬಿಂಬಿಸಿದರೆ, ಇನ್ನೊಂದೆಡೆಯಲ್ಲಿ ರೈಲ್ವೆ ಸುರಕ್ಷಿತತೆಯ ಹುದ್ದೆಗಳಲ್ಲೂ ಮೀಸಲಾತಿ ಇರುವುದರಿಂದ ಅದರ ಮೂಲಕ ಆಯ್ಕೆಯಾದ ಅಯೋಗ್ಯರಿಂದಾಗಿ ಈ ಅಫಘಾತ ಸಂಭವಿಸುವಂತಾಗಿದೆ ಎಂಬ ಅಪಪ್ರಚಾರವೂ ನಡೆಯಿತು.

ಉತ್ತರ ಸಿಗಲೇ ಬೇಕಾಗಿರುವ ಪ್ರಶ್ನೆಗಳು


ಈ ಟೂಲ್ ಕಿಟ್‌ನ ಮುಖ್ಯ ಉದ್ದೇಶ ಈ ಭೀಕರ ಅಪಘಾತಕ್ಕೆ ದಾರಿ ಮಾಡಿಕೊಟ್ಟಿರುವ ನಿಜ ಕಾರಣಗಳ ಬಗ್ಗೆ ವಿಚಾರ–ವಿಮರ್ಶೆ ನಡೆಯದಿರಲಿ ಎಂಬುದು ಸ್ಪಷ್ಟ ಎನ್ನುತ್ತಾರೆ ಮಾಧ್ಯಮ ವಿಶ್ಲೇಷಕರು. ಅಂದರೆ ಈ ಭೀಕರ ಅಪಘಾತಕ್ಕೆ ರೈಲ್ವೆ ಮಂತ್ರಿಗಳನ್ನಾಗಲೀ, ಪ್ರಧಾನ ಮಂತ್ರಿಗಳನ್ನಾಗಲೀ ಹೊಣೆಗಾರರಾಗಿ ಮಾಡದಂತೆ ರಕ್ಷಿಸುವುದು!

'ವಂದೇ ಭಾರತ್' ಎಂಬ ಅತಿ ವೇಗದ ಲಕ್ಷುರಿ ರೈಲುಗಳು ಮಾತ್ರವಲ್ಲ, 'ಕವಚ'ಎಂಬ ಅಪಘಾತಗಳೇ ನಡೆಯದಂತೆ ಸಂಪೂರ್ಣ ರಕ್ಷಣೆ ಕೊಡುವ ವ್ಯವಸ್ಥೆಯ ಹರಿಕಾರರು ನಮ್ಮ ಪ್ರಧಾನಿಗಳು ಎಂದು ಈ ರೈಲ್ವೆ ಮಂತ್ರಿಗಳು ಹಲವು ಬಾರಿ ಹಾಡಿ ಹೊಗಳಿದ್ದರು. ಈ ಭೀಕರ ಅಪಘಾತದ ನಂತರ ಸಹಜವಾಗಿ ಏಳುವ ಪ್ರಶ್ನೆಗಳಲ್ಲಿ ಮೊದಲನೆಯದ್ದು, ಈ ಕವಚ ಇಲ್ಲಿ ಕೆಲಸ ಮಾಡಲಿಲ್ಲವೇ ಎಂಬುದು. ಈ ರೂಟಿನಲ್ಲಿ ಅದನ್ನು ಅಳವಡಿಸಿಲ್ಲ ಎಂದು ರೈಲ್ವೆ ಮಂತ್ರಿಗಳು ಹೇಳಬೇಕಾಗಿ ಬಂದಿತ್ತು. ಇಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ 97%ದಷ್ಟು ಇದನ್ನು ಇನ್ನು ಅಳವಡಿಸಬೇಕಷ್ಟೇ ಎಂಬುದೂ ಈ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ.

ಎರಡನೇ ಪ್ರಶ್ನೆ– ಆರು ತಿಂಗಳ ಹಿಂದೆ ಸಿಎಜಿ(ಮಹಾಲೆಕ್ಕಪರಿಶೋಧಕರ ಕಚೇರಿ) ರೈಲ್ವೆಯಲ್ಲಿ ಹಳಿತಪ್ಪಿದ್ದರಿಂದ ನಡೆದ ಅಪಘಾತಗಳನ್ನು ಕುರಿತಂತೆ ಸಲ್ಲಿಸಿದ ವರದಿಯಲ್ಲಿ ಹಲವಾರು ನ್ಯೂನತೆಗಳನ್ನು ಪಟ್ಟಿ ಮಾಡಿತ್ತು.

⇨ ಪುಟ 14 ನೋಡಿ

ಇದು ಅಮೃತ ಕಾಲ



ವ್ಯಂಗ್ಯಚಿತ್ರ: ಮಂಜುಲ್, ಟ್ವಿಟರ್

"ನಾವು ತಲೆಕಡಿಸಿಕೊಳ್ಳಬೇಕಾಗಿಲ್ಲ, ನಮ್ಮ 'ಕವಚ' ಚೆನ್ನಾಗಿ ಕೆಲಸ ಮಾಡುತ್ತಿದೆ"

ಸಿಬಿಐ ತನಿಖೆ ಮತ್ತೊಂದು 'ಕವಚ'?

ರೈಲ್ವೆಯ ತಕ್ಷಣದ ಆಂತರಿಕ ತನಿಖೆ ಆರಂಭವಾದ ಸ್ವಲ್ಪ ಸಮಯದಲ್ಲೇ ರೈಲ್ವೆ ಮಂತ್ರಿಗಳು ಅಪಘಾತದ ಮೂಲ ಪತ್ತೆಯಾಗಿದೆ, ತಪ್ಪಿತಸ್ಥರನ್ನು ಗುರುತಿಸಲಾಗುತ್ತಿದೆ ಎಂದು ಹೇಳಿಕೆ ನೀಡಿದರು. ನಂತರ ಭೇಟಿಗೆ ಬಂದ ಪ್ರಧಾನಿಗಳೂ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೊಳಪಡಿಸದೆ ಬಿಡುವುದಿಲ್ಲ ಎಂದರು.


ಈಗ ರೈಲ್ವೆ ಮಂಡಳಿ 'ಸಿಗ್ನಲ್ ವ್ಯವಸ್ಥೆಯಲ್ಲಿ ಹಸ್ತಕ್ಷೇಪ'ವಾದಂತೆ ಕಾಣುತ್ತದೆ, ಆದ್ದರಿಂದ ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಶಿಫಾರಸು ಮಾಡಿದೆ. ಇದು ಸರಕಾರದ ಒತ್ತಡದ ಪರಿಣಾಮ ಎಂಬುದು ರಾಜಕೀಯ ವೀಕ್ಷಕರ ಸಂದೇಹ. ಸಿಬಿಐ ಕ್ರಿಮಿನಲ್ ಕೃತ್ಯವನ್ನು ತನಿಖೆ ಮಾಡುವ ಸಂಸ್ಥೆ. ರೈಲ್ವೆಯ ಸಿಗ್ನಲಿಂಗ್ ವ್ಯವಸ್ಥೆಯಲ್ಲಿ ಯಾವ ರೀತಿ ಹಸ್ತಕ್ಷೇಪ ನಡೆದಿದೆ ಎಂಬುದರ ತನಿಖೆ ಅದರ ಪರಿಣತಿಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಈ ಕ್ಷೇತ್ರದ ಪರಿಣಿತರು ಹೇಳುತ್ತಾರೆ.

"ರೈಲ್ವೆ ಸುರಕ್ಷತಾ ನಿಯಂತ್ರಕರು ಅಪಘಾತದ ತಾಂತ್ರಿಕ ಆಯಾಮಗಳನ್ನು ಪರೀಕ್ಷಿಸುವ ಅವಕಾಶ ಪಡೆಯದೆ, ರೈಲ್ವೆ ಮಂಡಳಿ ಬುಡಮೇಲು ಕೃತ್ಯದ ಸಾಧ್ಯತೆಯನ್ನು ಸೂಚಿಸಿ ತರಾತುರಿಯಲ್ಲಿ ಸಿಬಿಐಗೆ ಒಪ್ಪಿಸಿರುವುದು ನನಗೆ ಆಶ್ಚರ್ಯ ಉಂಟುಮಾಡಿದೆ. ಇದು ರೈಲ್ವೆ ಇಲಾಖೆಯ ಮಟ್ಟದಲ್ಲಿನ ಆಡಳಿತ ವೈಫಲ್ಯದ ಪ್ರಶ್ನೆಯನ್ನು ಕುರಿತಂತೆ ಸಾರ್ವಜನಿಕರ ದಾರಿ ತಪ್ಪಿಸುವ ನಡೆಯಂತೆ ನನಗೆ ಕಾಣಿಸುತ್ತದೆ" ಎಂದು ಭಾರತ ಸರಕಾರದ ರೆವಿನ್ಯೂ ಕಾರ್ಯದರ್ಶಿಯ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇ.ಎ.ಎಸ್. ಶರ್ಮ ರೈಲ್ವೆ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಕಾನೂನಿನ ಪ್ರಕಾರ ಪ್ರತಿಯೊಂದು ರೈಲು ಅಪಘಾತವನ್ನು ರೈಲ್ವೆ ಸುರಕ್ಷಿತತೆಯ ಆಯುಕ್ತರು ತನಿಖೆ ನಡೆಸಬೇಕು. ಅದರಲ್ಲಿ ಕ್ರಿಮಿನಲ್ ನಡೆಯ ಸಂದೇಹ ಉಂಟಾದರೆ ಆಗ ಮಾತ್ರವೇ ಸಿಬಿಐ ತನಿಖೆಯ ಪ್ರಶ್ನೆ ಬರುತ್ತದೆ, ಆದರೆ ಇಲ್ಲಿ ಅಂತಹ ತನಿಖೆಯ ಮೊದಲೇ ಸಿಬಿಐಗೆ ಒಪ್ಪಿಸಿರುವುದು, ವಿಶೇಷವಾಗಿ ಈಗ ಸಿಬಿಐ ಈ ಸರಕಾರದ ಅಡಿಯಲ್ಲಿ 'ಪಂಜರದ ಗಿಳಿ'ಯಾಗಿದೆ ಎಂಬ ಟೀಕೆಯ ಹಿನ್ನೆಲೆಯಲ್ಲಿ ಬಲಿಪಶುಗಳನ್ನು ಹುಡುಕಿ ನಿಜವಾದ ಹೊಣೆಗಾರರನ್ನು ರಕ್ಷಿಸುವ ಹುನ್ನಾರವೇ ಎಂಬ ಗಂಭೀರ ಪ್ರಶ್ನೆಗೆ ಎಡೆ ಮಾಡಿಕೊಟ್ಟಿದೆ.

ಪ್ರಾಥಮಿಕ ತನಿಖೆ ನಡೆಸಿರುವ ಐವರು ರೈಲ್ವೆ ಅಧಿಕಾರಿಗಳಲ್ಲಿ ಒಬ್ಬರು ನಂತರ ಒಂದು ಭಿನ್ನಮತದ ಟಿಪ್ಪಣಿ ಸಲ್ಲಿಸಿರುವುದು ನಿಜವಾದ ಕಾರಣವನ್ನು ಮರೆಮಾಚುವ ಪ್ರಯತ್ನ ನಡೆಯುತ್ತಿದೆ ಎಂಬ ಸಂದೇಹವನ್ನು ಮತ್ತಷ್ಟು ಬಲಪಡಿಸಿದೆ ಎಂದು ಹೇಳಲಾಗುತ್ತಿದೆ.(ದಿ ವೈರ್, ಜೂನ್ 7).

ಈ ಭೀಕರ ಅಪಘಾತ ಎರಡು ದಿನಗಳ ಮೊದಲಷ್ಟೇ(ಮೇ 31ರಂದು), 'ದಿ ಹಿಂದು' ದೈನಿಕದಲ್ಲಿ ಪ್ರಕಟವಾದ ವರದಿ–ವಿಶ್ಲೇಷಣೆಯ ಪ್ರಕಾರ, ರೈಲುಜಾಲದಲ್ಲಿ ಹೆಚ್ಚುತ್ತಿರುವ ಅಪಘಾತಗಳಿಂದ ಕಳವಳಗೊಂಡಿರುವ ರೈಲ್ವೆ ಮಂಡಳಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು, ಹೆಚ್ಚುತ್ತಿರುವ ಲೋಕೋ ಪೈಲಟ್‌ಗಳ ಕೆಲಸದ ಅವಧಿಯನ್ನು ಕಡಿಮೆ ಮಾಡಬೇಕು ಎಂದು ಹೇಳಿತ್ತು. ಸಿಬಿಐ ತನಿಖೆ ಈ ವರದಿಯಲ್ಲಿ ಎತ್ತಲಾದ ಪ್ರಶ್ನೆಗಳನ್ನು ಬದಿಗೊತ್ತಲು ಒಂದು ನೆಪವಾಗಬಾರದು ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ. ಈ ಅಪಘಾತವೂ ಸೇರಿದಂತೆ ಪ್ರತಿಯೊಂದು ರೈಲು ಅಪಘಾತವನ್ನೂ ತಪ್ಪಿಸಲು ಸಾಧ್ಯವಿತ್ತು ಎಂದು ಅವರು ಹೇಳಿದ್ದಾರೆ.



ಕವಚ– ಕೃಪೆ: ಎಂಅಲಿ, ಆರೋ ಆನಂದ. ಕಾಂ, ಫೇಸ್ ಬುಕ್





'ಜಾಗತೀಕರಣ'ವು ಕಳಚಿ ಹೋಗುತ್ತಿದೆಯೇ?

ನಾವು ಇದುವರೆಗೆ ಕಂಡಿರುವ "ಜಾಗತೀಕರಣ"ವು ದೇಶ ದೇಶಗಳು ಪರಸ್ಪರ ಹೆಚ್ಚು ಅವಲಂಬಿತವಾಗುವ ಸ್ವಯಂಪ್ರೇರಣೆಯಿಂದ ಒಗ್ಗೂಡಿ ಪರಸ್ಪರರಿಗೆ ಪ್ರಯೋಜನವಾಗುವ ರೀತಿಯಲ್ಲಿ ಸ್ಥಾಪಿಸಿಕೊಂಡ ಒಂದು ಜಾಗತಿಕ ವಿದ್ಯಮಾನವನ್ನು ಎಂದೂ ಸೂಚಿಸಿರಲಿಲ್ಲ. ಈ "ಜಾಗತೀಕರಣ"ವು ಮೂಲಭೂತವಾಗಿ ಪ್ರಾಬಲ್ಯದ ಸಂಬಂಧಗಳನ್ನು ಸೂಚಿಸಿದೆ. ಈ ಪ್ರಾಬಲ್ಯದ ಬಳಸುವಿಕೆಯೇ ಸಾಮ್ರಾಜ್ಯಶಾಹಿಯ ಹೆಗ್ಗುರುತು. ಹೇಗೆ "ಆರ್ಥಿಕ ನಿರ್ಬಂಧಗಳು" ಸಾಮ್ರಾಜ್ಯಶಾಹಿಯ ನಿರ್ದಯತೆಯ ಲಕ್ಷಣವಾಗಿವೆಯೋ ಹಾಗೆಯೇ ಜಾಗತೀಕರಣವೂ ಸಹ ಜಾಗತೀಕರಣಗೊಂಡ ಬಂಡವಾಳದ ಪ್ರಾಬಲ್ಯಕ್ಕೆ ಅಗತ್ಯ. ಆದ್ದರಿಂದ 'ನಿರ್ಜಾಗತೀಕರಣ" ಎಂಬುದು ವಾಸ್ತವವಾಗಿ "ಜಾಗತೀಕರಣ"ದ ನಿರಾಕರಣೆಯಲ್ಲ, ಬದಲಿಗೆ ಅದಕ್ಕೆ ಪೂರಕವೇ. ಜಾಗತೀಕರಣಗೊಂಡ ಬಂಡವಾಳದ ಪ್ರಾಬಲ್ಯವನ್ನು ಎದುರಿಸುವ ವಾಸ್ತವಿಕ ಅಗತ್ಯ ಈಗಲೂ ಇದೆ. ಏಕೆಂದರೆ, ಜಾಗತೀಕರಣದ ಹಿಂದೆ ಪಾಶ್ಚಾತ್ಯ ಬಂಡವಾಳಶಾಹಿ ದೇಶಗಳ ವ್ಯೂಹವೇ ನಿಂತಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

"ಜಾಗತೀಕರಣ"ವು ಕಳಚಿಹೋಗುವ 'ನಿರ್ಜಾಗತೀಕರಣ' (de-globalisation) ಪ್ರಕ್ರಿಯೆ ಆರಂಭವಾಗಿದೆ ಎಂಬ ಅಭಿಪ್ರಾಯವನ್ನು ಅನೇಕ ಅರ್ಥಶಾಸ್ತ್ರಜ್ಞರು ಇತ್ತೀಚಿನ ದಿನಗಳಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಇನ್ನು ಕೆಲವರು ನೆನ್ನೆಮೊನ್ನೆಯವರೆಗೂ ಆಳ್ವಿಕೆ ನಡೆಸುತ್ತಿದ್ದ ನವ ಉದಾರವಾದದ ರೀತಿ-ನೀತಿಗಳು ಈಗ ಉಳಿದಿಲ್ಲ ಎಂದು ಹೇಳುತ್ತಿದ್ದಾರೆ. ಇದು ಸಹಜವೇ. ಏಕೆಂದರೆ, ಯಾವುದೂ ಒಂದೇ ರೂಪದಲ್ಲಿ ಶಾಶ್ವತವಾಗಿ ಉಳಿಯುವುದಿಲ್ಲ. ಗ್ರೀಕ್ ತತ್ವಜ್ಞಾನಿ ಹೆರಾಕ್ಲಿಟಸ್ ಹೇಳಿರುವಂತೆ "ನೀವು ಅದೇ ನದಿಯಲ್ಲಿ ಎರಡು ಬಾರಿ ಕಾಲಿಡುವುದು ಸಾಧ್ಯವಿಲ್ಲ". ಹಾಗಾಗಿ, ದಿನಗಳೆದಂತೆ ನವ ಉದಾರವಾದಿ ವ್ಯವಸ್ಥೆಯಲ್ಲಿಯೂ ಕೆಲವು ಬದಲಾವಣೆಗಳು ಅನಿವಾರ್ಯವಾಗುತ್ತವೆ. ಆದರೆ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ: ಸಮಕಾಲೀನ ಜಗತ್ತಿನ ಆರ್ಥಿಕ ವಾಸ್ತವತೆಗಳನ್ನು, ಅವುಗಳನ್ನು ಬದಲಾಯಿಸಲೆಂದು ಅರ್ಥಮಾಡಿಕೊಳ್ಳಲು ಬಳಸುವ ವಿಶ್ಲೇಷಣಾತ್ಮಕ ಚೌಕಟ್ಟು ತೀರಾ ಹಳೆಯದಾಗಿದೆಯೇ, ಅದರಿಂದಾಗಿ ಅದನ್ನು ಗಂಭೀರ ಪರಿಷ್ಕರಣೆಗೆ ಒಳಪಡಿಸುವ ಅಗತ್ಯವಿದೆಯೇ ಎಂಬುದು.

"ಜಾಗತೀಕರಣ" ಎಂದರೆ, ವಿಶ್ವದ ಬೇರೆ ಬೇರೆ ದೇಶಗಳು ಸ್ವಯಂಪ್ರೇರಣೆಯಿಂದ ಒಗ್ಗೂಡಿ ಪರಸ್ಪರರಿಗೆ ಪ್ರಯೋಜನವಾಗುವ ರೀತಿಯಲ್ಲಿ ಸ್ಥಾಪಿಸಿಕೊಂಡ ಒಂದು ಜಾಗತಿಕ ವ್ಯವಸ್ಥೆಯೆಂಬುದು ಎಂದೂ ಆಗಿರಲಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ವಿಶ್ವದ ಸುಮಾರು 50 ದೇಶಗಳು ಇಂದು ಬೇರೆ ಬೇರೆ ರೀತಿಯ "ನಿರ್ಬಂಧಗಳನ್ನು" ಎದುರಿಸುತ್ತಿವೆ. ಜನರ ಜೀವ ಉಳಿಸುವ ಔಷಧಿಗಳೂ ಸೇರಿದಂತೆ ಈ ದೇಶಗಳಿಗೆ ಬೇಕಾದ ಕೆಲವು ಅಗತ್ಯ ವಸ್ತುಗಳನ್ನು ಅವರು ಜಾಗತಿಕ ಮಾರುಕಟ್ಟೆಯಿಂದ ಪಡೆಯದಂತೆ ಅಡ್ಡಿಪಡಿಸಲಾಗಿದೆ. "ಜಾಗತೀಕರಣ"ವು ಅತ್ಯಂತ ಭರದಿಂದ ಸಾಗುತ್ತಿದೆ ಎಂದು ಸಾರ್ವತ್ರಿಕವಾಗಿ ಒಂದು ದಶಕದ ಹಿಂದೆ ಗುರುತಿಸಲ್ಪಡುತ್ತಿದ್ದ ದಿನಗಳಲ್ಲೂ ಸಹ, ಇಂತಹ ನಿರ್ಬಂಧಗಳಿಗೆ ಒಳಗಾದ ದೇಶಗಳ ಸಂಖ್ಯೆಯೇನೂ ತುಂಬಾ ಸಣ್ಣದಿರಲಿಲ್ಲ.

ಆದಕಾರಣ, "ಜಾಗತೀಕರಣ" ಎಂದರೆ ಅದು ಸಾಮಾನ್ಯವಾಗಿ ಕಲ್ಪಿಸಿಕೊಳ್ಳುವ ಅರ್ಥಕ್ಕಿಂತ ಭಿನ್ನವಾದ ಅರ್ಥವನ್ನು ಹೊಮ್ಮಿಸುತ್ತದೆ. ಎಲ್ಲಕ್ಕಿಂತ



ಮಿಗಿಲಾಗಿ, ಹಣಕಾಸು ಬಂಡವಾಳವನ್ನೂ ಒಳಗೊಂಡ ಬಂಡವಾಳದ ಚಲನೆಗೆ ಅನಿರ್ಬಂಧಿತ ಅವಕಾಶವನ್ನು ಒದಗಿಸಿಕೊಡುವ ಸಲುವಾಗಿ ದೇಶ ದೇಶಗಳ ಅರ್ಥವ್ಯವಸ್ಥೆಗಳನ್ನು ತೆರೆದಿಟ್ಟ ಸನ್ನಿವೇಶದಲ್ಲಿ ಅಸ್ತಿತ್ವಕ್ಕೆ ಬಂದ, ಬಂಡವಾಳವು ಜಾಗತೀಕರಣಗೊಂಡ,ಬಂಡವಾಳಶಾಹಿ ವ್ಯವಸ್ಥೆಯ ಒಂದು ಹಂತ ಎಂಬುದೇ ಜಾಗತೀಕರಣದ ನಿಜ ಅರ್ಥ. ಹೀಗೆ ಜಾಗತೀಕರಣಗೊಂಡ ಹಣಕಾಸು ಬಂಡವಾಳವು, ತನ್ನ ಅನುಮೋದನೆ ಇಲ್ಲದೆ, ರಾಷ್ಟ್ರ-ಪ್ರಭುತ್ವವು ಅರ್ಥವ್ಯವಸ್ಥೆಯಲ್ಲಿ ಮಧ್ಯಪ್ರವೇಶಿಸಲು ಹೊಂದಿದ್ದ ಸಾಮರ್ಥ್ಯವನ್ನು ನಿಗ್ರಹಿಸಿತು. ಈ ಜಾಗತೀಕರಣಗೊಂಡ ಹಣಕಾಸು ಬಂಡವಾಳವು ತನ್ನ ಜಾಗತಿಕ ಕಾರ್ಯಾಚರಣೆಗಳಲ್ಲಿ, ಎಲ್ಲಕ್ಕಿಂತ ಮಿಗಿಲಾಗಿ ಮೆಟ್ರೋಪಾಲಿಟನ್ ದೇಶಗಳ ಪ್ರಭುತ್ವಗಳ ಬೆಂಬಲವನ್ನು ಪಡೆದಿತ್ತು. ಈ ಮೆಟ್ರೋಪಾಲಿಟನ್ ದೇಶಗಳ ಪ್ರಭುತ್ವಗಳು, ವಿಶೇಷವಾಗಿ ಅಮೆರಿಕಾ, ಯಾವ ದೇಶಗಳ ಮೇಲೆ ನಿರ್ಬಂಧಗಳನ್ನು ವಿಧಿಸಬೇಕು ಎಂಬುದನ್ನು ನಿರ್ಧರಿಸುತ್ತವೆ. ಉಳಿದ ಬಂಡವಾಳಶಾಹಿ ದೇಶಗಳು ಈ ನಿರ್ಬಂಧಗಳ ಹೇರಿಕೆಯನ್ನು ಅನುಮೋದಿಸುತ್ತವೆ.

ಈ "ಜಾಗತೀಕರಣ"ವು, ಸಮಾಜವಾದಿ ದೇಶಗಳನ್ನುಹೊರತುಪಡಿಸಿ, ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ವಸಾಹತುಶಾಹಿಯಿಂದ ವಿಮೋಚನೆಗೊಂಡ ಮತ್ತು ಬಂಡವಾಳಶಾಹಿ ಅಭಿವೃದ್ಧಿಯನ್ನು ಉತ್ತೇಜಿಸುತ್ತಿದ್ದ ಮತ್ತು ವಿವಿಧ ರೀತಿಯ ನೇರ ನಿಯಂತ್ರಣ-ನೀತಿ (dirigiste) ಕಾರ್ಯತಂತ್ರಗಳನ್ನು ಅಳವಡಿಸಿಕೊಂಡ ದೇಶಗಳನ್ನೂ ಒಳಗೊಂಡಿದೆ. ಜಾಗತೀಕರಣದ ಈ ವಿದ್ಯಮಾನವು ಇಡೀ ವಿಶ್ವದ ಮೇಲೆ ಮತ್ತೊಮ್ಮೆ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಪ್ರಾಬಲ್ಯ ಹೊಂದುವ ಬಯಕೆಯನ್ನು ಪ್ರತಿನಿಧಿಸುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಸಮಾಜವಾದಿ ದೇಶಗಳನ್ನು ಹೊರತುಪಡಿಸಿ, ಮೂರನೆ ಜಗತ್ತಿನ ದೇಶಗಳು ಸಾಮ್ರಾಜ್ಯಶಾಹಿಗೆ ಎದುರಾಗಿ ಹೊಂದಿರುವ ಯಾವುದೇ ಸಾಪೇಕ್ಷ ಸ್ವಾಯತ್ತತೆಯನ್ನು ನಾಶಪಡಿಸುವುದು ಇದರ ಅರ್ಥ. "ಜಾಗತೀಕರಣ"ವೆಂದರೆ ಬಂಡವಾಳದ ಅನಿರ್ಬಂಧಿತ ಚಲನೆಗೆ ಪೂರಕವಾಗಿ, ಅದಕ್ಕನುಗುಣವಾಗಿ ದೇಶ ದೇಶಗಳ ನಡುವೆ ಅನಿರ್ಬಂಧಿತವಾಗಿ ಸರಕುಗಳು ಮತ್ತು ಸೇವೆಗಳ ಚಲನೆ ಎಂದೂ ಅರ್ಥ(ನಿಜ, "ನಿರ್ಬಂಧ"ಗಳನ್ನು ಎದುರಿಸುತ್ತಿರುವ ದೇಶಗಳನ್ನು ಹೊರತುಪಡಿಸಿ).

ಹೊಸ ಶಕ್ತಿಗಳ ಉದಯ-ಹೊಸ ಬೆದರಿಕೆಗಳ ಭೀತಿ

ಜಾಗತೀಕರಣದ ಈ ಅವಧಿಯಲ್ಲಿ ಆದದ್ದೇನೆಂದರೆ, ಹೊಸ ಹೊಸ ಆರ್ಥಿಕ ಶಕ್ತಿಗಳು ಹೊರಹೊಮ್ಮಿದವು ಮತ್ತು ಇವು ತಮಗೆ ಬೆದರಿಕೆಯೊಡ್ಡುತ್ತವೆ ಎಂದು ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳು ಭಾವಿಸುವಂತಾಯಿತು. ಈ ಹೊಸ ಆರ್ಥಿಕ ಶಕ್ತಿಗಳ ಪೈಕಿ ಸೋವಿಯತ್ ಒಕ್ಕೂಟವು ನಿರ್ಮಿಸಿದ ಬೃಹತ್ ಉತ್ಪಾದನಾ ನೆಲೆಯನ್ನು ಉತ್ತರಾಧಿಕಾರದಿಂದ ಪಡೆದ ರಷ್ಯಾವೂ ಸೇರಿತ್ತು, ಅದನ್ನು ಈಗ ಅಧೀನಗೊಳಿಸಿಕೊಂಡಿದ್ದೇವೆ ಎಂದು ಪಾಶ್ಚಾತ್ಯ ಶಕ್ತಿಗಳು ಭಾವಿಸಿದ್ದವು. ಆದರೆ, ಬೋರಿಸ್ ಯೆಲ್ಟ್ಸಿನ್ ಅಧಿಕಾರದಿಂದ ಕೆಳಗಿಳಿದ ನಂತರ ಅದು ತನ್ನ ಹಿಂದಿನ ಶಕ್ತಿ-ಸಾಮರ್ಥ್ಯಗಳನ್ನು ಮತ್ತೆ ತೋರಿಸಲಾರಂಭಿಸಿತು. ಇನ್ನು ಚೀನಾದ ಬಗ್ಗೆ ಹೇಳುವುದಾದರೆ, ಪಾಶ್ಚಾತ್ಯ ಶಕ್ತಿಗಳ ನಿರ್ದೇಶನಗಳನ್ನು ಒಪ್ಪಿಕೊಳ್ಳುವುದರ ಬದಲಾಗಿ ತನ್ನದೇ ಷರತ್ತುಗಳ ಮೇಲೆ "ಜಾಗತೀಕರಣ"ಕ್ಕೆ ತನ್ನನ್ನು ಅದು ಹೊಂದಿಸಿಕೊಂಡಿತು ಮತ್ತು ಇತರ ಕಾರಣಗಳೊಂದಿಗೆ, ಮೆಟ್ರೋಪಾಲಿಟನ್ ಬಂಡವಾಳಶಾಹಿ ಜಗತ್ತಿನ ಮಾರುಕಟ್ಟೆಗಳಿಗೆ ಪ್ರವೇಶ ಪಡೆದುದರಿಂದಾಗಿಯೂ ಕ್ಷಿಪ್ರ ಆರ್ಥಿಕ ಬೆಳವಣಿಗೆಯನ್ನು ಸಾಧಿಸಿತು.

ಈಗ, ಉಕ್ರೇನ್ ಯುದ್ಧದ ಸನ್ನಿವೇಶದಲ್ಲಿ ರಷ್ಯಾ ದೇಶವೂ "ನಿರ್ಬಂಧ"ಗಳ ಅಡಿಯಲ್ಲಿ ಬಂದಿದೆ. ಚೀನಾದೊಂದಿಗಿನ ಪಾಶ್ಚಾತ್ಯ ದೇಶಗಳ ವ್ಯಾಪಾರವೂ ಚೀನಾದ ಉದ್ದೇಶಪೂರ್ವಕವಾದ ರಾಜಕೀಯ ಪ್ರಯತ್ನಗಳ ಭಾಗವಾಗಿ ಸ್ವಲ್ಪ ಮಟ್ಟಿಗೆ ಕುಸಿದಿದೆ. ಅಮೆರಿಕಾದ ವಿಷಯದಲ್ಲಿ ಅಂತಹ ಪ್ರಯತ್ನಗಳು ಹಲವು ಉದ್ದೇಶಗಳಿಂದ ಪ್ರೇರಿತವಾಗಿವೆ-ದೇಶೀಯ ಉದ್ಯೋಗಗಳನ್ನು ರಕ್ಷಿಸಿಕೊಳ್ಳುವುದರಿಂದ ಹಿಡಿದು ರಕ್ಷಣೆಯಿಂದ ಹಿಡಿದು (ಚೀನಾದಿಂದ ಅಮೆರಿಕಾಕ್ಕೆ ಬರುವ ಬರುವ ಬಹಳಷ್ಟು ಆಮದುಗಳನ್ನು ಅಲ್ಲಿ ಅಮೆರಿಕಾದ ನೇರ ಹೂಡಿಕೆಯಿಂದ ಉತ್ಪಾದಿಸಿದರೂ ಸಹ) ಚೀನಾದ ಮೇಲೆ ಹೆಚ್ಚು ಅವಲಂಬಿತವಾಗಬಾರದು ಎಂಬ ಉತ್ಕಟ ಬಯಕೆಯವರೆಗಿನ ಹಲವಾರು ಅಂಶಗಳಿಂದ ಪ್ರೇರೇಪಿಸಲ್ಪಟ್ಟಿವೆ. ಈ ಸಂಬಂಧವಾಗಿ ಇತರ ಮೆಟ್ರೋಪಾಲಿಟನ್ ದೇಶಗಳಿಗೆ ಸಂಬಂಧಪಟ್ಟಂತೆ, ಈ ಅಂಶಗಳಲ್ಲದೆ, ಅಮೆರಿಕಾದ ಒತ್ತಡವೂ ಸೇರಿದೆ.. ಈ ಎಲ್ಲ ಅಂಶಗಳ ಪೈಕಿ ಹೆಚ್ಚು ನಿರ್ಣಾಯಕ ಅಂಶವೆಂದರೆ, ಚೀನಾದ ಮೇಲೆ ಹೆಚ್ಚು ಅವಲಂಬಿತವಾಗಬಾರದು ಎಂಬ ಬಯಕೆಯೇ.



ಚೀನಾದಿಂದ ಆಮದುಗಳು ವೇಗವಾಗಿ ವೃದ್ಧಿಸುತ್ತಿರುವ ಬಗ್ಗೆ ಅಮೆರಿಕಾದ ಆತಂಕವು ಜಾರ್ಜ್ ಬುಷ್ (ಕಿರಿಯ) ಅವರ ಅವಧಿಯಲ್ಲೇ ಕಾಣಿಸಿಕೊಂಡಿತು. ಅವರು, ಡಾಲರ್‌ಗೆ ಎದುರಾಗಿ ಚೀನಾದ ಯುವಾನ್ ಕರೆನ್ಸಿಯ ವಿನಿಮಯ ಮೌಲ್ಯವನ್ನು ಏರಿಕೆ ಮಾಡುವಂತೆ ಚೀನೀಯರ ಮನವೊಲಿಸುವ ಪ್ರಯತ್ನ ಮಾಡಿದರು. ಈ ಪ್ರಯತ್ನವನ್ನು ಮುಂದುವರಿಸಿದ ಒಬಾಮಾ ಆಡಳಿತವು, ತಮ್ಮ ಉತ್ಪಾದನೆಯನ್ನು ವಿದೇಶಕ್ಕೆ ಸ್ಥಳಾಂತರಿಸುವ ಅಮೆರಿಕಾದ ಸಂಸ್ಥೆಗಳಿಗೆ ದಂಡ ವಿಧಿಸಿತು. ಆದರೆ, ದೇಶೀಯ ಉತ್ಪಾದನೆಯನ್ನು ರಕ್ಷಿಸುವ ಉದ್ದೇಶದಿಂದ, ಡೊನಾಲ್ಡ್ ಟ್ರಂಪ್, ವಿದೇಶದಿಂದ ಆಮದಾಗುವ ವಸ್ತುಗಳ ಮೇಲೆ ಆಮದು ಸುಂಕವನ್ನು ವಿಧಿಸಿದರು. ಈ ಆಮದು ಸುಂಕಗಳ ಪ್ರಮುಖ ಗುರಿ ಚೀನಾವೇ.

ತಾರತಮ್ಯದ ಹೊಸ ಪ್ರವೃತ್ತಿ

ಪಶ್ಚಿಮದ ದೇಶಗಳು ಚೀನಾದೊಂದಿಗಿನ ವ್ಯಾಪಾರವನ್ನು ತಗ್ಗಿಸುವ ಉದ್ದೇಶದ ಹಿಂದಿರುವ ಅಗಾಧ ರಾಜಕೀಯ ಪ್ರೇರಣೆಯನ್ನು ಎರಡು ಉದಾಹರಣೆಗಳು ಸ್ಪಷ್ಟಪಡಿಸುತ್ತವೆ. ಯುರೋಪಿನ ಅಪ-ಇಂಗಾಲೀಕರಣ (decarbonisation-ಅಂದರೆ, ಕಲ್ಲಿದ್ದಲು ಬಳಕೆಯನ್ನು ನಿಲ್ಲಿಸುವುದು) ಉದ್ದೇಶಕ್ಕಾಗಿ ಬಳಸುವ ಸೌರ ಫಲಕಗಳನ್ನು ವಿಶ್ವ ಮಾರುಕಟ್ಟೆಯಲ್ಲಿ ಶೇ. 65ಕ್ಕಿಂತ ಹೆಚ್ಚು ಪಾಲು ಹೊಂದಿರುವ ಯಾವುದೇ ದೇಶದಿಂದ ಆಮದು ಮಾಡಿಕೊಳ್ಳಬಾರದು ಎಂಬ ನಿಯಮವನ್ನು ಪಾಲಿಸಬೇಕೆಂದು ಯುರೋಪಿಯನ್ ಯೂನಿಯನ್ ಹೇಳುತ್ತದೆ. ಈ ನಿಯಮವು, ವಿಶ್ವ ಮಾರುಕಟ್ಟೆಯಲ್ಲಿ ಶೇ. 85ರಷ್ಟು ಪಾಲು ಹೊಂದಿರುವ ಚೀನಾವನ್ನು ಹೊರಗಿಡುವ ಉದ್ದೇಶ ಹೊಂದಿದೆ. ಏಕೆಂದರೆ, ಅತ್ಯಂತ ಕಡಿಮೆ ಬೆಲೆಯಲ್ಲಿ ಸೌರ ಫಲಕಗಳನ್ನು ಚೀನಾ ಸರಬರಾಜು ಮಾಡುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಚೀನಾವನ್ನು ಹೊರಗಿಡುವ ಉದ್ದೇಶಕ್ಕಾಗಿ ಸೌರ ಫಲಕಗಳಿಗೆ ಹೆಚ್ಚಿನ ಬೆಲೆ ತೆರಲು ಯುರೋಪ್ ಸಿದ್ಧವಿದೆ. ಈ ನಿರ್ಧಾರವು ಸಂಪೂರ್ಣವಾಗಿ ಭೌಗೋಳಿಕ-ರಾಜಕೀಯ ಪರಿಗಣನೆಗಳಿಂದ ಪ್ರೇರಿತವಾಗಿದೆ.

ಅಂತೆಯೇ, ಬೈಡನ್ ಆಡಳಿತವು ಚೀನಾಕ್ಕೆ ಅರೆ-ವಾಹಕಗಳ (semi-conductor) ರಫ್ತನ್ನು ನಿಷೇಧಿಸಿದೆ. ಅರೆ-ವಾಹಕಗಳನ್ನು ತಯಾರಿಸುವ ಅಮೆರಿಕಾದ ಕಾರ್ಪೊರೇಟ್‌ಗಳ ಇಚ್ಛೆಗಳಿಗೆ ವಿರುದ್ಧವಾಗಿ ಈ ನಿಷೇಧವನ್ನು ಹೇರಲಾಗಿದೆ. ಚೀನಾದ ಮಿಲಿಟರಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ(ಎಐ)ಯೂ ಸೇರಿದಂತೆ ಚೀನಾದ ಹೈಟೆಕ್ ಉದ್ಯಮಗಳಿಗೆ ಭಾರೀ ಬೆದರಿಕೆಯನ್ನು ಒಡ್ಡಿರುವ ಅರೆ-ವಾಹಕಗಳ ಈ ರಫ್ತು ನಿಷೇಧವು ಚೀನಾವನ್ನು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಸಂಪೂರ್ಣವಾಗಿ ದುರ್ಬಲಗೊಳಿಸುವ ಬಯಕೆಯಿಂದ ಪ್ರೇರಿತವಾಗಿದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಚೀನಾದ ವಿರುದ್ಧ ಈಗ ಯಾವುದೇ ಸ್ಪಷ್ಟ ನಿರ್ಬಂಧಗಳಿಲ್ಲದಿದ್ದರೂ, ಭವಿಷ್ಯದಲ್ಲಿ ಹೇರಬಹುದಾದ ನಿರ್ಬಂಧಗಳಿಗೆ ಪೂರ್ವ ಸಿದ್ಧತೆಯಾಗಿ ಅಥವಾ ಚೀನಾವನ್ನು ದುರ್ಬಲಗೊಳಿಸುವ ಬಯಕೆಯಿಂದ ನಿರ್ಬಂಧಗಳನ್ನು ಈಗಾಗಲೇ ಸೂಚ್ಯವಾಗಿ ಹೇರಿರುವುದನ್ನು ನಾವು ನೋಡುತ್ತಿದ್ದೇವೆ.

"ನಿರ್ಜಾಗತೀಕರಣ"("de-globalisation") ಎಂದು ಏನನ್ನು ಕರೆಯಲಾಗುತ್ತದೆಯೋ ಅದು ಪಾಶ್ಚಾತ್ಯ ಶಕ್ತಿಗಳು ಚೀನಾದ ವಿರುದ್ಧ ಮಾಡುತ್ತಿರುವ ತಾರತಮ್ಯದ ಈ ಇಡೀ ಹೊಸ ಪ್ರವೃತ್ತಿಯನ್ನು ಮತ್ತು ಚೀನಾದ ಮೇಲೆ ಹೆಚ್ಚು ಅವಲಂಬಿತವಾಗಬಾರದು ಎಂಬ ಅವರ ಅದಮ್ಯ ಬಯಕೆಯನ್ನು ಸೂಚಿಸುತ್ತದೆ. ಇದರ ಪರಿಣಾಮವನ್ನು ಚೀನಾದೊಂದಿಗಿನ ವ್ಯಾಪಾರದಲ್ಲಿ ಅಮೆರಿಕಾದ ವಹಿವಾಟುಗಳು ಇತ್ತೀಚಿನ ದಿನಗಳ ಕುಸಿತದಲ್ಲಿ ಕಾಣಬಹುದು. ಪಾಶ್ಚಾತ್ಯರ ಪ್ರಯತ್ನವು ಮೂಲತಃ ಚೀನಾದಿಂದ ದೂರ ಸರಿದು ತಮ್ಮ ವ್ಯಾಪಾರ ಸಂಬಂಧಗಳನ್ನು ಇತರ ದೇಶಗಳೊಂದಿಗೆ ಏರ್ಪಡಿಸಿಕೊಳ್ಳುವ ಉದ್ದೇಶ ಹೊಂದಿದೆ - ಈ ಪ್ರಯತ್ನವು ಹೆಚ್ಚು ದುಬಾರಿಯಾಗಿ ಪರಿಣಮಿಸಿದರೂ ಸಹ. ಇದರಿಂದಪಾಶ್ಚಾತ್ಯ ನಿರ್ಬಂಧಗಳಿಗೆ ಒಳಪಟ್ಟ ದೇಶಗಳ ಪಟ್ಟಿಗೆ ಚೀನಾವನ್ನು ಸೇರಿಸಿದಂತೆ ಕಾಣುತ್ತದೆ.

ಕುತೂಹಲಕರ ಅಂಶವೆಂದರೆ, "ಜಾಗತೀಕರಣ"ದ ವ್ಯಾಪ್ತಿಯನ್ನು ಅಳೆಯಲು ಕೆಲವು ಅರ್ಥಶಾಸ್ತ್ರಜ್ಞರು ಬಳಸುವ, ವಿಶ್ವ ಜಿಡಿಪಿ ಮತ್ತು ಒಟ್ಟು ಜಾಗತಿಕ ಆಮದುಗಳ ಅನುಪಾತ ಮುಂತಾದ ಬದಲಿ ಮಾನದಂಡಗಳಲ್ಲಿ ಯಾವುದೇ ಕುಸಿತ ಕಂಡುಬಂದಿಲ್ಲ. ಇಂತಹ ಬದಲಿ ಅಳತೆಗಳ ಮೂಲಕ ಈ ಅರ್ಥಶಾಸ್ತ್ರಜ್ಞರು, "ಜಾಗತೀಕರಣ"ದ ಪ್ರಕ್ರಿಯೆಯು ನಿಧಾನಗೊಳ್ಳುತ್ತಿದೆಯೇ ಹೊರತು ಅದನ್ನು ಹಿಂತೆಗೆದುಕೊಳ್ಳಲಾಗುತ್ತಿಲ್ಲ ಎಂಬುದನ್ನು ಕಂಡುಕೊಂಡಿದ್ದಾರೆ.

ಹಣಕಾಸು ಬಂಡವಾಳದ ಪ್ರಾಬಲ್ಯ ಮತ್ತು ಪ್ರಗತಿಪರ ಸರಕಾರದ ಮಧ್ಯಪ್ರವೇಶ..

ನಾವು ಈ ಹಿಂದೆ ಹೇಳಿದಂತೆ, ನಮ್ಮ ಗ್ರಹಿಕೆಯಲ್ಲಿ "ಜಾಗತೀಕರಣ"ವು ದೇಶ ದೇಶಗಳು ಪರಸ್ಪರ ಹೆಚ್ಚು ಅವಲಂಬಿತವಾಗುವ ವಿದ್ಯಮಾನವನ್ನು ಸೂಚಿಸುವುದಿಲ್ಲ. ಈ "ಜಾಗತೀಕರಣ"ವು ಮೂಲಭೂತವಾಗಿ ಅಧಿಕಾರ-ಸಂಬಂಧಗಳನ್ನು ಸೂಚಿಸುತ್ತದೆ. ನಿರ್ದಿಷ್ಟ ದೇಶಗಳ ವಿರುದ್ಧ ವಿಧಿಸಿದ "ನಿರ್ಬಂಧ"ಗಳ ಮೂಲಕ ಈ ಅಧಿಕಾರವು ಬಳಕೆಯಾದ ರೀತಿಯಲ್ಲೇ ದೇಶ ದೇಶಗಳನ್ನು "ಜಾಗತೀಕರಣ"ದ ಸುಳಿಗೆ ಎಳೆಯುವ ಮೂಲಕವೂ ಬಳಸಲಾಗುತ್ತದೆ. ಈ ಅಧಿಕಾರದ ಬಳಸುವಿಕೆಯೇ ಸಾಮ್ರಾಜ್ಯಶಾಹಿಯ ಹೆಗ್ಗುರುತು. ಹೇಗೆ "ನಿರ್ಬಂಧಗಳು" ಸಾಮ್ರಾಜ್ಯಶಾಹಿಯ ನಿರ್ದಯತೆಯ ಲಕ್ಷಣವಾಗಿವೆಯೋ ಹಾಗೆಯೇ ಜಾಗತೀಕರಣವೂ ಸಹ ಜಾಗತೀಕರಣಗೊಂಡ ಬಂಡವಾಳದ ಪ್ರಾಬಲ್ಯಕ್ಕೆ ಪುಟ 14 ಕ್ಕೆ

....'ಕವಚ'ವಾಗಿ 'ರೈಲ್-ಟೂಲ್-ಕಿಟ್'

➪ ಪುಟ 12 ರಿಂದ

ಅವುಗಳನ್ನು ಸರಿಪಡಿಸಲು ಸರಕಾರ ಕ್ರಮಗಳನ್ನು ಕೈಗೊಂಡಿದ್ದರೆ, ಇಂತಹ ಭೀಕರ ಅಪಘಾತವನ್ನು ತಡೆಯಬಹುದಿತ್ತು, ಅದನ್ನು ಏಕೆ ಮಾಡಿಲ್ಲ ಎಂಬುದೇ ಈ ಪ್ರಶ್ನೆ.

ಮುಖ್ಯವಾಗಿ, 2017ರಿಂದ 2021ರ ನಡುವೆ ತನಿಖೆ ಮಾಡಿದ 1129 ಹಳಿತಪ್ಪಿದ ಪ್ರಕರಣಗಳಲ್ಲಿ 275 ಕಾರ್ಯಾಚರಣೆ(ಆಪರೇಷನ್ಸ್) ವಿಭಾಗದ ಲೋಪಗಳಿಂದಾಗಿ ನಡೆದಿದ್ದು ಇದರಲ್ಲಿ 84% ಶಂಟಿಂಗ್ ಕಾರ್ಯಗಳಲ್ಲಿ ಸರಿಯಲ್ಲದ 'ಪಾಯಿಂಟ್'ಗಳನ್ನು ಹಾಕಿದ್ದು ಮತ್ತು ಇತರ ತಪ್ಪುಗಳಿಂದಾಗಿ; ಇದನ್ನು ತುರ್ತಾಗಿ ಸರಿಪಡಿಸಬೇಕಾಗಿದೆ ಎಂದಿತ್ತು. ಈ ಅಪಘಾತದಲ್ಲಿ ಇದು ಮುಖ್ಯ ಕಾರಣವಾಗಿರಬಹುದು ಎಂದು ಇದುವರೆಗೆ ಮೇಲ್ನೋಟಕ್ಕೆ ಕಂಡು ಬಂದಿರುವ ಸಂಗತಿ ಎಂಬುದನ್ನು ಇಲ್ಲಿ ಗಮನಿಸಬೇಕು.

ಇದಲ್ಲದೆ ಸಿಎಜಿ ತನ್ನ ವರದಿಯಲ್ಲಿ 'ರಾಷ್ಟ್ರೀಯ ರೈಲ್ ಸುರಕ್ಷಾ ಕೋಶ್' ಎಂಬ 2017-18ರ ಬಜೆಟಿನಲ್ಲಿ ಪ್ರಕಟಿಸಿದ ನಿಧಿಯನ್ನು ಪ್ರಸ್ತಾಪಿಸುತ್ತ, ಐದು ವರ್ಷಗಳಲ್ಲಿ 1ಲಕ್ಷ ಕೋಟಿ ರೂ.ಗಳ ಸುರಕ್ಷತಾ ನಿಧಿ ರಚಿಸಲಾಗುವುದು, ಇದಕ್ಕೆ ಪ್ರತಿವರ್ಷ ಬಜೆಟಿನಿಂದ 20,000 ಕೋಟಿ ರೂ. ಮತ್ತು ರೈಲ್ವೆ ಆಂತರಿಕ ಮೂಲಗಳಿಂದ 5000 ಕೋಟಿ ರೂ. ನೀಡಲಾಗುವುದು ಎಂದು ಹೇಳಿದ್ದರೂ, 2021 ರವರೆಗೆ ರೈಲ್ವೆ ಆಂತರಿಕವಾಗಿ ಹೊಂದಿಸಬೇಕಾಗಿದ್ದ 20,000 ಕೋಟಿ ರೂ.ಗಳಲ್ಲಿ 15,775 ರೂ.ಗಳ ಕೊರತೆಯಾಗಿದೆ, ಇದರಿಂದಾಗಿ ಈ ನಿಧಿಯನ್ನು ಸ್ಥಾಪಿಸಿರುವುದರ ಉದ್ದೇಶ ಕ್ರಮೇಣ ನಶಿಸುತ್ತ ರೈಲ್ವೆ ಸುರಕ್ಷತೆಗಾಗಿ ರಚಿಸಿದ ಈ ನಿಧಿಯ ಪ್ರಾಥಮಿಕ ಉದ್ದೇಶವನ್ನೇ ವಿಫಲಗೊಳಿಸಲಾಗಿದೆ ಎಂದು ನವಂಬರ್ 2022ರ ತನ್ನ ವರದಿಯಲ್ಲಿ ಸಿಎಜಿ ಟಿಪ್ಪಣಿ ಮಾಡಿರುವುದು ಗಮನಾರ್ಹ.

ಮೂರನೇ ಪ್ರಶ್ನೆ, ಕಳೆದ ಫೆಬ್ರುವರಿಯಲ್ಲಷ್ಟೇ, ಇದೇ ತೆರನ ಸಿಗ್ನಲಿಂಗ್ ಮತ್ತು ಹಳಿ 'ಇಂಟರ್ ಲಾಕಿಂಗ್' ವ್ಯವಸ್ಥೆಯ ದೋಷದಿಂದ ದಕ್ಷಿಣ-ಮಧ್ಯ ವಲಯದ ಮೈಸೂರು ವಿಭಾಗದ ಹೊಸದುರ್ಗ ರೋಡ್ ನಲ್ಲಿ ದಿಲ್ಲಿ-ಬೆಂಗಳೂರು ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ಗೆ ಇದೇ ರೀತಿಯ ಅಪಘಾತವಾಗುವ ಸಂಭವವಿದ್ದು, ಅದರ ಚಾಲಕರ ವಿಚಕ್ಷಣತೆಯಿಂದಾಗಿ ತಪ್ಪಿಹೋಗಿತ್ತು. ಇದನ್ನು ಅಲ್ಲಿಯ ಮುಖ್ಯ ಕಾರ್ಯಾಚರಣೆ ವ್ಯವಸ್ಥಾಪಕರು ಹಿರಿಯ ರೈಲ್ವೆ ಅಧಿಕಾರಿಗಳ ಗಮನಕ್ಕೆ ತಂದು, ಸಿಗ್ನಲ್ ಮೆಂಟೆನೆನ್ಸ್ ವ್ಯವಸ್ಥೆಯನ್ನು ತಕ್ಷಣವೇ ಸರಿಪಡಿಸದಿದ್ದರೆ ಗಂಭೀರ ಅಪಘಾತಗಳು ನಡೆಯಬಹುದು ಎಂದೂ ಹೇಳಿದ್ದರು ಎಂದು ವರದಿಯಾಗಿದೆ (ದಿ ಹಿಂದು, ಜೂನ್ 5). ಇದನ್ನು ರೈಲ್ವೆ ಮಂಡಳಿ ಮತ್ತು ಮಂತ್ರಿಗಳು ಗಂಭೀರವಾಗಿ ತೆಗೆದುಕೊಂಡಿದ್ದಾರೆಯೇ? ತೆಗೆದುಕೊಂಡಿದ್ದರೆ ಈ ಭೀಕರ ಅಪಘಾತವನ್ನು ತಪ್ಪಿಸಬಹುದಿತ್ತಲ್ಲವೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

ಇದರೊಂದಿಗೇ, ರೈಲ್ವೆ ವಿಭಾಗದಲ್ಲಿ 3.14ಲಕ್ಷ ಹುದ್ದೆಗಳು ನೇಮಕಾತಿ ಇಲ್ಲದೆ ಖಾಲಿ ಉಳಿದಿವೆ, ರೈಲು ಸಂಚಾರದ ಸುರಕ್ಷಿತತೆಗೆ ಬಹುಮುಖ್ಯವಾಗಿರುವ ಸಿಗ್ನಲಿಂಗ್ ವಿಭಾಗದಲ್ಲೇ 75,000 ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಇದರಿಂದ ಹಳಿಗಳ, ಸಿಗ್ನಲ್ ವ್ಯವಸ್ಥೆಯ ಮತ್ತು ಸ್ಟೇಷನ್‌ಗಳ ಹಾಲಿ ಸಿಬ್ಬಂದಿಯ ಮೇಲೆ ಕೆಲಸದ ಒತ್ತಡ ಹೆಚ್ಚಿ ಕರ್ತವ್ಯ-ನಿರ್ವಹಣೆಯಲ್ಲಿ ಲೋಪ-ದೋಷಗಳು ಹೆಚ್ಚುವಂತಾಗಿದೆ ಎಂದೂ ಹೇಳಲಾಗುತ್ತಿದೆ. ಹೀಗೇಕಾಗುತ್ತಿದೆ ಎಂಬ ಪ್ರಶ್ನೆಯೂ ಸಹಜವೇ. ಇನ್ನೊಂದೆಡೆಯಲ್ಲಿ ಸತತವಾಗಿ ಹೊಸ ರೈಲುಗಳ ಪ್ರಕಟಣೆ, ವೇಗ ಹೆಚ್ಚಳದಿಂದಾಗಿ ಹಳಿ ದುರಸ್ತಿಗೆ ಸಮಯವೂ, ಹಣವೂ ಸಿಗದಂತಾಗಿದೆ ಎಂದು ನಿವೃತ್ತ ರೈಲ್ವೆ ವಕ್ತಾರರು ಹೇಳಿದ್ದಾರೆ.

ಈ ಎಲ್ಲ ಪ್ರಶ್ನೆಗಳಿಗೆ ರೈಲ್ವೆ ಇಲಾಖೆಯ ಮತ್ತು ಸರಕಾರದ ಹೊಣೆ ಹೊತ್ತವರು ಈ ಭೀಷಣ ಅಪಘಾತದಲ್ಲಿ ಪ್ರಾಣ ಕಳಕೊಂಡವರ ಕುಟುಂಬಗಳಿಗೆ, ಗಂಭೀರ ಗಾಯಗಳಾಗಿ ನರಳುತ್ತಿರುವ ಸುಮಾರು ಒಂದು ಸಾವಿರ ಪ್ರಯಾಣಿಕರಿಗೆ ಹಾಗೂ ಇಡೀ ದೇಶಕ್ಕೆ ಉತ್ತರ ಕೊಡಬೇಕಾಗಿಲ್ಲ ಎಂಬ ರಕ್ಷಣಾ ಕವಚವನ್ನು ನಿರ್ಮಿಸುವುದೇ ಈ ರೈಲ್-ಟೂಲ್-ಕಿಟ್‌ನ ಉದ್ದೇಶ ಎಂದು ವಿಶ್ಲೇಷಕರು ಹೇಳುತ್ತಾರೆ.

'ಜಾಗತೀಕರಣ'ವು ಕಳಚಿ ಹೋಗುತ್ತಿದೆಯೇ..... ಪುಟ 13 ರಿಂದ

ಅಗತ್ಯವಾಗುತ್ತವೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, "ಅಪ-ಜಾಗತೀಕರಣ" ಎಂಬುದು ವಾಸ್ತವವಾಗಿ "ಜಾಗತೀಕರಣ"ದ ನಿರಾಕರಣೆಯಲ್ಲ, ಬದಲಿಗೆ ಅದಕ್ಕೆ ಪೂರಕವೇ.

ಜಾಗತೀಕರಣಗೊಂಡ ಬಂಡವಾಳವು ಮಹಾನಗರಗಳಿಂದ (metropolis) ಬರುತ್ತದೆ ಮತ್ತು ಅದು ಮಹಾನಗರೀಯ(ಮೆಟ್ರೋಪಾಲಿಟನ್) ದೇಶಗಳ ಕಾರ್ಯಾಚರಣೆಯೊಂದಿಗೆ ತೊಡರಿಕೊಂಡಿದೆ. ಈ ಕಾರಣದಿಂದಾಗಿ ಜಾಗತೀಕರಣಗೊಂಡ ಬಂಡವಾಳದ ಪ್ರಾಬಲ್ಯವು ನಿಜಕ್ಕೂ ಮೆಟ್ರೋಪಾಲಿಟನ್ ಅಥವ ಪಾಶ್ಚಾತ್ಯ ಬಂಡವಾಳಶಾಹಿ ದೇಶಗಳ ಪ್ರಾಬಲ್ಯವೇ ಆಗುತ್ತದೆ. ಈ ಪ್ರಾಬಲ್ಯವು ವಿಶ್ವದ ಜನರ ಮೇಲೆ ಅದರಲ್ಲೂ ವಿಶೇಷವಾಗಿ ಮೂರನೇ ಜಗತ್ತಿನ ಜನರ ಮೇಲೆ ಚಲಾಯಿಸಲ್ಪಡುತ್ತದೆ. ಮೂರನೇ ಜಗತ್ತಿನ ದೊಡ್ಡ ಬಂಡವಾಳಗಾರರು, ವೇತನದಾರರು ಮತ್ತು ವೃತ್ತಿಪರರು ಮುಂತಾದ ವರ್ಗಗಳ ಮೇಲಿನ ಸ್ತರಗಳ ಬೆಂಬಲವನ್ನು ಹೊಂದಿರುವ "ಜಾಗತೀಕರಣ"ವು ಅನಿವಾರ್ಯವಾಗಿ ಮೂರನೇ ಜಗತ್ತಿನ ಕಾರ್ಮಿಕರು, ರೈತರು ಮತ್ತು ಸಣ್ಣ ಉತ್ಪಾದಕರನ್ನು ದಮನಿಸುತ್ತದೆ.

ಬಂಡವಾಳಶಾಹಿ ಗುಲಾಮಗಿರಿಯಿಂದ ಹೊರಬರಲು ದುಡಿಯುವ ಜನರು ಒಂದು ದಶಕದ ಹಿಂದೆ ನಡೆಸುತ್ತಿದ್ದ ತಾಲೀಮಿಗೆ ಹೋಲಿಸಿದರೆ ಅವರ ಇಂದಿನ ಪರಿಸ್ಥಿತಿ ಭಿನ್ನವೇನಿಲ್ಲ. ದುಡಿಯುವ ಜನರ ಜೀವನ ಮಟ್ಟದಲ್ಲಿ ಯಾವುದೇ ಸುಧಾರಣೆಗೆ ಸರ್ಕಾರವು ಮಧ್ಯಪ್ರವೇಶ ಮಾಡಬೇಕಾದ ಅಗತ್ಯವಿದೆ. ಈ ಉದ್ದೇಶಕ್ಕಾಗಿ ತಾನು ಮಧ್ಯಪ್ರವೇಶ ಮಾಡಿದರೆ ಬಂಡವಾಳವು ಪಲಾಯನ ಮಾಡುತ್ತದೆ ಎಂಬ ಭಯದಿಂದ ಸರ್ಕಾರದ ಕೈ-ಕಾಲುಗಳು ಸೆಟೆದುಕೊಳ್ಳುತ್ತವೆ. ಆದ್ದರಿಂದ ಸರ್ಕಾರವು ತನ್ನ ಕೈ-ಕಾಲಾಡಿಸುವಷ್ಟಾದರೂ ಜಾಗವನ್ನು ತನಗಾಗಿ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಆದರೆ, ಎಲ್ಲಿಯವರೆಗೆ ದೇಶವು ಅನಿಬಂರ್ಧಿತ ಬಂಡವಾಳ ಹರಿವಿನ ಸುಳಿಯಲ್ಲಿ ಸಿಲುಕಿಕೊಳ್ಳುತ್ತದೋ ಅಲ್ಲಿಯವರೆಗೂ ಸರ್ಕಾರವು ಕೈ-ಕಾಲಾಡಿಸುವಷ್ಟು ಜಾಗವನ್ನೂ ಸೃಷ್ಟಿಸಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದ ಯಾವುದೇ ಪ್ರಗತಿಪರ ಮಧ್ಯಪ್ರವೇಶಕ್ಕಾಗಿ ಬಂಡವಾಳದ ಹರಿವಿನ ಮೇಲೆ ನಿಯಂತ್ರಣ ಹೇರುವುದು ಅನಿವಾರ್ಯವಾಗುತ್ತದೆ.

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಜನರ ಲೌಕಿಕ ಸ್ಥಿತಿ-ಗತಿಯ ಸುಧಾರಣೆಗಾಗಿ, ಕೇವಲ ಪ್ರಭುತ್ವದ ಸ್ವರೂಪದ ಬದಲಾವಣೆ-ಅಂದರೆ, ಕಾರ್ಮಿಕರು ಮತ್ತು ರೈತರ ಬೆಂಬಲ ಹೊಂದಿದ ಸರ್ಕಾರ ಅಗತ್ಯವಾಗಿದೆ, ಮಾತ್ರವಲ್ಲ, ಅದರೊಂದಿಗೇ, ಅನಿಬಂರ್ಧಿತ ಬಂಡವಾಳ ಹರಿವಿನ ಬ್ರಹ್ಮಾಂಡದಿಂದ ಕಳಚಿಕೊಳ್ಳುವುದು ಕೂಡ ಅಗತ್ಯವಾಗುತ್ತದೆ. ಜನಪರ ನೀತಿಗಳನ್ನು ಅಳವಡಿಸಿಕೊಳ್ಳಬೇಕಾದರೆ, ದುಡಿಯುವ ಜನರ ಬೆಂಬಲ ಮಾತ್ರವೇ ಸಾಕಾಗುವುದಿಲ್ಲ. ಬಂಡವಾಳದ ಹರಿವಿನ ಮೇಲೆ ನಿಯಂತ್ರಣ ಹೇರುವುದು ಕೂಡ, ಅಂತಹ ನಿಯಂತ್ರಣವು ಸಾಮ್ರಾಜ್ಯಶಾಹಿ "ನಿರ್ಬಂಧ" ಗಳನ್ನು ಆಕರ್ಷಿಸಬಹುದಾದರೂ, ಅನಿವಾರ್ಯವಾಗುತ್ತದೆ.

ಈ ಮಾತು ಒಂದು ದಶಕದ ಹಿಂದಿನಷ್ಟೇ ಇಂದಿಗೂ ಸಹ ದಿಟ. ಕೆಲವು ಅರ್ಥಶಾಸ್ತ್ರಜ್ಞರು ಹೇಳುವ "ನಿರ್ಜಾಗತೀಕರಣ" ("de-globalisation") ಎಂಬುದು ಜಾಗತೀಕರಣಗೊಂಡ ಬಂಡವಾಳದ ಪ್ರಾಬಲ್ಯವನ್ನು ಎದುರಿಸುವ ವಾಸ್ತವಿಕ ಅಗತ್ಯಕ್ಕೆ ಕೊಂಚವೂ ವ್ಯತ್ಯಾಸವನ್ನುಂಟುಮಾಡುವುದಿಲ್ಲ. ಏಕೆಂದರೆ, ಜಾಗತೀಕರಣದ ಹಿಂದೆ ಮೆಟ್ರೋಪಾಲಿಟನ್ ಪ್ರಭುತ್ವಗಳ ವ್ಯೂಹವೇ ನಿಂತಿವೆ.

ಕೆ-ಫೋನ್: ಕೇರಳದ ಹೊಸ ಚರಿತ್ರೆ..... ಪುಟ 16 ರಿಂದ

ಕೇರಳಕ್ಕೆ ಭಾರಿ ಸಾಮರ್ಥ್ಯದೊಂದಿಗೆ ಪ್ರಮುಖ ಬದಲಾವಣೆಗಳಿಗೆ ಸಾಕ್ಷಿಯಾಗಿದೆ. ಐಟಿ ಕ್ಷೇತ್ರದ ಮಹತ್ವವನ್ನು ಬಹಳ ಹಿಂದೆಯೇ ಅರಿತು ಅದರತ್ತ ಹೆಜ್ಜೆ ಹಾಕಿದ ಮೊದಲ ರಾಜ್ಯ ಕೇರಳ. 33 ವರ್ಷಗಳ ಹಿಂದೆ 1990ರಲ್ಲಿ ದೇಶದ ಮೊದಲ ಐಟಿ ಪಾರ್ಕ್ ಅನ್ನು ಅಂದಿನ ಇಕೆ ನಾಯನಾರ್ ಸರ್ಕಾರ ತಿರುವನಂತಪುರದಲ್ಲಿ ಆರಂಭಿಸಿತ್ತು. ಇದೀಗ ದೇಶದ ಮೊದಲ ಡಿಜಿಟಲ್ ಪಾಲಿಟೆಕ್ನಿಕ್ ಕೇರಳದಲ್ಲಿ ಸ್ಥಾಪನೆಯಾಗಿದೆ. ಭಾರತದ ಮೊದಲ ಡಿಜಿಟಲ್ ಸೈನ್ಸ್ ಪಾರ್ಕ್ ಕೂಡ ಕೇರಳದಲ್ಲಿ ತೆರೆಯುತ್ತಿದೆ.

2016 ರಿಂದ, ಕೇರಳದ ಐಟಿ ಕ್ಷೇತ್ರವು ಸಾಟಿಯಿಲ್ಲದ ಪ್ರಗತಿಯನ್ನು ಸಾಧಿಸಿದೆ. 2016ರಲ್ಲಿ ಕೇರಳದ ಸರ್ಕಾರಿ ಐಟಿ ಪಾರ್ಕ್‌ಗಳ ಮೂಲಕ ರಫ್ತು ರೂ. 9,753 ಕೋಟಿ. 2022ರ ವೇಳೆಗೆ ಇದು ರೂ.17,536 ಕೋಟಿಗೆ ಏರಿಕೆಯಾಗಲಿದೆ. ಇದು ಆರು ವರ್ಷಗಳಲ್ಲಿ ಸುಮಾರು ದ್ವಿಗುಣವಾಗಿದೆ. 2016ರಲ್ಲಿ ಸರ್ಕಾರಿ ಐಟಿ ಪಾರ್ಕ್‌ಗಳಲ್ಲಿ ಕಂಪನಿಗಳ ಸಂಖ್ಯೆ 640 ಇದ್ದದ್ದು, 2022ರಲ್ಲಿ 1,106ಕ್ಕೆ ಏರಿಕೆಯಾಗಿದೆ. ಐಟಿ ಉದ್ಯೋಗಿಗಳ ಸಂಖ್ಯೆಯಲ್ಲಿಯೂ ಭಾರಿ ಏರಿಕೆಯಾಗಿದೆ. 2016ರಲ್ಲಿ ಐಟಿ ಪಾರ್ಕ್‌ಗಳಲ್ಲಿ 78,068 ಮಂದಿ ಕೆಲಸ ಮಾಡಿದ್ದರೆ, ಇಂದು ಅದು 1,35,288ಕ್ಕೆ ಏರಿಕೆಯಾಗಿದೆ. 2021-22 ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, 2022-23 ರಲ್ಲಿ IT ರಫ್ತುಗಳಲ್ಲಿ 1,274 ಕೋಟಿ ರೂಪಾಯಿಗಳ ಬೆಳವಣಿಗೆಯನ್ನು ಕೇರಳ ಸಾಧಿಸಿದೆ. ಕೇರಳದಲ್ಲಿ ಕಳೆದ ಒಂದೂವರೆ ವರ್ಷಗಳಲ್ಲಿ 78 ಕಂಪನಿಗಳು 2,68,301 ಚದರ ಅಡಿ ವಿಸ್ತೀರ್ಣದ ಹೊಸ ಐಟಿ ಕಚೇರಿಗಳನ್ನು ತೆರೆದಿವೆ. ಈ ಹಂತದಲ್ಲಿ, ಕೇರಳವು ಜಿಎಸ್‌ಟಿಯನ್ನು ಸರಿಯಾಗಿ ಸಲ್ಲಿಸಲು ಕೇಂದ್ರ ಸರ್ಕಾರ ಮತ್ತು ಕ್ರೆಡಿಟ್ ರೇಟಿಂಗ್ ಮಾಹಿತಿ ಸೇವೆ (CRIS) ನಿಂದ ಅನುಮೋದನೆಯನ್ನು ಪಡೆದುಕೊಂಡಿದೆ. ಜೂನ್ 2023 ರವರೆಗೆ ಕ್ರಿಸ್‌ನಲ್ಲಿ ಪ್ಲಸ್ ಗ್ರೇಡ್ ಮತ್ತೊಂದು ಪ್ರತಿಷ್ಠಿತ ಸಾಧನೆಯಾಗಿದೆ.

13 ಲಕ್ಷ ಕೋಟಿ ರೈಟ್ ಆಫ್-20 ಲಕ್ಷ ಕೋಟಿ ಎನ್.ಪಿ.ಎ...... ಪುಟ 11 ರಿಂದ

ಬಂಡವಾಳದ ಅಗತ್ಯತೆಗಳ ಕುರಿತ ಪ್ರಶ್ನೆಗೆ ಉತ್ತರಿಸುತ್ತ 'ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ, ಭಾರತದಲ್ಲಿನ ಬ್ಯಾಂಕ್‌ಗಳು ಕನಿಷ್ಠ ಬಂಡವಾಳದಿಂದ ಅಪಾಯದ ತೂಕದ ಆಸ್ತಿ ಅನುಪಾತವನ್ನು 9 ಪ್ರತಿಶತದಷ್ಟು ನಿರ್ವಹಿಸುವ ಅಗತ್ಯವಿದೆ' ಎಂದು ಹೇಳಿದ್ದರು.

ಸಾಲ ಕೊಡು, ಮನ್ನಾ ಮಾಡು

ಸಾಲ ಮನ್ನಾ ಮಾಡುವ ಉದ್ದೇಶ ಮೋದಿ ಸರ್ಕಾರಕ್ಕೆ ಇಲ್ಲ ಎನ್ನುವುದಾದರೆ, ಸುಪ್ರೀಂ ಕೋರ್ಟ್ ಸೂಚನೆಯಂತೆ ಸುಸ್ತಿದಾರರ ಹೆಸರು ಬಹಿರಂಗ ಪಡಿಸಲು ನಿರಾಕರಿಸುತ್ತಿರುವುದೇಕೆ? ಜನರಿಗೆ ಈ ಸತ್ಯ ತಿಳಿಯಬೇಕಿದೆ. ಸಾಲ ಕೊಡು, ಮನ್ನಾ ಮಾಡು, ಅದರ ನಷ್ಟ ತುಂಬಿಕೊಳ್ಳಲು ಸರ್ಕಾರದ ಹಣ ಕೊಡು. ಇದೇ ಆಳುವವರ ಇಂದಿನ ನೀತಿಯಾಗಿದೆ. ಇದು ಬ್ಯಾಂಕುಗಳ ವಸೂಲಾಗದ ಸಾಲದ ಪ್ರಮಾಣ (NPA)ವನ್ನು


THE WIRE SUPPORT

POLITICS ECONOMY EXTERNAL AFFAI

RBI Refuses to Release List of Loan Defaulters With Public Banks

The RBI refused to make the list of loan defaulters public despite an order by the Supreme Court in 2015 to make this information public.

May 23, 2017 | PTI

ತಗ್ಗಿಸಿ ಆರ್ಥಿಕ ಪ್ರಗತಿ ಮತ್ತು ಹೂಡಿಕೆಯನ್ನು ಹೆಚ್ಚಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಹೇಳುತ್ತಾರೆ. ಬ್ಯಾಂಕುಗಳೂ ತಮಗೆ ಬರುವ ಲಾಭದ ಬಹುಪಾಲನ್ನು ಈ ನಷ್ಟ ತುಂಬಿಕೊಳ್ಳಲು ಬಳಕೆ ಮಾಡಿಕೊಳ್ಳುತ್ತಿವೆ. ಬ್ಯಾಂಕುಗಳ ಆಯ-ವ್ಯಯ ವರದಿಗಳನ್ನು ನೋಡಿದಾಗ, ವಸೂಲಾಗದ ಸಾಲದ ಪ್ರಮಾಣ ತಗ್ಗಿಸಲು ಬ್ಯಾಂಕುಗಳು ತಮ್ಮ ಆದಾಯದ ಬಹುಪಾಲು ಹಣವನ್ನು ಮೀಸಲಿಟ್ಟು ಅವುಗಳ ಆದಾಯ ಕುಂಠಿತಗೊಂಡ ಬಗ್ಗೆ ತಿಳಿಸಿವೆ.

ರೈಟ್ ಆಫ್ ಮಾಡಿದ ಒಟ್ಟು ಸಾಲದ ಶೇ. 14 ಮಾತ್ರ ವಸೂಲಿ

ಸಾಲ ವಸೂಲಿಗೆ ದಿಟ್ಟ ಕ್ರಮ ಕೈಗೊಂಡು ಬ್ಯಾಂಕುಗಳ ರಕ್ಷಣೆಗೆ ನಿಲ್ಲಬೇಕಾದ ಸರ್ಕಾರ, ಅಂತಹ ಸಾಲಗಳ ಲೆಕ್ಕವನ್ನು NPA ಕಡತದಿಂದ ಅಳಿಸಿ ಹಾಕುವಂತೆ (ರೈಟ್ ಆಫ್) ಬ್ಯಾಂಕುಗಳಿಗೆ ಸೂಚಿಸುತ್ತದೆ. ಸಾಲ ವಸೂಲಿ ಪ್ರಶ್ನೆ ಬಂದಾಗ ವಿಜಯ್ ಮಲ್ಯರ ಸಾಲ ವಸೂಲಿಗೆ ತೆಗೆದು ಕೊಂಡ ಕ್ರಮಗಳ ಕಡೆಗೆ ಬೆರಳು ತೋರಿಸುತ್ತಾರೆ. ರೈಟ್ ಆಫ್ ಮಾಡಿದ ಒಟ್ಟು ಸಾಲದ ಶೇಕಡಾ 14ರಷ್ಟು ಮಾತ್ರ ವಸೂಲಿ ಆಗಿರುವ ವರದಿಗಳಿವೆ. ರೈಟ್ ಆಫ್ ನಿಂದ ಬ್ಯಾಂಕುಗಳಿಗೆ ಆಗುವ ನಷ್ಟದ ಕೆಲ ಪಾಲನ್ನು ತುಂಬಿಕೊಡಲು ಸಾರ್ವಜನಿಕರ ತೆರಿಗೆ ಹಣವನ್ನು ಸರ್ಕಾರ ಬಳಕೆ ಮಾಡಿಕೊಳ್ಳುತ್ತಿದೆ. ಬ್ಯಾಂಕುಗಳು ತನ್ನ ಗ್ರಾಹಕರಿಂದ ಹೊಸ ಹೊಸ ಶುಲ್ಕಗಳನ್ನು ಹೇರುವ ಮೂಲಕವೂ ಇದರ ನಷ್ಟ ತುಂಬಿಕೊಳ್ಳಲು ಮುಂದಾಗಿ, ಗ್ರಾಹಕರನ್ನು ಸುಲಿಗೆ ಮಾಡತೊಡಗಿವೆ. ಸರ್ಕಾರದ ಈ ಕೊಡುಗೆಯ ಹಣದಲ್ಲಿ ಸಾರ್ವಜನಿಕ ಉದ್ದಿಮೆಗಳ ಷೇರು ಮಾರಾಟದಿಂದ ಸಂಗ್ರಹಿಸಿದ ಹಣವೂ ಇದೆ. (ಷೇರು ಖರೀದಿಸುವವರೂ ಅದೇ ವಂಚಕ ಖಾಸಗಿ ಉದ್ಯಮಪತಿಗಳೆ). ಅಂದರೆ, ಶ್ರೀಮಂತ ಉದ್ಯಮಪತಿಗಳು ಮಾಡಿದ ಸಾಲ ತೀರಿಸಲು ಸಾರ್ವಜನಿಕರ ಆಸ್ತಿ ಮಾರುತ್ತಾರೆ ಮತ್ತು ಜನಸಾಮಾನ್ಯರ ಮೇಲೆ ತೆರಿಗೆ ಹೆಚ್ಚಳ ಮಾಡುತ್ತಾರೆ ಎಂದಾಯಿತು. ಇಂಥ ವಂಚಕರು ಸಾಲ ಪಡೆದು ಉದ್ದೇಶ ಪೂರ್ವಕವಾಗಿ ಹಿಂತಿರುಗಿಸುತ್ತಿಲ್ಲ. ಮಾತ್ರವಲ್ಲ, ಮತ್ತೆ ಮತ್ತೆ ಸಾಲ ಪಡೆಯುತ್ತಲೇ ಇದ್ದಾರೆ. ವಂಚಕರು ದುರುದ್ದೇಶದಿಂದಲೇ ಸರಿಯಾದ ಭದ್ರತೆಯನ್ನೂ ಕೊಡದೆ ಸಾಲ ಪಡೆಯುತ್ತಾರೆ. ಈ ಕಾರಣದಿಂದ ಸಾಲ ವಸೂಲಿಗೆ ಅವರ ಇತರೆ ಆಸ್ತಿ ಜಪ್ತಿಮಾಡಲೂ ಕಾನೂನಿನ ತೊಡಕಾಗುವಂತೆ ನೋಡಿಕೊಳ್ಳುತ್ತಾರೆ.

ಜನತೆ ಎಚ್ಚೆತ್ತುಕೊಂಡು ಪ್ರತಿಭಟಿಸದಿದ್ದರೆ, ಎಲ್ಲಾ ಸಾರ್ವಜನಿಕ ಆಸ್ತಿಗಳನ್ನು ಈ ಕೆಲವೇ ವಂಚಕ ಶ್ರೀಮಂತ ಕುಳಗಳು ತಮ್ಮ ವಶಕ್ಕೆ ಪಡೆಯುತ್ತವೆ. ಮೋದಿ ಸರ್ಕಾರ ವಂಚಕ ಉದ್ಯಮಿಗಳ ಹೆಸರು ಬಹಿರಂಗ ಪಡಿಸುತ್ತದೆ ಎಂಬ ನಂಬಿಕೆಯಂತೂ ಇಲ್ಲ. ತಮ್ಮ ಪೋಷಕರನ್ನು ಶಿಕ್ಷೆಗೆ ಗುರಿಪಡಿಸಲು, ಅವರಿಗೆ ನಷ್ಟ ಆಗುವಂತಹ ಕೆಲಸಗಳನ್ನು ಖಖಖ ಮತ್ತದರ ನಿಷ್ಠಾವಂತ ಸ್ವಯಂ ಸೇವಕ ಮೋದಿ ಎಂದೂ ಮಾಡುವುದಿಲ್ಲ. ಆದೇಶ ಕೊಟ್ಟ ನ್ಯಾಯಾಧೀಶರ ವರ್ಗಾವಣೆ ನಡೆಯುತ್ತದೆ, ಆದೇಶ ನೀಡಿದ ಮಾಹಿತಿ ಹಕ್ಕು ಆಯೋಗದ ಅಧಿಕಾರಿಗಳ ಎತ್ತಂಗಡಿ ಆಗುತ್ತದೆ. ಇದೇ ಸತ್ಯ.

ತುರ್ಕಿ: ಎರ್ಡೋಗಾನ್/ ಎಕೆಪಿ ಪುನರಾಯ್ಕೆ, 'ಚುನಾಯಿತ ಅಧಿಕಾರಶಾಹಿ'ಯ ಸಫಲ ಮಾದರಿ?

ತುರ್ಕಿಯ ಇತ್ತೀಚಿನ ಚುನಾವಣೆ ಆ ದೇಶದೊಳಗೂ, ಜಾಗತಿಕವಾಗಿಯೂ ಅಭೂತಪೂರ್ವ ಕುತೂಹಲ, ನಿರೀಕ್ಷೆ, ಆತಂಕಗಳನ್ನು ಮೂಡಿಸಿತ್ತು. ಎರ್ಡೋಗಾನ್ ಮತ್ತು ಅವರ ಬಲಪಂಥೀಯ ಇಸ್ಲಾಮಿಕ್ ಪಕ್ಷದ ಕಳೆದ ಎರಡು ದಶಕಗಳ ಆಡಳಿತ, ಜಗತ್ತಿನ ಹಲವೆಡೆ ಸಾಮಾನ್ಯವಾಗುತ್ತಿರುವ 'ಚುನಾಯಿತ ಅಧಿಕಾರಶಾಹಿ' (ಇಲೆಕ್ಟೊರಲ್ ಅಟೊಕ್ರಸಿ') ಯ 'ಸಫಲ ಮಾದರಿ' ಯಾಗಿರುವುದು ಒಂದು ಕಾರಣ. ಎರ್ಡೋಗಾನ್ ಪುನರಾಯ್ಕೆ 'ಚುನಾವಣಾ ಅಧಿಕಾರಶಾಹಿ'ಯ ಸಫಲ ಮಾದರಿಯಾಗಿ ಜಗತ್ತಿನಾದ್ಯಂತ ಪ್ರಗತಿಪರ ಶಕ್ತಿಗಳಿಗೆ ಆತಂಕ ಹುಟ್ಟಿಸುವಂಥದ್ದೇ. ಭಾರತದ ಮೋದಿ/ಬಿಜೆಪಿಯ ಮತ್ತು ಎರ್ಡೋಗಾನ್/ಎಕೆಪಿಯ ರಾಜಕಾರಣದ ಕಣ್ಣಿಗೆ ಹೊಡೆಯುವ ಹಲವು ಸಾಮ್ಯತೆಗಳ ಬೆಳಕಿನಲ್ಲಿ ಇದನ್ನು ಹೆಚ್ಚು ಆಳವಾಗಿ ವಿಶ್ಲೇಷಿಸುವ ಅಗತ್ಯವಿದೆ.

ವಸಂತರಾಜ ಎನ್.ಕೆ

ಮೇ 28ರಂದು ನಡೆದ ಎರಡನೆಯ ಸುತ್ತಿನ ಅಧ್ಯ ಕ್ಷೀಯ ಚುನಾವಣೆಯಲ್ಲಿ, ಕಳೆದ ಎರಡು ದಶಕಗಳಿಂದ ತುರ್ಕಿಯನ್ನು ಆಳುತ್ತಿರುವ ರೆಸಿಪ್ ತಯ್ಯಿಪ್ ಎರ್ಡೋಗಾನ್ ಸತತ 5ನೆಯ ಬಾರಿಗೆ ದೇಶದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಅವರು ತಮ್ಮ ಪ್ರತಿಸ್ಪರ್ಧಿ ಕೆಮಾಲ್ ಕಿಲಿಕ್ ದಾರೊಗ್ಲು ಅವರನ್ನು 23 ಲಕ್ಷಗಳಷ್ಟು (ಶೇ.4.36) ಮತಗಳ ಅಂತರದಿಂದ ಸೋಲಿಸಿದ್ದಾರೆ. ಎರ್ಡೋಗಾನ್ 2.78 ಕೋಟಿ (52.18%) ಮತ ಪಡೆದರೆ, ಕೆಮಾಲ್ 2.55 ಕೋಟಿ (47.82%) ಮತ ಪಡೆದಿದ್ದಾರೆ. ತುರ್ಕಿಯ ಅಧ್ಯಕಕ್ಷೀಯ ಚುನಾವಣೆಯಲ್ಲಿ ಮೊದಲ ಬಾರಿಗೆ ಎರಡನೆಯ ಸುತ್ತು ಅಗತ್ಯವಾಗಿದೆ. ತುರ್ಕಿಯ ಅಧ್ಯಕ್ಷೀಯ ಚುನಾವಣಾ ವಿಧಾನದ ಪ್ರಕಾರ ಮೊದಲ ಸುತ್ತಿನಲ್ಲಿ ಯಾವ ಅಭ್ಯರ್ಥಿಗೂ ಶೇ.50ಕ್ಕಿಂತ ಹೆಚ್ಚು ಮತ ಬರದಿದ್ದರೆ, ಅತಿ ಹೆಚ್ಚು ಮತ ಪಡೆದ ಮೊದಲ ಎರಡು ಅಭ್ಯರ್ಥಿಗಳು ಮಾತ್ರ ಭಾಗವಹಿಸುವ ಎರಡನೆಯ ಸುತ್ತಿನ ಚುನಾವಣೆ ಅಂತಿಮ ಫಲಿತಾಂಶ ನಿರ್ಧರಿಸುತ್ತದೆ. ಎರ್ಡೋಗಾನ್ ಮೊದಲ ಸುತ್ತಿನಲ್ಲಿಯೇ ಆಯ್ಕೆಯಾಗಲು ಬೇಕಾದ ಮತಗಳಿಗಿಂತ ಕೇವಲ 0.50% ರಷ್ಟು ಮತಗಳು ಕಡಿಮೆಯಾಗಿತ್ತು.

ಎರ್ಡೋಗಾನ್ ಇಸ್ಲಾಮಿಕ್ ಬಲಪಂಥೀಯ ಪಕ್ಷವಾದ 'ಜಸ್ಟೀಸ್ ಅಂಡ್ ಡೆವಲೆಪ್ ಮೆಂಟ್ ಪಾರ್ಟಿ' (ಎಕೆಪಿ) ಯ ನಾಯಕತ್ವದ 4 ಪಕ್ಷಗಳ 'ಜನತಾ ಒಕ್ಕೂಟ'ದ ಅಭ್ಯರ್ಥಿಯಾಗಿದ್ದರು.ಕೆಮಾಲ್ ಪ್ರಮುಖ ವಿರೋಧ ಪಕ್ಷವಾದ ರಿಪಬ್ಲಿಕನ್ ಪೀಪಲ್ಸ್ ಪಾರ್ಟಿ ನಾಯಕತ್ವದ ಹೆಚ್ಚು ಕಡಿಮೆ ಎಲ್ಲ ವಿರೋಧ ಪಕ್ಷಗಳ 'ರಾಷ್ಟ್ರೀಯ ಒಕ್ಕೂಟ'ದ ಪರವಾಗಿ ಸ್ಪರ್ಧಿಸಿದ್ದರು. ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸಿದ್ದ ತುರ್ಕಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ 'ಸಮಾಜವಾದಿ ಶಕ್ತಿಗಳ ಒಕ್ಕೂಟ' ಮತ್ತು ಗ್ರೀನ್ ಪಾರ್ಟಿ ನಾಯಕತ್ವದ 'ಲೇಬರ್ ಒಕ್ಕೂಟ' ಗಳು ಸಹ ಅಧ್ಯಶಕ್ಷೀಯ ಚುನಾವಣೆಯಲ್ಲಿ ಎರಡೂ ಸುತ್ತುಗಳಲ್ಲಿ ಕೆಮಾಲ್ ಅವರನ್ನು ಬೆಂಬಲಿಸಿದ್ದವು. ಮೊದಲ ಸುತ್ತಿನಲ್ಲಿ ವಿಕ್ಟರಿ ಪಾರ್ಟಿಯ ನಾಯಕತ್ವದ ವಲಸೆಗಾರ–ವಿರೋಧೀ ಉಗ್ರ ರಾಷ್ಟ್ರೀಯವಾದಿ 'ಪ್ರಾಚೀನ ಒಕ್ಕೂಟ'ದ ಒಗಾನ್ ಸ್ಪರ್ಧಿಸಿದ್ದು ಅವರು ಎರಡನೆಯ ಸುತ್ತಿನಲ್ಲಿ ಎರ್ಡೋಗಾನ್ ಅವರಿಗೆ ಬೆಂಬಲ ಘೋಷಿಸಿದ್ದರು.

ಮೇ 14ರಂದು ನಡೆದ ಮೊದಲ ಸುತ್ತಿನಲ್ಲಿ ಎರ್ಡೋಗಾನ್ 2.71 ಕೋಟಿ (49.52%), ಕೆಮಾಲ್ 2.45 ಕೋಟಿ (44.88%), ಒಗಾನ್ 28.3 ಲಕ್ಷ (5.17%) ಮತ ಗಳಿಸಿದ್ದರು. ಮೊದಲ ಸುತ್ತಿಗೆ (87.04%) ಹೋಲಿಸಿದರೆ ಎರಡನೆಯ ಸುತ್ತಿನಲ್ಲಿ (84.15%) ಮತದಾನ ಸುಮಾರು 8 ಲಕ್ಷದಷ್ಟು ಕಡಿಮೆಯಾಗಿತ್ತು. ಎರಡನೆಯ ಸುತ್ತಿನಲ್ಲಿ ಎರ್ಡೋಗಾನ್ 8 ಲಕ್ಷದಷ್ಟು ಮತ್ತು ಕೆಮಾಲ್ 10 ಲಕ್ಷದಷ್ಟು ಹೆಚ್ಚು ಮತ ಪಡೆದಿದ್ದರು. ಮತಗಳ ಅಂತರ 26 ಲಕ್ಷದಿಂಧ 23 ಲಕ್ಷಕ್ಕೆ ಇಳಿದಿತ್ತು.

ಮೇ 14ರಂದು ಮೇ 14ರಂದು ಅಧ್ಯಕ್ಷೀಯ ಚುನಾವಣೆಗಳ ಮೊದಲ ಸುತ್ತಿನ ಜತೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಸಹ ಎರ್ಡೋಗಾನ್ ಅವರ 'ಜನತಾ ಒಕ್ಕೂಟ' 49.91% ಮತ ಗಳಿಸಿ 600 ರಲ್ಲಿ 323 ಸೀಟುಗಳನ್ನು ಪಡೆದು ನಿಚ್ಚಳ ಬಹುಮತ ಪಡೆದಿದೆ. ಆದರೆ 2018 ಚುನಾವಣೆಗೆ ಹೋಲಿಸಿದರೆ 21 ಸೀಟುಗಳನ್ನು ಕಳೆದುಕೊಂಡಿದೆ. ಪ್ರಮುಖ ವಿರೋಧ ಪಕ್ಷಗಳ 'ರಾಷ್ಟ್ರೀಯ ಒಕ್ಕೂಟ' 35.35 % ಮತ ಪಡೆದು 212 ಸೀಟುಗಳನ್ನು ಪಡೆದಿದೆ. 2018 ಚುನಾವಣೆಗೆ ಹೋಲಿಸಿದರೆ 23 ಸೀಟುಗಳನ್ನು ಹೆಚ್ಚಿಸಿಕೊಂಡಿದೆ. 'ಲೇಬರ್ ಒಕ್ಕೂಟ' 65 ಸೀಟು 10.67% ಮತ ಗಳಿಸಿ ಮೂರನೇಯ ಸ್ಥಾನದಲ್ಲಿ ಇದೆ. ಈ ಬಾರಿಯ ಚುನಾವಣೆಯಲ್ಲಿ ಒಂದು ಪಕ್ಷ ಅಥವಾ ಕೂಟ ಕ್ಕೆ ಪಾರ್ಲಿಮೆಂಟ್ ಪ್ರವೇಶಿಸಲು ಬೇಕಾದ ಕನಿಷ್ಠ ಮತಪ್ರಮಾಣವನ್ನು 10ರಿಂದ 7% ಗೆ ಇಳಿಸಿದ್ದು, ಇದರಿಂದಾಗಿ 8 ಪಕ್ಷಗಳು ಪಾರ್ಲಿಮೆಂಟನ್ನು ಪ್ರವೇಶಿಸಿವೆ.


'ಇಸ್ಲಾಮಿಕ್ ಬಹುಸಂಖ್ಯಾತವಾದ' ಮತ್ತು 'ಉಗ್ರ ರಾಷ್ಟ್ರವಾದ'ದ ಕಾಕ್ ಟೈಲ್

ಆಂತರಿಕವಾಗಿ ತುರ್ಕಿಯ ಸೆಕ್ಯುಲರ್ ಸಂವಿಧಾನಿಕ ಪ್ರಜಾಪ್ರಭುತ್ವವನ್ನು ಬಳಸಿಕೊಂಡೇ



ಎರ್ಡೋಗಾನ್ ಮತ್ತು ಅವರ ಎಕೆಪಿ ಪಕ್ಷ ಅಧಿಕಾರಕ್ಕೆ ಬಂದು 'ಇಸ್ಲಾಮಿಕ್ ಧರ್ಮ ಆಧಾರಿತ ಬಹುಸಂಖ್ಯಾತವಾದ' ಮತ್ತು 'ಉಗ್ರ ರಾಷ್ಟ್ರವಾದ'ದ ಮಿಶ್ರಣವನ್ನು ಬಳಸಿ ತನ್ನ ಸಾಮೂಹಿಕ ನೆಲೆಯನ್ನೂ ಕಾದುಕೊಳ್ಳುತ್ತಾ ವಿಸ್ತರಿಸುತ್ತಾ ಬಂದಿದೆ. ವಿರೋಧ ಪಕ್ಷಗಳ, ವಿರೋಧಿ ಗುಂಪುಗಳ, ಟ್ರೇಡ್ ಯೂನಿಯನ್ ನಂತಹ ಜನಸಂಘಟನೆಗಳ ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡುತ್ತಾ ಬಂದಿದೆ. ಅವುಗಳ ಮೇಲೆ ನಿಷೇಧಗಳನ್ನೂ ಹೇರಿದೆ. ಮಾಧ್ಯವಮಗಳ ಮೇಲೆ ಭಾರೀ ಹಿಡಿತ ಸಾಧಿಸಿ ಯಾವುದೇ ರೀತಿಯ ಭಿನ್ನಮತವನ್ನು ತುಳಿಯುತ್ತಾ ಬಂದಿದೆ. ಗಮನಾರ್ಹ ಸಂಖ್ಯೆಯಲ್ಲಿರುವ ಕುರ್ದಿಶ್ ಅಲ್ಪಸಂಖ್ಯಾತರ ಹಕ್ಕುಗಳನ್ನು ನಿರಾಕರಿಸುತ್ತಾ ಅವರ ಹೋರಾಟಗಳನ್ನು ಅತ್ಯಂತ ಕ್ರೂರವಾಗಿ ದಮನಿಸುತ್ತಾ ಬಂದಿದೆ. ಪ್ರಾಂತ್ಯಗಳ ಮತ್ತು ಸ್ಥಳೀಯ ಸಂಸ್ಥೆಗಳನ್ನು ಸಂಖ್ಯಾತ್ಮಕವಾಗಿ ಗುಣಾತ್ಮಕವಾಗಿ ಕಡಿತಗೊಳಿಸುತ್ತಾ ಅಧಿಕಾರದ ಕೇಂದ್ರೀಕರಣವನ್ನು ಸ್ಥಾಪಿಸುತ್ತಾ ಬಂದಿದೆ. ಪಾರ್ಲಿಮೆಂಟರಿ ವ್ಯವಸ್ಥೆಯನ್ನು 2017ರಲ್ಲಿ ಒಂದು ಜನಮತ ಸಂಗ್ರಹದಲ್ಲಿ ಅಲ್ಪ ಬಹುಮತದ ಆಧಾರದ ಮೇಲೆ ಅಧ್ಯಕ್ಷೀಯ ಮಾದರಿಗೆ ಬದಲಾಯಿಸಲಾಯಿತು. ಅಧ್ಯಕ್ಷೀಯ ಮಾದರಿ ಹೆಚ್ಚು ಕೇಂದ್ರೀಕೃತ ಎಂಬುದು 'ಚುನಾಯಿತ ಅಧಿಕಾರಶಾಹಿ'ಗೆ ಉತ್ತೇಜಕವಾದ ವ್ಯವಸ್ಥೆ. 2014ರಲ್ಲಿ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಚುನಾಯಿತ ಅಧ್ಯಕ್ಷರಾಗಿದ್ದ ಎರ್ಡೋಗಾನ್ ತಮ್ಮ ಅವಧಿ ಮುಗಿಯುವ ಮೊದಲು ಸಂವಿಧಾನ ಬದಲಾಯಿಸಿ 2018ರಲ್ಲಿ ಮತ್ತೆ ಅಧ್ಯಕ್ಷರಾದರು.

ಆಳುವ ಎಕೆಪಿ ಪಕ್ಷ ಆಧುನಿಕ ತುರ್ಕಿಯ ಸ್ಥಾಪಕನಾಗಿದ್ದ ಕೆಮಾಲ್ ಅತಾತುರ್ಕ್ ನಾಯಕತ್ವದಲ್ಲಿ ಸ್ಥಾಪಿತವಾಗಿದ್ದ ಪ್ರಭುತ್ವ ಮತ್ತು ಧರ್ಮಗಳ ಕಟ್ಟುನಿಟ್ಟಿನ ಸಾಂವಿಧಾನಿಕ ಪ್ರತ್ಯೇಕತೆಯನ್ನು ಪ್ರಾಯೋಗಿಕವಾಗಿ ಮುರಿಯುತ್ತಾ ಬಂದಿದೆ. ಪ್ರಭುತ್ವದ ವಿವಿಧ ಅಂಗಗಳಲ್ಲಿದ್ದ ಸೆಕ್ಯುಲರ್ ವ್ಯಕ್ತಿಗಳನ್ನು ಗುರಿಯಿಟ್ಟು ಅಪ್ರಜಾಸತ್ತಾತ್ಮಕವಾಗಿ ಕಿತ್ತು ಹಾಕಲಾಗಿದೆ. ಸಾಮಾಜಿಕ ಸಂಪ್ರದಾಯಶರಣತೆಯನ್ನು ಹೆಚ್ಚೆಚ್ಚು ಉತ್ತೇಜಿಸಲು ಧಾರ್ಮಿಕ ಸಂಸ್ಥೆಗಳನ್ನು ಬಳಸುತ್ತಾ ಬಂದಿದೆ. ಧಾರ್ಮಿಕ ಸಂಸ್ಥೆಗಳನ್ನು ನೇರವಾಗಿ ರಾಜಕಾರಣಕ್ಕೆ ಸಹ ಬಳಸುತ್ತಾ ಬಂದಿದೆ. ಮಧ್ಯಯುಗದಲ್ಲಿ ಯುರೇಶ್ಯಾದಲ್ಲಿ ಸ್ಥಾಪಿತವಾಗಿದ್ದ ಒಟ್ಟೊಮಾನ್ ಸಾಮ್ರಾಜ್ಯದ ಗತಕಾಲವನ್ನು ವೈಭವೀಕರಿಸುವ ಮತ್ತು ಅದನ್ನು ಮರುಕಳಿಸುವುದರ ಮೇಲೆ ಆಧಾರಿತ 'ರಾಷ್ಟ್ರವಾದ' ವನ್ನು ತನ್ನ ಮುಖ್ಯ ನೆಲೆಯಾಗಿಸುತ್ತಾ ಬಂದಿದೆ.



ಇದಕ್ಕಾಗಿ ಚಾರಿತ್ರಿಕ ಸ್ಮಾರಕಗಳನ್ನು ರಾಜಕೀಯ ದಾಳವಾಗಿ ಬಳಸುತ್ತಾ ಬಂದಿದೆ. ಇಸ್ತಾನ್ ಬುಲ್ ನಲ್ಲಿರುವ 6ನೆಯ ಶತಮಾನದ 'ಹಗಿಯಾ ಸೋಫಿಯಾ' ಎಂಬ ಒರ್ಥೊಡಾಕ್ಸ್ ಚರ್ಚನ್ನು ಮತ್ತೆ ಮಸೀದಿಯಾಗಿಸಿದ್ದು ಉತ್ತಮ ಉದಾಹರಣೆ. ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಕಟ್ಟಡದ ಒಳಾಂಗಣ ವಿಸ್ತೀರ್ಣ ಇರುವ ಬೈಜಂಟೀನ್ ವಾಸ್ತುಶಿಲ್ಪದ ಅತ್ಯುತ್ತಮ ಮಾದರಿಯಾಗಿದ್ದು ಕ್ರಿ.ಶ 537 ರಲ್ಲಿ ಕಟ್ಟಲಾಗಿದ್ದ ಈ ಚರ್ಚನ್ನು ಒಟ್ಟೊಮಾನ್ ಸಾಮ್ರಾಜ್ಯದ ಕಾಲದಲ್ಲಿ 1453ರಲ್ಲಿ ಮಸೀದಿಯಾಗಿ ಪರಿವರ್ತಿಸಲಾಗಿತ್ತು. 1935ರಲ್ಲಿ ತುರ್ಕಿ ಸೆಕ್ಯುಲರ್ ರಿಪಬ್ಲಿಕ್ ಆದ ನಂತರ ಅದನ್ನು ಮ್ಯೂಸಿಯಂ ಆಗಿ ಪರಿವರ್ತಿಸಲಾಗಿದ್ದು ಅತ್ಯಂತ ಹೆಚ್ಚು ದೇಶ–ವಿದೇಶಗಳ ಪ್ರವಾಸಿಗರು ಭೇಟಿ ನೀಡಿದ ತುರ್ಕಿಯ ಪ್ರವಾಸಿ ತಾಣವಾಗಿತ್ತು. ವಿರೋಧ ಪಕ್ಷಗಳ, ಯುನೆಸ್ಕೊ ದಂತಹ ಜಾಗತಿಕ ಸಂಸ್ಥೆಗಳ ವಿರೋದದ ನಡುವೆ 2020ರಲ್ಲಿ ಎಕೆಪಿ ಸರಕಾರ ಇದನ್ನು ಮತ್ತೆ ಮಸೀದಿಯಾಗಿ ಪರಿವರ್ತಿಸಿತು.

ತುರ್ಕಿ ಜನತೆಗೆ ಸಂಕಷ್ಟಗಳ ಸರಮಾಲೆ

ಎಕೆಪಿ ಯ ಆರ್ಥಿಕ ನೀತಿ ನವ–ಉದಾರವಾದಿ ಬಂಡವಾಳಶಾಹಿಯನ್ನು ಬೆಂಬಲಿಸುವಂಥದೇ. ಈ ನೀತಿಗಳು ಜನರ ಆರ್ಥಿಕ–ಸಾಮಾಜಿಕ ಸಮಸ್ಯೆಗಳಿಗೆ ಯಾವುದೇ ನಿಜವಾದ ಪರಿಹಾರವನ್ನು ಕೊಡದೆನೇ, ಹೆಚ್ಚಾಗಿ ಅವನ್ನು ಉಲ್ಬಣಿಸುತ್ತಾ ಬಂದಿವೆ. ಅಗ್ಗದ ಕಾರ್ಮಿಕ ಶ್ರಮದ ಮೇಲೆ ಆಧಾರಿತವಾದ ಅಗ್ಗದ ಸರಕು–ಸೇವೆಗಳನ್ನು ಯುರೋಪಿಯನ್ ಮಾರುಕಟ್ಟೆಗೆ ರಫ್ತು ಮಾಡುವುದರ ಮೇಲೆ ತುರ್ಕಿಯ ಆರ್ಥಿಕತೆ ನಿಂತಿದೆ. ಶೇ.12 ರಷ್ಟು ಬಡತನವಿರುವ ಅದರ ಆಂತರಿಕ ಮಾರುಕಟ್ಟೆ ಸ್ಥಗಿತವಾಗಿದೆ, ಅದು ಯುರೋ ಕೂಟದ ಪೂರ್ಣ ಸದಸ್ಯ ದೇಶವಾಗುವ ಆಕಾಂಕ್ಷೆ ಹೊಂದಿದೆ. ಆದರೆ ಯುರೋ ಕೂಟ ತುರ್ಕಿಗೆ ಷರತ್ತುಗಳನ್ನು ವಿಧಿಸುತ್ತಾ ಮೂಗಿಗೆ ತುಪ್ಪ ಸವರುತ್ತಾ ಅದನ್ನು ಹೊರಗಿಟ್ಟಿದೆ. ಇತ್ತೀಚಿನ ನವ–ಉದಾರವಾದಿ ಬಂಡವಾಳಶಾಹಿ ಮತ್ತು ಯುರೋಪಿನ ತೀವ್ರ ಬಿಕ್ಕಟ್ಟು ತುರ್ಕಿಗೆ ಹೆಚ್ಚಿನ ಆಘಾತ ಕೊಟ್ಟಿದೆ.

ಕಳೆದ ಒಂದು ವರ್ಷವಂತೂ ತುರ್ಕಿ ಜನತೆಗೆ ಸಂಕಷ್ಟಗಳ ಸರಮಾಲೆಯನ್ನೇ ತಂದಿತ್ತು. ಆಗಲೇ ತುರ್ಕಿ ತೀವ್ರ ಬೆಲೆಏರಿಕೆ, ನಿರುದ್ಯೋಗ, ಹಣದುಬ್ಬರವನ್ನು ಎದುರಿಸುತ್ತಿತ್ತು. 2022 ರ ಒಂದು ವರ್ಷದಲ್ಲೇ ಈರುಳ್ಳಿ ಬೆಲೆ ಆರು ಪಟ್ಟು ಆಗಿದೆ. ಆಹಾರ ವಸ್ತುಗಳ ಬೆಲೆಏರಿಕೆ ದರ 2022ರಲ್ಲಿ ಶೇ.85 ರಷ್ಟಿದ್ದು, ಈಗ ಶೇ.44 ಆಗಿದೆ. ಇದು ಇತ್ತೀಚೆಗಿನ ಜಗತ್ತಿನಲ್ಲೇ ಅತ್ಯಂತ ಹೆಚ್ಚು. ಮತ್ತು ತುರ್ಕಿಯಲ್ಲೇ ಕಳೆದ 25 ವರ್ಷಗಳಲ್ಲೇ ಅತ್ಯಂತ ಹೆಚ್ಚಿನ ಬೆಲೆಏರಿಕೆಯ ದರ. ತುರ್ಕಿಯ ನಾಣ್ಯ ಲಿರಾ 2022ರಲ್ಲಿ ಶೇ.30 ರಷ್ಟು ತನ್ನ ಮೌಲ್ಯ ಕಳೆದುಕೊಂಡಿದೆ. ನಿರುದ್ಯೋಗ ದರ ಶೇ.10 ರಷ್ಟಿತ್ತು. ಇದು ಸಾಲದೆಂಬಂತೆ ಈ ವರ್ಷ ತುರ್ಕಿಯನ್ನು ಬಾಧಿಸಿದ ಭೂಕಂಪ ಭಾರಿ ಹಾನಿ ತಂದಿದೆ. ಸುಮಾರು 50 ಸಾವಿರ ಜನ ಸತ್ತರು. ಲಕ್ಷಾಂತರ ಜನ ಗಾಯಗೊಂಡರು, ನಿರಾಶ್ರಿತರಾದರು, ಬಹುಮಹಡಿ ಕಟ್ಟಡಗಳ ನಿರ್ಮಾಣಗಳ ಮೇಲೆ ಇದ್ದ ಕಟ್ಟುಪಾಡು, ನಿರ್ಬಂಧಗಳನ್ನು ಎಕೆಪಿ ಸರಕಾರ ಸಡಿಲಿಸಿದ್ದು ಭೂಕಂಪ ಇಷ್ಟು ಕಷ್ಟ–ನಷ್ಟ ಉಂಟು ಮಾಡಲು ಕಾರಣವಾಯಿತು ಪರಿಹಾರ ಕ್ರಮಗಳನ್ನು ಸಹ ಎರ್ಡೋಗಾನ್ ಸರಕಾರ ಯುದ್ಧೋಪಾದಿಯಲ್ಲಿ ಮಾಡಲಿಲ್ಲ, ಎಂಬ ತೀವ್ರ ಟೀಕೆ ವ್ಯಕ್ತವಾಗಿದೆ.

'ಈರುಳ್ಳಿ, ಆಲೂಗಡ್ಡೆಗಾಗಿ ಒಬ್ಬ ಒಳ್ಳೆಯ ನಾಯಕನನ್ನು ಬಲಿಗೊಡಬೇಡಿ'

ಅಧ್ಯಕ್ಷೀಯ ಚುನಾವಣೆಯಲ್ಲಿ ಹೆಚ್ಚಿನ ವಿರೋಧ ಪಕ್ಷಗಳು ಜಂಟಿಯಾಗಿ ಒಬ್ಬ ಅಭ್ಯರ್ಥಿಯನ್ನು ಬೆಂಬಲಿಸಿದ್ದವು. ವಿರೋಧ ಪಕ್ಷಗಳ ಮೇಲೆ ಇದ್ದ ತೀವ್ರ ನಿರ್ಬಂಧಗಳನ್ನು ಎದುರಿಸಿ ಸಾಕಷ್ಟು ವ್ಯಾಪಕ ಪ್ರಚಾರ ನಡೆಸಿದ್ದವು. ಎಲ್ಲರನ್ನೂ ಬಾಧಿಸಿದ್ದ ತೀವ್ರ ಬೆಲೆಏರಿಕೆಯ ಮೇಲೆ ಕೇಂದ್ರೀಕರಿಸಿ 'ಈರುಳ್ಳಿ, ಆಲೂಗಡ್ಡೆ ಮೇಲೆ ಮೇಲಕ್ಕೆ, ಎರ್ಡೋಗಾನ್ ಹೊರಕ್ಕೆ' ಎಂಬ ಘೋಷಣೆ ವ್ಯಾಪಕವಾಗಿ ಕೇಳಿ ಬಂದಿದ್ದವು. 'ಈರುಳ್ಳಿ, ಆಲೂಗಡ್ಡೆಗಾಗಿ ಒಬ್ಬ ಒಳ್ಳೆಯ ನಾಯಕನನ್ನು ಬಲಿಗೊಡಬೇಡಿ' ಎಂದು ಎರ್ಡೋಗಾನ್ ಮತ್ತೆ ಮತ್ತೆ ಹೇಳಬೇಕಾಗುವ ಮಟ್ಟಿಗೆ ಅದು ಪರಿಣಾಮಕಾರಿಯಾಗಿತ್ತು ಕೂಡಾ. ಹಾಗಾದರೆ ಎರ್ಡೋಗಾನ್ ಎರಡನೆಯ ಸುತ್ತಿನಲ್ಲೂ, ಅಲ್ಪ ಬಹುಮತದಿಂದಲಾದರೂ ಗೆದ್ದಿದ್ದು ಹೇಗೆ?

ಎರ್ಡೋಗಾನ್ ನಂತಹ ನಾಯಕನ ವಿರುದ್ಧ ನೇರ ಸ್ಪರ್ಧೆಯನ್ನು ಎರಡನೆಯ ಸುತ್ತಿಗೆ ಎಳೆದದ್ದು ಕಡಿಮೆ ಸಾಧನೆಯೇನಲ್ಲ. ಅದಕ್ಕೆ ಆಡಳಿತ–ವಿರೋಧಿ ಅಲೆ ಮತ್ತು ವಿರೋಧ ಪಕ್ಷಗಳ ಐಕ್ಯತೆ ಕಾರಣವಾಗಿತ್ತು. ಅಲ್ಲದೆ ಅಲ್ಪ ಬಹುಮತ ಸಾಧಿಸುವಲ್ಲಿ ಆಳುವ ಒಕ್ಕೂಟದ ಇತರ ಬಲಪಂಥೀಯ, ಉಗ್ರ ಬಲಪಂಥೀಯ ಪಕ್ಷಗಳ ಮತ್ತು ಮೊದಲ ಸುತ್ತಿನ ಮೂರನೆಯ ಅಭ್ಯರ್ಥಿಯ ಕೊಟ್ಟ ಬೆಂಬಲ ಗಮನಾರ್ಹವಾಗಿತ್ತು. ಮೊದಲನೆಯ ಸುತ್ತಿನ ಸೋಲು ಮತ್ತು ಎರ್ಡೋಗಾನ್ ಗೆ ಮೂರನೆಯ ಅಭ್ಯರ್ಥಿಯ ಬೆಂಬಲದಿಂದ ನಿರಾಸೆಗೊಂಡ ಕೆಮಾಲ್ ಬೆಂಬಲಿಗರು ಎರಡನೆಯ ಸುತ್ತಿನಲ್ಲಿ ಮತದಾನದಲ್ಲಿ ಭಾಗವಹಿಸದಿರುವ ಸಾಧ್ಯಬತೆ ಸಹ ಇದೆ. ಎರಡನೆಯ ಸುತ್ತಿನಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಿತ್ತು. ಕೆಮಾಲ್ ಹೆಚ್ಚಿನ ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿಯಾಗಿದ್ದರೂ ಹೆಚ್ಚಿನ ಆಡಳಿತ ಅನುಭವವಿರುವ ಜನರಲ್ಲಿ ನಂಬಿಕೆ ಹುಟ್ಟಿಸಬಲ್ಲ ಪ್ರಭಾವಿ ನಾಯಕರಾಗಿರಲಿಲ್ಲ. ಹೆಚ್ಚೆಚ್ಚು ವ್ಯಕ್ತಿಗತವಾಗುವ ಅಧ್ಯಕ್ಷೀಯ ಚುನಾವಣೆಯಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆಯೆಂಬುದು ಸರ್ವವಿದಿತ. ಇದಲ್ಲದೆ ವಿರೋಧ ಪಕ್ಷಗಳ ಕೂಟ ಬದಲಿ ನೀತಿ, ಸಮಸ್ಯೆಗಳಿಗೆ ಪರಿಹಾರ ಮಂಡಿಸುವಲ್ಲಿ ಸೋತವು ಎಂದು ಕಮ್ಯುನಿಸ್ಟ್ ಪಕ್ಷ ಹೇಳಿದೆ. ದೇಶವನ್ನು ದುರ್ಬಲಗೊಳಿಸುತ್ತಿರುವ, ರಾಷ್ಟ್ರದ ಭದ್ರತೆಗೆ ಮಾರಕವಾಗಿರುವ ಕುರ್ದೀಶ್ ಅಲ್ಪಸಂಖ್ಯಾತರನ್ನು ಮತ್ತು ಸಿರಿಯನ್ ನಿರಾಶ್ರಿ ತರನ್ನು ವಿರೋಧ ಪಕ್ಷಗಳು ಬೆಂಬಲಿಸುತ್ತಿವೆ ಎಂಬ ಅಪಪ್ರಚಾರ ಸಹ ವಿರೋಧ ಪಕ್ಷಗಳ ಬೆಂಬಲವನ್ನು ಕುಗ್ಗಿಸಿವೆ. ಇದಲ್ಲದೆ ಮೇಲೆ ವಿವರಿಸಿದ ಎರ್ಡೋಗಾನ್ ಮತ್ತು ಅವರ ಎಕೆಪಿ ಪಕ್ಷದ ದೀರ್ಘಕಾಲೀನ ವಿಶಿಷ್ಟ 'ಧಾರ್ಮಿಕ ರಾಷ್ಟ್ರವಾದಿ' ರಾಜಕಾರಣದ ನೆಲೆಯ ಮೂಲಕ ಅದು ಐದನೇ ಬಾರಿ ಅಧಿಕಾರಕ್ಕೆ ಬಂದಿದೆ ಎನ್ನಬಹುದು.

ಜಾಗತಿಕ ಮುತ್ಸದಿ

ಇದಲ್ಲದೆ ಎರ್ಡೋಗಾನ್ ತುರ್ಕಿಯ 'ರಾಷ್ಟ್ರ ಹೆಮ್ಮೆ' ಎತ್ತಿ ಹಿಡಿಯುವ ಜಾಗತಿಕ ಮುತ್ಸದಿ ತಾನು ಎಂದು ಬಿಂಬಿಸಿಕೊಂಡಿದ್ದೂ ಕಾರಣವಾಗಿದೆ. ಇತ್ತೀಚಿನ ಉಕ್ರೇನ್ ಯುದ್ಧದ ಆರಂಭದಲ್ಲಿ ಗೋಧಿಯ ಜಾಗತಿಕ ಒಳಿತಿಗಾಗಿ ತುರ್ತು ರಫ್ತಿಗೆ ಮಧ್ಯಸ್ತಿಕೆ ವಹಿಸಿದ್ದು, ಶಾಂತಿ ಮಾತುಕತೆಗೂ ಪ್ರಯತ್ನಿಸಿದ್ದು; ಸ್ವೀಡನ್ ಫಿನ್ ಲ್ಯಾಂಡ್ ಗಳ ನಾಟೋದ ಸದಸ್ಯತ್ವಕ್ಕೆ ಷರತ್ತುಗಳನ್ನು ಹಾಕಿದ್ದು; ನಾಟೋ ಸದಸ್ಯ ದೇಶವಾಗಿಯೂ ಮಿಲಿಟರಿ ಉಪಕರಣಗಳ ಸರಕು–ಸೇವೆಗಳ ಖರೀದಿ, ಹೂಡಿಕೆಗೆ ಆಹ್ವಾನ ಗಳ ಕುರಿತು ರಶ್ಯಾದ ಜತೆ ಸಂಬಂಧ; ತುರ್ಕಿಯಲ್ಲಿ ಸೆಕ್ಯುಲರ್–ಪ್ರಜಾಪ್ರಭುತ್ವದ ಮೇಲಿನ ಪಾಶ್ಚಿಮಾತ್ಯ ದಾಳಿ ತನ್ನ ಸ್ವತಂತ್ರ ವಿದೇಶಾಂಗ ನೀತಿಯಿಂದಾಗಿ ಮತ್ತು ಅದನ್ನು ತಾನು ಲೆಕ್ಕಿಸುವುದಿಲ್ಲ ಎಂಬ ಪೋಸು – ಇತ್ಯಾದಿಗಳ ಮೂಲಕ ಇದು ಸಾಧ್ಯವಾಗಿದೆ.

ಎರ್ಡೋಗಾನ್ ಪುನರಾಯ್ಕೆ 'ಚುನಾವಣಾ ಅಧಿಕಾರಶಾಹಿ'ಯ ಸಫಲ ಮಾದರಿಯಾಗಿ ಜಗತ್ತಿನಾದ್ಯಂತ ಪ್ರಗತಿಪರ ಶಕ್ತಿಗಳಿಗೆ ಆತಂಕ ಹುಟ್ಟಿಸುವಂಥದ್ದೇ. ಭಾರತದ ಮೋದಿ/ಬಿಜೆಪಿಯ ಮತ್ತು ಎರ್ಡೋಗಾನ್/ಎಕೆಪಿಯ ರಾಜಕಾರಣದ ಕಣ್ಣಿಗೆ ಹೊಡೆಯುವ ಹಲವು ಸಾಮ್ಯತೆಗಳ ಬೆಳಕಿನಲ್ಲಿ ಇದನ್ನು ಹೆಚ್ಚು ಆಳವಾಗಿ ವಿಶ್ಲೇಷಿಸುವ ಅಗತ್ಯವಿದೆ. ಹಲವು ಪ್ರಮುಖ ವ್ಯತ್ಯಾಸಗಳಿದ್ದರೂ ಅವು ಮೋದಿ/ಬಿಜೆಪಿ ಯ ರಾಜಕಾರಣವನ್ನು ಇನ್ನಷ್ಟು ಅಫಾಯಕಾರಿಯಾಗಿಸುವಂಥವು.

NEW No. MAG(3)/NPP/205/2021-2022
JANASHAKTHI KANNADA VARA PATRIKE JUNE 12-18, 2023 Price: Rs. 10/- Date of Publication: 9 JUNE 2023 RNI No. KARKAN /2006/17926 Posted on 13-06-2023
Posted at BG PSO, BG - 560026 **Posted at Periodical Rate** - Rs. 2

ಎಲ್ಲಾ ಮನೆಗಳು ಮತ್ತು ಸರ್ಕಾರಿ ಕಚೇರಿಗಳಿಗೆ ಬ್ರಾಡ್‌ಬ್ಯಾಂಡ್ ಇಂಟರ್ನೆಟ್ ಸೌಲಭ್ಯಗಳನ್ನು ಒದಗಿಸುವ

ಕೆ–ಫೋನ್: ಕೇರಳದ ಹೊಸ ಚರಿತ್ರೆ

ಕೇರಳ ಫೈಬರ್ ಆಪ್ಟಿಕಲ್ ನೆಟ್‌ವರ್ಕ್, ಅಥವಾ ಕೆ–ಫೋನ್, ಕೇರಳದ ಎಲ್ಲಾ ಮನೆಗಳು ಮತ್ತು ಸರ್ಕಾರಿ ಕಚೇರಿಗಳಿಗೆ ಬ್ರಾಡ್‌ಬ್ಯಾಂಡ್ ಇಂಟರ್ನೆಟ್ ಸೌಲಭ್ಯಗಳನ್ನು ಒದಗಿಸುವ ಯೋಜನೆ. ಏಕ್ಸುರಂಟಿಜ ಮೂಲಕ ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ಸುಮಾರು 20 ಲಕ್ಷ ಕುಟುಂಬಗಳಿಗೆ ಅತಿವೇಗದ ಇಂಟರ್ನೆಟ್ ಸೌಲಭ್ಯವನ್ನು ಉಚಿತವಾಗಿ ಮತ್ತು ಇತರರಿಗೆ ಮಧ್ಯಮ ವೆಚ್ಚದಲ್ಲಿ ನೀಡಲಾಗುತ್ತದೆ.

ಕೆ–ಫೋನ್ ಯೋಜನೆಯ ಭಾಗವಾಗಿ ಮೂಲಭೂತ ಸೇವೆಗಳನ್ನು ಒದಗಿಸಲು ಕೇರಳ ಈಗಾಗಲೇ ವರ್ಗ 1 ಪರವಾನಗಿಯನ್ನು ಪಡೆದುಕೊಂಡಿದೆ. ಮತ್ತು ಅಧಿಕೃತವಾಗಿ ಇಂಟರ್ನೆಟ್ ಸೇವೆಗಳನ್ನು ಒದಗಿಸಲು ಇಂಟರ್ನೆಟ್ ಸೇವಾ ಪೂರೈಕೆದಾರ (ISP) ವರ್ಗ ಇಂಟಿಗ್ರೇಟೆಡ್ ಪರವಾನಗಿಯನ್ನು ಪಡೆದುಕೊಂಡಿದೆ. ಪ್ರಸ್ತುತ 17,412 ಸರ್ಕಾರಿ ಸಂಸ್ಥೆಗಳಿಗೆ ಕೆ–ಫೋನ್ ಸಂಪರ್ಕವನ್ನು ಒದಗಿಸಲಾಗಿದೆ. 9,000 ಕ್ಕೂ ಹೆಚ್ಚು ಮನೆಗಳಿಗೆ ಸಂಪರ್ಕವನ್ನು ಒದಗಿಸಲು ತಂತಿಗಳನ್ನು ಅಳವಡಿಸಲಾಗಿದೆ. 2,105 ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಕೆ–ಫೋನ್ ಸಂಪರ್ಕದೊಂದಿಗೆ ಒದಗಿಸಲಾದ ಎಲ್ಲಾ ಕಚೇರಿಗಳು ಮತ್ತು ಮನೆಗಳು ಈಗಾಗಲೇ ಇಂಟರ್ನೆಟ್ ಸೇವೆಗಳನ್ನು ಹೊಂದಿವೆ.

ಕೆ–ಫೋನ್‌ನ ಅಧಿಕೃತ ಬಿಡುಗಡೆಯು ಇಲ್ಲಿ ನಡೆಯುತ್ತದೆ. ಕೇರಳದ ಎಲ್ಲಾ ಮನೆಗಳು ಮತ್ತು ಸರ್ಕಾರಿ ಕಚೇರಿಗಳಿಗೆ ಶೀಘ್ರದಲ್ಲೇ ಬ್ರಾಡ್‌ಬ್ಯಾಂಡ್ ಸಂಪರ್ಕ ಮತ್ತು ಇಂಟರ್ನೆಟ್ ಸೇವೆಗಳ ಭರವಸೆ ನೀಡಲಾಗಿದೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಇಂಟರ್ನೆಟ್ ನಿರ್ಬಂಧಗಳನ್ನು ಹೊಂದಿದೆ. ಕಳೆದ ಹತ್ತು ವರ್ಷಗಳಲ್ಲಿ ಭಾರತದಲ್ಲಿ 700 ಕ್ಕೂ ಹೆಚ್ಚು ಇಂಟರ್ನೆಟ್ ಬ್ಲ್ಯಾಕ್‌ಔಟ್‌ಗಳು ಸಂಭವಿಸಿವೆ. ಇಂತಹ ದೇಶದಲ್ಲಿಯೇ ರಾಜ್ಯ ಸರ್ಕಾರವೊಂದು ಎಲ್ಲರಿಗೂ ಇಂಟರ್‌ನೆಟ್ ಲಭ್ಯವಾಗುವಂತೆ ಮಾಡುವ ಮಹತ್ತರವಾದ ಕಾರ್ಯ ನಡೆಸುತ್ತಿದೆ. ಆ ಅರ್ಥದಲ್ಲಿ, ಕೆ–ಫೋನ್ ಯೋಜನೆಯು ಕೇರಳ ಸರ್ಕಾರದ ಮತ್ತು ನಮ್ಮ ದೇಶದ ಜನಪ್ರಿಯ ಪರ್ಯಾಯ ನೀತಿಗಳಿಗೆ ಮತ್ತೊಂದು ಉದಾಹರಣೆಯಾಗುತ್ತಿದೆ.

ಕೇರಳದ ನೈಜ ಕಥೆ

ಕೋವಿಡ್ ನಂತರದ ಯುಗದಲ್ಲಿ ಹೊಸ ಕೆಲಸದ ಸಂಸ್ಕೃತಿ ಹೊರಹೊಮ್ಮುತ್ತಿದೆ. ಮನೆಯಿಂದ ಕೆಲಸ ಮಾಡುವುದು ಮತ್ತು ಮನೆಯ ಹತ್ತಿರ ಕೆಲಸ ಮಾಡುವುದು ಹೆಚ್ಚುತ್ತಿದೆ. ಯುವಕರು ಪ್ರಯೋಜನ ಪಡೆಯಬೇಕಾದರೆ ದೇಶದ ಎಲ್ಲೆಡೆ ಉತ್ತಮ ಇಂಟರ್ನೆಟ್ ಸೇವೆಗಳು ಲಭ್ಯವಾಗಬೇಕು. ಅದಕ್ಕೆ ಕೆ–ಫೋನ್ ಯೋಜನೆಯೇ ಪರಿಹಾರ. ವಾಸಿಸಲು ಅತ್ಯುತ್ತಮ ಸ್ಥಳವೆಂದು ಪರಿಗಣಿಸಲ್ಪಟ್ಟಿರುವ ಕೇರಳದ ಅನೇಕ ಪ್ರವಾಸಿಗರು ಕೇರಳದಲ್ಲಿ ನೆಲೆಸಲು ಮತ್ತು ಕೆಲಸ ಮಾಡಲು ಬಯಸುತ್ತಾರೆ. ಅಂತಹ ಜನರನ್ನು ಆಕರ್ಷಿಸುವ ಮೂಲಕ, ಕೆ–ಫೋನ್ ಕೇರಳದ ಆರ್ಥಿಕ ವಲಯದಲ್ಲಿ ದೊಡ್ಡ ಚಲನೆಯನ್ನು ಮಾಡಬಹುದು. ಅದೇ ಸಮಯದಲ್ಲಿ, ಬೆಟ್ಟ ಪ್ರದೇಶಗಳಿಗೆ ಸಂಪರ್ಕವನ್ನು ಖಾತ್ರಿಪಡಿಸುವ ಮೂಲಕ, ಯಾರೂ ಹಿಂದುಳಿದಿಲ್ಲ ಮತ್ತು ಎಲ್ಲರೂ ಈ ಅಧಿಕೃತ ಕೇರಳ ಕಥೆಯ ಭಾಗವಾಗಿದ್ದಾರೆ ಎಂದು ಕೇರಳವು ಖಚಿತಪಡಿಸಿಕೊಳ್ಳುತ್ತಿದೆ. ಬದಲಾಗುತ್ತಿರುವ ಜಗತ್ತನ್ನು ಮುಂದುವರಿಸಲು ಜಾಗತಿಕ ಇಂಟರ್ನೆಟ್ ಪ್ರವೇಶ ಅತ್ಯಗತ್ಯ. ಆದ್ದರಿಂದ, ಕೆ–ಫೋನ್ ಮೂಲಕ, ಎಡರಂಗ ಸರ್ಕಾರ ಕೇರಳವನ್ನು ಜ್ಞಾನ ಆರ್ಥಿಕತೆ ಮತ್ತು ನಾವೀನ್ಯತೆ ಸಮಾಜವಾಗಿ ಪರಿವರ್ತಿಸಲು ಮೂಲಸೌಕರ್ಯವನ್ನು ಸಿದ್ಧಪಡಿಸುತ್ತಿದೆ.

ಆ ಮೂಲಕ ಇಡೀ ಕೇರಳವನ್ನು 'ಜಾಗತಿಕ ಮಾಹಿತಿ'ಯ ಹಾದಿಯಲ್ಲಿ ಜೋಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಇದು ಜಾಗತಿಕ ಆಯಾಮಗಳೊಂದಿಗೆ ಹೊಸ ಕೇರಳ ವಾಸ್ತುಶೈಲಿಗೆ ಅಡಿಪಾಯವನ್ನು ಹಾಕುತ್ತದೆ. ಟೆಲಿಕಾಂ ಉದ್ಯಮದಲ್ಲಿನ ಕಾರ್ಪೊರೇಟ್ ಶಕ್ತಿಗಳ



ವಿರುದ್ಧ ಜನಪ್ರಿಯ ಪರ್ಯಾಯ ಮಾದರಿಯಾಗಿ ಕೆ–ಫೋನ್ ಯೋಜನೆಯನ್ನು ನಾವು ನೋಡಬೇಕು. ಖಾಸಗಿ ವಲಯದ ಕೇಬಲ್ ನೆಟ್‌ವರ್ಕ್‌ಗಳು ಮತ್ತು ಮೊಬೈಲ್ ಸೇವಾ ಪೂರೈಕೆದಾರರ ಶೋಷಣೆಯಿಂದ ಜನರನ್ನು ಮುಕ್ತಗೊಳಿಸುವ ಬದ್ಧತೆಯೊಂದಿಗೆ ಕೇರಳ ಸರ್ಕಾರ ಕೆ–ಫೋನ್ ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಕೆಫೋನ್ ಸೇವೆಗಳನ್ನು ಕೇರಳದಾದ್ಯಂತ ನಗರ ಮತ್ತು ಗ್ರಾಮಗಳಲ್ಲಿ ಹೆಚ್ಚಿನ ವೇಗ ಮತ್ತು ಉತ್ತಮ ಗುಣಮಟ್ಟದೊಂದಿಗೆ ಒದಗಿಸಲು ಮುಂದಾಗಿದೆ.

ಕೇರಳ ಪರ್ಯಾಯ ಮಾರ್ಗಗಳು

ಖಾಸಗಿ ಕಂಪನಿಗಳು ಈ ವಲಯದಲ್ಲಿರುವಾಗ, ರಾಜ್ಯ ಸರ್ಕಾರ ಏಕೆ ಇಂತಹ ಯೋಜನೆ ಜಾರಿಗೊಳಿಸುತ್ತಿದೆ ಎಂದು ಕೇಳುವವರೂ ಇದ್ದಾರೆ. ಏಕಸ್ವಾಮ್ಯ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಾರ್ವಜನಿಕ ವಲಯದಲ್ಲಿ ಏನೂ ಇರಬಾರದು ಮತ್ತು ಎಲ್ಲವನ್ನೂ ಖಾಸಗಿಯವರೇ ಮಾಡಬೇಕು ಎಂದು ಯೋಚಿಸುವವರು ಇಂತಹ ಪ್ರಶ್ನೆಯನ್ನುಕೇಳುವುದು ಸಹಜವಾಗಿದೆ. ಈ ರೀತಿ ಯೋಚಿಸುವವರಿಗೆ ಕೇರಳದ ಪರ್ಯಾಯವು ಸುಲಭವಾಗಿ ಅರ್ಥವಾಗುವುದಿಲ್ಲ. KIFFI ಎಂದು ಕರೆಯಲಾಗುವ ಕೇರಳ ಮೂಲಸೌಕರ್ಯ ಹೂಡಿಕೆ ನಿಧಿಯನ್ನು ಹಗಲುಗನಸು ಎಂದು ಕೀಳಾಗಿ ಕಾಣಲು ಯತ್ನಿಸಿದವರೂ ಇವರೇ. ಕೇರಳದಲ್ಲಿ ಕಳೆದ 7 ವರ್ಷಗಳಲ್ಲಿ ಕಿಫ್ಬಿ ಮೂಲಕ ರೂ. 80,000 ಕೋಟಿ ಮೌಲ್ಯದ ಮೂಲಸೌಕರ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಕೆ–ಫೋನ್ ಯೋಜನೆಗೆ ನಿಧಿಸಂಗ್ರಹವನ್ನು ಮಿಜಿಜು ಮೂಲಕ ಮಾಡಲಾಗುತ್ತದೆ. ಅಭಿವೃದ್ಧಿ ಚಟುವಟಿಕೆಗಳ ಲಾಭವನ್ನು ಕೇರಳದ ಎಲ್ಲ ಭಾಗದ ಜನರಿಗೆ ತಲುಪಿಸಲು ಕಿಫಿಗೆ ಸಾಧ್ಯವಾಗಿದೆ.

ಡಿಜಿಟಲ್ ವಿಭಜನೆಯ ವಿರುದ್ಧ...

ಇಡೀ ದೇಶಕ್ಕೆ ಅನುಕೂಲವಾಗುವಂತೆ ಕೆ–ಫೋನ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ವಿದ್ಯುತ್ ಮತ್ತು ಐಟಿ ಕ್ಷೇತ್ರಗಳನ್ನು ಸಂಯೋಜಿಸುವ ಮೂಲಕ ಜಾರಿಗೆ ಬರಲಿರುವ ಈ ಯೋಜನೆಯು ಕೇರಳದಲ್ಲಿ ಡಿಜಿಟಲ್ ವಿಭಜನೆಯಾಗದಂತೆ ಖಾತ್ರಿಪಡಿಸುವಲ್ಲಿ ಸಾಕಷ್ಟು ಸಹಾಯ ಮಾಡುತ್ತದೆ. ಇದು ಕೇರಳವು ಪ್ರಸ್ತಾಪಿಸಿದ ಪರ್ಯಾಯವಾಗಿದೆ. ಎಲ್ಲರಿಗೂ ಇಂಟರ್ನೆಟ್ ಎಂಬ ಕಲ್ಪನೆಯೊಂದಿಗೆ ಕೆ ಫೋನ್ ಅನ್ನು ಪರಿಚಯಿಸಿದಾಗ, ಜನರಿಗೆ ಇಂಟರ್ನೆಟ್ ಏಕೆ? ಎಂದು ಕೇಳಿದವರೂ ಇದ್ದಾರೆ. ಎಲ್ಲರ ಬಳಿಯೂ ಫೋನ್ ಇಲ್ಲವೇ? ಮೊದಲ ನೋಟದಲ್ಲಿ, ಇದು ನಿಜ ಅನಿಸಬಹುದು. ಹೆಚ್ಚಿನ ಜನರು ಸ್ಮಾರ್ಟ್ ಫೋನ್‌ಗಳನ್ನು ಹೊಂದಿದ್ದಾರೆ. ಆದರೆ ಡಿಜಿಟಲ್ ವಿಭಜನೆಯ ತೀವ್ರತೆಯನ್ನು ಅರ್ಥಮಾಡಿಕೊಳ್ಳಲು, ನಾವು ಕೆಲವು ಅಂಕಿಅಂಶಗಳನ್ನು ಆಳವಾಗಿ ಪರಿಶೀಲಿಸಬೇಕಾಗಿದೆ. ನಮ್ಮ ದೇಶದಲ್ಲಿ ಶೇಕಡಾ 50 ಕ್ಕಿಂತ ಕಡಿಮೆ ಜನರು ಇಂಟರ್ನೆಟ್ ಬಳಸುತ್ತಾರೆ. 33 ರಷ್ಟು ಮಹಿಳೆಯರು ಮಾತ್ರ ಇಂಟರ್ನೆಟ್ ಸೌಲಭ್ಯವನ್ನು ಹೊಂದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇದು ಕೇವಲ ಶೇ. 25ರಷ್ಟಿದೆ. ಬುಡಕಟ್ಟು ಜನರು ಉಳಿದ ಪ್ರದೇಶಗಳಿಗಿಂತ 30 ಪ್ರತಿಶತ ಕಡಿಮೆ ಇಂಟರ್ನೆಟ್ ಪ್ರವೇಶವನ್ನು ಹೊಂದಿದ್ದಾರೆ. ಡಿಜಿಟಲ್ ವಿಭಜನೆಯು ತುಂಬಾ ಆಳವಾಗಿರುವ ದೇಶದಲ್ಲಿ, ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವು ಅದನ್ನು ಕಡಿಮೆ ಮಾಡಲು ಪ್ರಯತ್ನಗಳನ್ನು ಮಾಡುತ್ತಿದೆ. ಆದಿವಾಸಿಗಳು ಸೇರಿದಂತೆ ಅಂಚಿನಲ್ಲಿರುವ ಜನರನ್ನು ಸಮಾಜದ ಒಂದು ಭಾಗವಾಗಿ ನೋಡುವ ಯಾರೂ ಇದನ್ನು ಪ್ರಶ್ನಿಸುವುದಿಲ್ಲ.

ಸಾಮೂಹಿಕ ಕ್ರಿಯೆಯ ಮೂಲಕ ಶಾಲಾ ಶಿಕ್ಷಣ ವಲಯದಲ್ಲಿನ ಡಿಜಿಟಲ್ ವಿಭಜನೆಯನ್ನು ಕೇರಳ ನಿವಾರಿಸಿದೆ. ಆಗಲೂ, ಮಕ್ಕಳಿಗೆ ಇಂತಹ ಸೌಲಭ್ಯಗಳು ಬೇಕೇ ಎಂದು ಕೇಳಿದವರೂ ಇದ್ದಾರೆ. ಅಂದು ಇವರು ಹೇಳಿದಂತೆ ಕೇರಳ ಸರ್ಕಾರ ನಡೆದುಕೊಂಡಿದ್ದರೆ, ಇಂದು ಎಲ್ಲಾ ಮಕ್ಕಳಿಗೂ ಡಿಜಿಟಲ್ ಶಿಕ್ಷಣವನ್ನು ಸಾಧ್ಯವಾಗಿಸಿದ ಭಾರತದ ಏಕೈಕ ರಾಜ್ಯ ಕೇರಳವಾಗುತ್ತಿರಲಿಲ್ಲ. ಇದಲ್ಲದೆ, ಕೋವಿಡ್ ಹಂತದಲ್ಲಿ ದೇಶದ ಹಲವು ಭಾಗಗಳಲ್ಲಿ ಒಂದು ವಿಭಾಗದ ಮಕ್ಕಳು ಶಿಕ್ಷಣವನ್ನು ತೊರೆದಿದ್ದಾರೆ. ಅದು ಕೇರಳದಲ್ಲಿ ಆಗಲಿಲ್ಲ.

ಸಾಮಾನ್ಯರಿಗೆ ಉತ್ತಮ ಸೌಲಭ್ಯಗಳು ಸಿಗಬೇಕಿದೆ

ಸಮಗ್ರ ಅಭಿವೃದ್ಧಿಯ ಗುರಿಯನ್ನು ಹೊಂದಿರುವ ಯಾವುದೇ ಯೋಜನೆಯನ್ನು ವಿರೋಧಿಸುವವರೂ ಇದ್ದಾರೆ. ಜನಸಾಮಾನ್ಯರಿಗೆ ಇಂಟರ್ನೆಟ್ ಮತ್ತು ಸಾಮಾನ್ಯ ಜನರಿಗೆ ಸುಧಾರಿತ ಸಾರಿಗೆ ಸೌಲಭ್ಯ ಏಕೆ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಇಡೀ ಜಗತ್ತು ಬದಲಾಗುತ್ತಿದೆ. ಗುಡಿ ಕೈಗಾರಿಕೆಗಳು ತಮ್ಮ ವಸ್ತುಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ಈ ಯುಗದಲ್ಲೂ, ನಾಗರಿಕತೆಯ ಇತರ ಕಲ್ಪನೆಗಳೊಂದಿಗೆ ನಡೆಯುವ ಈ ಜನರು ದೇಶವನ್ನು ಹಿಡಿದಿಟ್ಟುಕೊಳ್ಳುತ್ತಿದ್ದಾರೆ. ಅವರ ದೃಷ್ಟಿಯಲ್ಲಿ ಅಭಿವೃದ್ಧಿ ಎನ್ನುವುದು ಕೆಲವೇ ವರ್ಗಗಳಿಗೆ ಮಾತ್ರ. ಆದರೆ ಕೇರಳದ ಅಭಿವೃದ್ಧಿ ಎಲ್ಲ ಜನರಿಗೂ ಆಗಿದೆ. ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್ ಸರ್ಕಾರ ಇಂಟರ್‌ನೆಟ್ ಜನರ ಹಕ್ಕು ಎಂದು ಘೋಷಿಸಿ ಎಲ್ಲರಿಗೂ ಇಂಟರ್ನೆಟ್ ಸೇವೆಯನ್ನು ಒದಗಿಸುತ್ತಿದೆ. ಈ ಪ್ರಗತಿಯು ಜನರ ದೈನಂದಿನ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ ಎಂಬುದು ಖಚಿತ. ಆ ದೃಷ್ಟಿಕೋನದಲ್ಲಿಯೇ ಎಲ್ಲಾ ಸಾರ್ವಜನಿಕ ಸೇವೆಗಳು ಆನ್‌ಲೈನ್‌ನಲ್ಲಿ ಲಭ್ಯವಿದೆ. ಈಗಾಗಲೇ 900 ಕ್ಕೂ ಹೆಚ್ಚು ಸೇವೆಗಳು ಮೊಬೈಲ್ ಅಪ್ಲಿಕೇಶನ್ ಅಥವಾ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಜನರಿಗೆ ಲಭ್ಯವಿದೆ. ಅದೇ ಸಮಯದಲ್ಲಿ, ಸರ್ಕಾರಿ ಸೇವೆಗಳನ್ನು ನಿರ್ಗತಿಕರು ಮತ್ತು ಅಂಗವಿಕಲರ ಮನೆ ಬಾಗಿಲಿಗೆ ತರಲಾಗುತ್ತಿದೆ.

ಡಿಜಿಟಲ್ ಸೈನ್ಸ್ ಪಾರ್ಕ್

ಸಾರ್ವಜನಿಕ ಸ್ಥಳಗಳಲ್ಲಿ ಉಚಿತ ವೈ–ಫೈ, ಮನೆ ಮತ್ತು ಕಚೇರಿಗಳಲ್ಲಿ ಬ್ರಾಡ್‌ಬ್ಯಾಂಡ್ ಸಂಪರ್ಕ, ಹೈ ಸ್ಪೀಡ್ ಇಂಟರ್ನೆಟ್ ಮತ್ತು ಆನ್‌ಲೈನ್ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುವ ಮೂಲಕ ಕೇರಳವನ್ನು ಜ್ಞಾನ ಆರ್ಥಿಕತೆ ಮತ್ತು ನಾವೀನ್ಯತೆ ಸಮಾಜವಾಗಿ ಪರಿವರ್ತಿಸಲಾಗಿದೆ. ಜೊತೆಗೆ, ಐಟಿ ಕ್ಷೇತ್ರವು

ಪುಟ 14 ಕ್ಕೆ

2016 ರಿಂದ, ಕೇರಳದ ಐಟಿ ಕ್ಷೇತ್ರವು ಸಾಟಿಯಿಲ್ಲದ ಪ್ರಗತಿಯನ್ನು ಸಾಧಿಸಿದೆ. 2016ರಲ್ಲಿ ಕೇರಳದ ಸರ್ಕಾರಿ ಐಟಿ ಪಾರ್ಕ್‌ಗಳ ಮೂಲಕ ರಫ್ತು ರೂ. 9,753 ಕೋಟಿ. 2022ರ ವೇಳೆಗೆ ಇದು ರೂ.17,536 ಕೋಟಿಗೆ ಏರಿಕೆಯಾಗಲಿದೆ. ಇದು ಆರು ವರ್ಷಗಳಲ್ಲಿ ಸುಮಾರು ದ್ವಿಗುಣವಾಗಿದೆ. 2016ರಲ್ಲಿ ಸರ್ಕಾರಿ ಐಟಿ ಪಾರ್ಕ್‌ಗಳಲ್ಲಿ ಕಂಪನಿಗಳ ಸಂಖ್ಯೆ 640 ಇದ್ದುದು, 2022ರಲ್ಲಿ 1,106ಕ್ಕೆ ಏರಿಕೆಯಾಗಿದೆ. ಐಟಿ ಉದ್ಯೋಗಿಗಳ ಸಂಖ್ಯೆಯಲ್ಲಿಯೂ ಭಾರಿ ಏರಿಕೆಯಾಗಿದೆ. 2016ರಲ್ಲಿ ಐಟಿ ಪಾರ್ಕ್‌ಗಳಲ್ಲಿ 78,068 ಮಂದಿ ಕೆಲಸ ಮಾಡಿದ್ದರೆ, ಇಂದು ಅದು 1,35,288ಕ್ಕೆ ಏರಿಕೆಯಾಗಿದೆ. 2021–22 ರ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, 2022–23 ರಲ್ಲಿ IT ರಫ್ತುಗಳಲ್ಲಿ 1,274 ಕೋಟಿ ರೂಪಾಯಿಗಳ ಬೆಳವಣಿಗೆಯನ್ನು ಕೇರಳ ಸಾಧಿಸಿದೆ. ಕೇರಳದಲ್ಲಿ ಕಳೆದ ಒಂದೂವರೆ ವರ್ಷಗಳಲ್ಲಿ 78 ಕಂಪನಿಗಳು 2,68,301 ಚದರ ಅಡಿ ವಿಸ್ತೀರ್ಣದ ಹೊಸ ಐಟಿ ಕಚೇರಿಗಳನ್ನು ತೆರೆದಿವೆ.

ನಮ್ಮ ದೇಶದಲ್ಲಿ ಶೇಕಡಾ 50 ಕ್ಕಿಂತ ಕಡಿಮೆ ಜನರು ಇಂಟರ್ನೆಟ್ ಬಳಸುತ್ತಾರೆ. 33 ರಷ್ಟು ಮಹಿಳೆಯರು ಮಾತ್ರ ಇಂಟರ್ನೆಟ್ ಸೌಲಭ್ಯವನ್ನು ಹೊಂದಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇದು ಕೇವಲ ಶೇ. 25ರಷ್ಟಿದೆ. ಬುಡಕಟ್ಟು ಜನರು ಉಳಿದ ಪ್ರದೇಶಗಳಿಗಿಂತ 30 ಪ್ರತಿಶತ ಕಡಿಮೆ ಇಂಟರ್ನೆಟ್ ಪ್ರವೇಶವನ್ನು ಹೊಂದಿದ್ದಾರೆ. ಡಿಜಿಟಲ್ ವಿಭಜನೆಯು ತುಂಬಾ ಆಳವಾಗಿರುವ ದೇಶದಲ್ಲಿ, ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವು ಅದನ್ನು ಕಡಿಮೆ ಮಾಡಲು ಪ್ರಯತ್ನಗಳನ್ನು ಮಾಡುತ್ತಿದೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**